بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّى عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN
KANNADA

ಸಂಚಿಕೆ: 48

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

10 ಡಿಸೆಂಬರ್ 2020, 10 ಫತಹ್ 1399 ಹಿಜರಿ ಶಮ್ಸಿ,
24 ರಬಿಉಸ್ಸಾನಿ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَمَنْ اَحْسَنُ دِيْنًا مِّمَّنْ اَسْلَمَ وَجْهَهٗ لِلّٰهِ
وَهُوَ مُحْسِنٌ وَّاتَّبَعَ مِلَّةَ اِبْرٰهِيْمَ حَنِيْفًا ؕ
وَاتَّخَذَ اللّٰهُ اِبْرٰهِيْمَ خَلِيْلًا (النساء:126)

*(ಅನ್ನಿಸಾಅ್:126)*

ಅಂದರೆ: ಅಲ್ಲಾಹನಿಗೆ ಸಂಪೂರ್ಣವಾಗಿ ಶರಣಾಗಿ, ಸತ್ಕರ್ಮ ಮಾಡುತ್ತಾ, ಋಜು ಮಾನವನಾದ ಇಬ್‌ರಾಹೀಮರ ಧರ್ಮವನ್ನು ಅನುಸರಿಸುವವನಿಗಿಂತ ಉತ್ತಮನಾದ ಧರ್ಮವಿಶ್ವಾಸಿ ಯಾರು?ಇಬ್‌ರಾಹೀಮರನ್ನು ಅಲ್ಲಾಹನು ತನ್ನ ಆಪ್ತಮಿತ್ರನಾಗಿ ಮಾಡಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ಅಮ್ರಾ ಬಿನ್ತ್ ತಗ್‌ಲವ್(ರ) ರವರ ಕುರಿತು ರಸೂಲುಲ್ಲಾಹ್(ಸ) ರವರು ತೋರಿದ ಸಂತೋಷ ಮತ್ತು ಪ್ರಶಂಸೆ

ಹಝ್‌ರತ್ ಅಮ್ರಾ ಬಿನ್ತ್ ತಗ್‌ಲಬ್ ವರದಿ ಮಾಡುತ್ತಾರೆ:

ರಸೂಲುಲ್ಲಾಹ್(ಸ) ರವರ ಬಳಿ ಒಂದಿಷ್ಟು ಸಂಪತ್ತು ಅಥವಾ ಯಾವುದೋ ವಸ್ತು ತರಲಾಯಿತು. ಅವರು(ಸ) ಅದನ್ನು ಹಂಚಿದರು. ಕೆಲವರಿಗೆ ಕೊಟ್ಟರು ಮತ್ತು ಕೆಲವರಿಗೆ ಕೊಡಲಿಲ್ಲ. ಆಗ ಅವರಿಗೆ ಸುದ್ದಿ ತಲುಪಿತು. ಯಾರಿಗೆ ಏನೂ ದೊರೆಯಲಿಲ್ಲವೋ ಅವರು ಅಸಮಾಧಾನಗೊಂಡಿರುತ್ತಾರೆ ಎಂದು. ಆಗ ಅವರು ಅಲ್ಲಾಹನನ್ನು ಸ್ತುತಿಸಿದರು. ಮತ್ತು ಅವನನ್ನು ಕೊಂಡಾಡಿದರು. ಮತ್ತು ಹೇಳಿದರು. “ಅಮ್ಮಾ ಬಅದ್” ಅಲ್ಲಾಹನಾಣೇ! ನಾನು ಒಬ್ಬನಿಗೆ ನೀಡಿದರೆ (ಇನ್ನೊಬ್ಬನನ್ನು ಬಿಟ್ಟು ಬಿಡುತ್ತೇನೆ. ಆದರೆ ನಾನು ಯಾರನ್ನು ಬಿಟ್ಟಿರುತ್ತೇನೋ ಅವನು ಸಹ ನನಗೆ ತುಂಬ ಪ್ರಿಯನಾಗಿರುತ್ತಾನೆ. ನಾನು ನೀಡಿದವರಿಗಿಂತ ನಿಮ್ಮನ್ನು ಅಂದರೆ ಬಿಟ್ಟವರನ್ನು ಪ್ರೀತಿಸುತ್ತೇನೆ. ಆದರೆ ನಾನು ಕೆಲವರಿಗೆ ಅಸಮಾಧಾನ ತಾಳ್ಮೆಯಿಲ್ಲದ್ದನ್ನು ಕಂಡು ನೀಡಿರುತ್ತೇನೆ. ಕೆಲ ಜನರು ತೃಪ್ತಿ ಮತ್ತು ಒಳಿತನ್ನು ಹೊಂದಿರುತ್ತಾರೆ. ಅವರಿಗೆ ನಾನು ಅಲ್ಲಾಹನ ತೃಪ್ತರಲ್ಲಿ ಪರಿಗಣಿಸಿರುತ್ತೇನೆ. ಅವರಲ್ಲೊಬ್ಬರು ಅಮ್ರಾ ಬಿನ್ ತಗ್‌ಲಬ್ ಆಗಿದ್ದಾರೆ. (ಅವರು ಹೇಳುತ್ತಿದ್ದರು) ಅಲ್ಲಾಹನ ಅಭಯ, ನಾನು ರಸೂಲುಲ್ಲಾಹ್(ಸ) ರವರ ರಾಜಿಯ ಹೊರತು ಕೆಂಪು ಒಂಟೆ ಲಭಿಸಿದರೂ ಇಷ್ಟಪಡುವುದಿಲ್ಲ. **(ಸಹೀ ಬುಖಾರಿ, ಸಂಪುಟ–2, ಕಿತಾಬುಲ್ ಜುಮ್‌ಅ, ಮುದ್ರಣ 2006, ಖಾದಿಯಾನ್)**

**ಯಾವ ವೈದ್ಯನಾದರೂ ಸರಿ ಕೇವಲ ಔಷಧಿಯಿಂದ ಕಂಡಿತ ಗುಣಪಡಿಸಿಯೇ ಸಿದ್ಧ ಎಂದು ವಾದಿಸಲು ಸಾಧ್ಯವಿಲ್ಲ. ಹೀಗಿರುತಿದ್ದರೆ ಯಾರು ಸಾಯುತ್ತಿರಲಿಲ್ಲ.**
**ವೈದ್ಯರಿಗೆ ಮತ್ತು ಚಿಕಿತ್ಸಕರಿಗೆ ದೇವರ ಭಯ ಭಕ್ತಿ ಅನಿವಾರ್ಯವಾಗಿದೆ. ಅವರು ಔಷಧಿಯೂ ಕೊಡಬೇಕು ಮತ್ತು ಪ್ರಾರ್ಥನೆಯೂ ಮಾಡಬೇಕು. ಏಕಾಂತದಲ್ಲಿ ಪ್ರಾರ್ಥನೆ ಮಾಡಬೇಕು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಲೌಕಿಕ ಸಾಧನೆಗಳ ಬಳಕೆ ನಿಷೇಧವಲ್ಲ.

ಲೌಕಿಕ ಸಾಧನಗಳ ಬಳಕೆಗೆ ಶರೀಅತ್ (ಧರ್ಮಸಂಹಿತೆ) ನಿಷೇಧ ಹೇರಲಿಲ್ಲ. ಒಬ್ಬರು ರಸೂಲುಲ್ಲಾಹ್(ಸ) ರವರಿಗೆ ಕೇಳಿದರು. ನಾವು ಔಷಧಿ ಮಾಡಬೇಕೆ? ಅವರು ಹೇಳಿದರು. ಔಷಧಿ ಅವಶ್ಯವಾಗಿ ತೆಗೆದುಕೊಳ್ಳಿರಿ. ಔಷಧಿ ಇಲ್ಲದ ಯಾವ ರೋಗವು ಇಲ್ಲ. ಆದರೆ ಈ ವಿಷಯ ಕೂಡ ಸತ್ಯವಾಗಿದೆ. ಯಾವುದೇ ವೇದನು ಅಥವಾ ವೈದ್ಯನು ನಾನು ಔಷಧಿಯಿಂದಲೇ ಗುಣಪಡಿಸುತ್ತೇವೆ ಎಂದು ದಾವೆ ಮಾಡಲು ಸಾಧ್ಯವಿಲ್ಲ. ಹೀಗಿರುತ್ತಿದ್ದರೆ ಮತ್ತೆ ಎಲ್ಲರೂ ಸಾಯುವುದಾದರೂ ಏಕೆ. ಆದ್ದರಿಂದ ವೇದರಿಗೆ ಮತ್ತು ವೈದ್ಯರು, ಭಯ ಭಕ್ತಿ ಹೊಂದಬೇಕಾಗಿದೆ. ಅವರು ಔಷಧಿಯೂ ಮಾಡಬೇಕು. ಹಾಗೂ ಪ್ರಾರ್ಥನೆಯೂ ಮಾಡಬೇಕು. ಏಕಾಂತದಲ್ಲಿ ಪ್ರಾರ್ಥನೆ ಮಾಡಬೇಕು. ಯಾರು ಗರ್ವ ಪಟ್ಟರೋ ದೇವರು ಅವರನ್ನೇ ಪರಾಜಿತರನ್ನಾಗಿ ಮಾಡಿದ್ದಾನೆ. ಬರೆಯಲಾಗಿದೆ. ಜಾಲಿನೂಸನಿಗೆ ಬೇದಿ ರೋಗ ಗುಣಪಡಿಸುವ ಕುರಿತು ಬಹಳ ಪಾಂಡಿತ್ಯವಿತ್ತು. ಆದರೆ ಅಲ್ಲಾಹನ ಮಹಾತ್ಮೆಯನ್ನು ನೋಡಿ ಅವನು ಅದೇ ರೋಗದಿಂದ ತೀರಿ ಹೋದನು. ಅದೇ ರೀತಿ ಕೆಲವು ವೈದ್ಯರು ಪರಾಜಿತಗೊಂಡು ಮತ್ತು ನಿರಾಶೆ ಹೊಂದಿ ಈ ಲೋಕವನ್ನು ತ್ಯಜಿಸಿದರು.

ಅಲ್ಲಾಹನ ಮೇಲೆ ಪರಿಪೂರ್ಣ ವಿಶ್ವಾಸ ಹೊಂದಬೇಕಾಗಿದೆ. ಅದುದರಿಂದ ನನ್ನ ಉದ್ದೇಶವೇನೆಂದರೆ ಅಲ್ಲಾಹನು ಅವರ ದಾವೆಗಳ ವಾಸ್ತವವನ್ನು ಬಹಿರಂಗಪಡಿಸಿದ್ದಾನೆ. ಮತ್ತು ಅನಗತ್ಯ ಗರ್ವ ಪಡುವವರ ಗರ್ವ ಭಂಗಗೊಳಿಸಿದ್ದಾನೆ. ಯಾರು ಯಾವ ವಿಷಯದಲ್ಲಿ ದಾವೆ ಮಾಡಿದರೋ ಅವರಿಗೆ ಅದರಲ್ಲಿಯೇ ಸೋಲುಣಿಸಿದನು. ಅದರಿಂದ ತಿಳಿದುಬರುವುದೇನೆಂದರೆ ಜಂಭಕೊಚ್ಚಿಕೊಳ್ಳಬಾರದು ನನ್ನ ತಂದೆ ಮಹಾಶಯರೂ ಸುಪ್ರಸಿದ್ಧ ವೈದ್ಯರಾಗಿದ್ದರು. ಐವತ್ತು ವರ್ಷಗಳ ಅನುಭವವಿತ್ತು. ಅವರು ಹೇಳುತ್ತಿದ್ದರು. ವೈದ್ಯಕೀಯ ದಾವೆ ಏನೂ ಇಲ್ಲ. ವಾಸ್ತವ ಇದೇ ಆಗಿದೆ.

ಅಲ್ಲಾಹನ ಕಾರ್ಯಕ್ಷೇತ್ರ ಎಂದೂ ಮುಕ್ತವಾಗಿರುತ್ತದೆ. ಅಲ್ಲಾಹನೆಡೆ ಗಮನ ಹರಿಸುವವರು ಭಾಗ್ಯವಂತರು. ಆಪತ್ತಿನಲ್ಲಿ ಗರ್ವಪಡಬಾರದು. ಬಹುದೇವ ವಿಶ್ವಾಸಿಯಾಗಿರಬಾರದು. ತಕ್ಷಣದಿಂದಾಗಿಯೇ ಲಘು ರೋಗಗಳು ಸಹ ಅಪಾಯದ ಮಟ್ಟಿಗೆ ತಲುಪುತ್ತವೆ. ಒಮ್ಮೊಮ್ಮೆ ಹೃದಯ ಚಿಕಿತ್ಸೆ ಮಾಡು ಮಾಡುತ್ತಲೇ ಮಿದುಳಿನ ಸಮಸ್ಯೆ ಎದುರಾಗುತ್ತವೆ. ಒಮ್ಮೊಮ್ಮೆ ಶೀತದ ಚಿಕಿತ್ಸೆ ಮಾಡುತ್ತ ಉಷ್ಣಾಂಶ ಹೆಚ್ಚಾಗಿ ಬಿಡುತ್ತದೆ. ಯಾರು ತಾನೆ ಅದರ ಮೇಲೆ ಹಿಡಿತ ಸಾಧಿಸಲು ಸಾಧ್ಯ. ಆದುದರಿಂದ ಅಲ್ಲಾಹನ ಮೇಲೆ ಭರವಸೆ ಹೊಂದಬೇಕು. ಈ ದೈಹಿಕ ಮತ್ತು ದೈವಿಕ ಆಪತ್ತುಗಳನ್ನು ಯಾರಿಂದಲೂ ಊಹಿಸಲು ಸಾಧ್ಯ. ರೋಗಗಳನ್ನು ಸಹ ನಿರೀಕ್ಷಿಸಲು ಸಾಧ್ಯವಿಲ್ಲ. ಬರೆಯಲಾಗಿದೆ. ಬರೀ ಕಣ್ಣಿಗೆ ಸಬಂಧಪಟ್ಟದ್ದು ಮೂರು ಸಾವಿರ ರೋಗಗಳಿವೆ. ಕೆಲ ರೋಗಗಳು ಹೀಗಿರುತ್ತವೆ. ಇನ್ನು ವೈದ್ಯನು ಔಷಧಿ ಬರೆದಿರುವುದಿಲ್ಲ ರೋಗಿಯೂ ತೀರಿಕೊಳ್ಳುತ್ತಾನೆ. ಆದುದರಿಂದ ಅಲ್ಲಾಹನಿಗೆ ಮಾತ್ರ ಶರಣು ಹೊಂದಬೇಕಾಗುತ್ತದೆ.

**(ಮಲ್ಫೂಝಾತ್, ಸಂಪುಟ 1, ಪುಟ–232, ಮುದ್ರಣ ಖಾದಿಯನ್ 2018)**

**ಮುಸಲ್ಮಾನರು ಸಾವಿರ ವರ್ಷದಷ್ಟು ಕಾಲ ಕ್ರೈಸ್ತ ದೇಶಗಳ ಮೇಲೆ ಆಡಳಿತ ನಡೆಸಿದರೂ ಅವರ ಮುಖಂಡರನ್ನು ಅಗೌರವ ತೋರಲಿಲ್ಲ ಅದೇ ರೀತಿ ಎರಡು ಮುರು ನೂರು ವರ್ಷ ಆಡಳಿತ ಹೊಂದಿ ಕ್ರೈಸ್ತ ಆಡಳಿತಗಾರರು ಗರ್ವ ಪಡದೇ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು. ಕನಿಷ್ಠ ಮುಸಲ್ಮಾನರ ಆ ಉಪಕಾರವಾದರೂ ನೆನಪಿಡಬಹುದಿತ್ತು. ಅವರು ಏಸುವಿನ ವಿರುದ್ಧ ಎಂದೂ ಆಕ್ರಮಣಕಾರಿ ನಿತಿ ಅನುಸರಿಸಲಿಲ್ಲ.**

**ವಲಹುಮ್ ಫೀಹಾ ಅಝ್‌ವಾಜುಂ ಮುತಹರತುನ್**(ಅಲ್–ಬಖರ:26) ವ್ಯಾಖ್ಯಾನದಲ್ಲಿ ಹಝ್‌ರತ್ ಮುಸ್ಲಿಹ್ ಮೌಊದ್(ಅ) ಹೇಳುತ್ತಾರೆ. ವಲಹುಮ್ ಫೀಹಾ ಅಝ‌ನ್‌ವಾಜುಂ ಮುತಹರತುನ್ ಅಂದರೆ ಅಲ್ಲಿ ಅವರಿಗೆ ಪರಿಶುದ್ಧವಾದ ಸಂಗಾತಿಗಳು ಅಥವಾ ಪರಿಶುದ್ಧ ಪತ್ನಿಯರು ಅಥವಾ ಪರಿಶುದ್ಧ ಪತಿಯರು ದೊರೆಯುವುವು. ಪರಿಶುದ್ಧ ಸಂಗಾತಿ ಅರ್ಥದಲ್ಲಿ ಯಾರಿಗೆ ಏನು ಆಸಕ್ತಿ ಇರಲು ಸಾಧ್ಯ. ಏಕೆಂದರೆ ಆ ನೆಲೆಯಲ್ಲಿ ಆಗುವ ಅರ್ಥವೇನೆಂದರೆ ಯಾವ ರೀತಿ ಸ್ವರ್ಗದಲ್ಲಿ ನೀಡಲಾಗುವ ಆಹಾರ ಪರಸ್ಪರರರಿಗೆ ಸಹಾಯಕವಾಗುವುದೇ ಅದೇ ರೀತಿ ಅದರ ನಿವಾಸಿಗಳಿಗೆ ಪರಸ್ಪರ ಆಧ್ಯಾತ್ಮಿಕ ಪ್ರಗತಿಯಲ್ಲಿ ಸಹಾಯಕವಾಗುವುದು ಅಂದರೆ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ✿ شَرُّ السُّمُوْمِ عَدَاوَۃُ الصُّلَحَاءِ

**ನಾವು "ತವಫ್ಫಿ" ಪದದ ಬಗ್ಗೆ ಒಂದು ಸಾವಿರ ರೂಪಾಯಿಗಳ ಬಹುಮಾನದ ಪಂಥಹ್ವಾನ ಯಾರೇ ಆದರೂ ಈ ಪದದ ಅರ್ಥ ಆತ್ಮಹರಣ ಅಥವಾ ಮೃತ್ಯು ಹೊರತಾಗಿ ಬಳಕೆ ಆಗಿದ್ದನ್ನು ಸಾಬೀತು ಮಾಡಿ ತೋರಿಸಬೇಕು.**

ಈ ಗಂಭಿರ ಪಂಥಹ್ವಾನ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಮುಸ್ಲಿಮ್ ಪಂಡಿತರಿಗೆ (ಉಲಮಾಅ) ತಮ್ಮ ಹಲವು ಗ್ರಂಥಗಳಲ್ಲಿ ಪ್ರಸ್ತುತಪಡಿಸಿದ್ದಾರೆ. ಅದರಲ್ಲೊಂದು **ಹಮಾಮತುಲ್ ಬುಶ್ರಾ** ಗ್ರಂಥವೂ ಒಂದಾಗಿದೆ. ಈ ಗ್ರಂಥವನ್ನು ಅವರು ಅರಬಿಯರಲ್ಲಿ ಪ್ರಚಾರಕ್ಕಾಗಿ ಬರೆದಿರುವರು. ಆದುದರಿಂದ ಅವರ ಈ ಪಂಥಹ್ವಾನ ಅರಬರು, ಅರಬಿಯೇತರ ಎಲ್ಲಾ ಪಂಡಿತರಿಗೆ ಆಗಿತ್ತು. ಪ್ರಪ್ರಥಮವಾಗಿ ಈ ಪಂಥಹ್ವಾನ ತನ್ನ ಗ್ರಂಥವಾದ ಇಝಾಲೇ ಅವ್ಹಾಮ್‌ನಲ್ಲಿ ಪ್ರಸ್ತುತಪಡಿಸಿದ್ದರು. ಅದು 1891 ರ ಗ್ರಂಥ ಆಗಿದೆ. ಇದಾದ ಎರಡು ವರ್ಷಗಳ ನಂತರ ಈ ಪಂಥಹ್ವಾನ ಅವರು ತನ್ನ ಗ್ರಂಥ "ಹಮಾಮತುಲ್ ಬುಶ್ರಾನಲ್ಲಿ ಕೊಟ್ಟಿದ್ದಾರೆ. ಅದು ಅವರು 1893 ರಲ್ಲಿ ಬರೆದ ಗ್ರಂಥವಾಗಿದೆ. ಮೂರನೆಯ ಸಲ ಈ ಪಂಥಹ್ವಾನ ಅವರು ತನ್ನ ಗ್ರಂಥ **"ತುರಿಯಾಖಿಲ್ ಖುಲೂಬ್"** ಗ್ರಂಥದಲ್ಲಿ ಕೊಟ್ಟಿದ್ದಾರೆ. ಅದು ಅವರು 1899 ರಲ್ಲಿ ಬರೆದ ಗ್ರಂಥವಾಗಿದೆ. ಅಂತೆಯೇ ನಾಲ್ಕನೆಯ ಸಲ ಈ ಪಂಥಹ್ವಾನ ಅವರು ತನ್ನ ಗ್ರಂಥ ಬರಾಈನ್ ಅಹ್ಮದಿಯಾ ಭಾಗ 5 ರಲ್ಲಿ ಪ್ರಸ್ತುತಪಡಿಸಿದರು. ಅದು ಅವರು 1905 ರ ಅಂತಿಮ ದಿನಗಳಲ್ಲಿ ಪ್ರಾರಂಭಿಸಿದರು. ಇವೆಲ್ಲಾ ಪಂಥಹ್ವಾನಗಳ ವಿವರ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಪದಗಳಲ್ಲಿ ಪ್ರಸ್ತುತಪಡಿಸುವೆವು.

ಈ ಕೆಳಗೆ ನಾವು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಅಧ್ಯಾಪನೆಗಳ ಪ್ರಕಾಶದಲ್ಲಿ ಮಸೀಹರ ನಿಧನಗೊಂಡ ಕುರಿತು ಕೆಲವು ಪುರಾವೆಗಳ ಸಹಿತ ಸಂಕ್ಷಿಪ್ತವಾಗಿ ವಿವರಿಸುತ್ತೇವೆ. ನಮ್ಮ ಪ್ರೀತಿಯ ನೇತಾರರಾದ ಮಾಲೀಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಸ್ವಯಂ ಇಹಲೋಕ ತ್ಯಜಿಸಿ ಪ್ರವಾದಿಗಳ ಅಗಲಿಕೆಯು ಸುನ್ನತ್ ಆಗಿದೆ ಎಂದು ಸಾಬೀತುಪಡಿಸಿದ್ದಾರೆ. ಒಂದು ಹದೀಸಿನ ಪ್ರಕಾರ ಒಂದು ಲಕ್ಷ ನಲವತ್ತು ಸಾವಿರ ಪ್ರವಾದಿಗಳು ಲೋಕದಲ್ಲಿ ಆಗಮಿಸಿದರು. ಆದರೆ ಅವರೆಲ್ಲರೂ ತಮ್ಮ ಜೀವನಪೂರ್ತಿಗೊಳಿಸಿ ನಿಧನಗೊಂಡರು. ಆದುದರಿಂದ ನಿಸ್ಸಂಶಯವಾಗಿಯೂ ಹಝ್ರತ್ ಈಸಾ(ಅ) ರವರು ಸಹ ಮರಣ ಹೊಂದಿದ್ದಾರೆ. ಶ್ರೀನಗರದ ಖಾನಿಯಾರ ಎಂಬ ಓಣಿಯಲ್ಲಿ ಅವರ ಸಮಾಧಿ ಇದೆ. ಹಝ್ರತ್ ಈಸಾ(ಅ) ರವರ ಕುರಿತು ಆಕಾಶದಲ್ಲಿ ಅವರು ಜೀವಂತವಾಗಿದ್ದಾರೆ ಎಂಬ ವಿಶ್ವಾಸ, ಇಸ್ಲಾಮಿಕ್ ವಿಶ್ವಾಸವಲ್ಲ. ಪವಿತ್ರ ಖುರಆನ್‌ನ 200 ವಚನಗಳಿಂದ ಅವರ ಮೃತ್ಯು ಸಾಬೀತಾಗುತ್ತದೆ. ಸೂರಃ ಆಲಿ ಇಮ್ರಾನ್ ವಚನ 56 ರಲ್ಲಿ ಅಲ್ಲಾಹನು ಹೇಳಿದನು. **ಯಾ ಈಸಾ ಇನ್ನಿ ಮುತವಫ್ಫೀಕ ವ ರಾಫಿಯುಕ ಇಲೈಯ್ಯ ವ ಮುತಹ್ಹಿರುಕ ಮಿನಲ್ಲಝೀನ ಕಫರು ವ ಜಾಇಲುಲ್ಲಝೀನತ್ತಬಊಕ ಫೌಕಲ್ಲಝೀನ ಕಫರು ಇಲಾ ಯೌಮಿಲ್ ಖಿಯಾಮತಿ** (ಆಲಿ ಇಮ್ರಾನ್–56). "ಎಲೈ ಈಸಾ, ನಾನು ನಿನ್ನನ್ನು (ಪ್ರಕೃತಿ ಸಹಜವಾದ ರೀತಿಯಲ್ಲಿ) ಮೃತಪಡಿಸುವೆನು. ಮತ್ತು ನನ್ನೆಡೆಗೆ ಎತ್ತುವೆನು. ಅವಿಶ್ವಾಸಿಗಳ ಆರೋಪಗಳಿಂದ (ನಿನ್ನನ್ನು) ಪರಿಶುದ್ಧಗೊಳಿಸುವೆನು ಮತ್ತು ನಿನ್ನನ್ನು ಅನುಸರಿಸಿದವರಿಗೆ ಪುನರುತ್ಥಾನ ದಿನದವರೆಗೆ, (ನಿನ್ನನ್ನು) ನಿರಾಕರಿಸಿದವರಿಗಿಂತ ಉನ್ನತ ಸ್ಥಾನವನ್ನು ನೀಡುವೆನು." ಇಲ್ಲಿ **"ಮುತವಫ್ಫೀಕ"** ಅರ್ಥ ಮರಣ ಮತ್ತು ಆತ್ಮಹರಣ ಎಂಬುದಾಗಿದೆ. ಆದರೆ ಅಹ್ಮದಿಯೇತರ ಉಲಮಾಗಳು ಹಝ್ರತ್ ಈಸಾ(ಅ) ರವರ ಜೀವಂತಿಕೆ ಸಾಬೀತುಪಡಿಸಲು ಮತ್ತು ಅವರನ್ನು ಆಕಾಶಕ್ಕೆ ತಲುಪಿಸಲು **'ಮುತವಫ್ಫೀಕ'** ಪದದ ಅರ್ಥವು ದೇಹ ಆರೋಹಣ ಮತ್ತು ಆಕಾಶದಲ್ಲಿ ಎತ್ತಲ್ಪಟ್ಟರು ಎಂದು ಗ್ರಹಿಸುತ್ತಾರೆ. ಯೋಚಿಸುವ ವಿಷಯವಾಗಿದೆ. ಒಂದು ವೇಳೆ **ಮುತವಫ್ಫೀಕ** ವಾಗ್ದಾನ ಪೂರ್ಣಗೊಳ್ಳದಿದ್ದರೆ ಮುಂದಿನ ಮೂರು ವಾಗ್ದಾನಗಳು ಸಹ ಪೂರ್ಣಗೊಳ್ಳದು. ಇಂತಹ ವಿಶ್ವಾಸ ಅಲ್ಲಾಹನ ಇಂಗಿತದಂತಾಗುವುದಿಲ್ಲ ಬದಲು ವಿರುದ್ಧವಾಗಿರುತ್ತದೆ ಮತ್ತು ಓರ್ವ ಪ್ರವಾದಿಯ ಘನತೆಗೆ ಕುಂದುಂಟು ಮಾಡುವ ಹೊರತು ಬೇರೇನಿಲ್ಲ. ಹಝ್ರುರತ್ ಇಮಾಮ್ ಬುಖಾರಿ(ರ) ಅವರು ಹಝ್ರತ್ ಇಬ್ನು ಅಬ್ಬಾಸ್(ರ) ರವರ ವರದಿ ಪ್ರಕಾರ **"ಮುತವಫ್ಫೀಕ"** ಅರ್ಥ **"ಮುಮೀತುಕ"** ಎಂದಾಗಿದೆ. ಅಂದರೆ ನಾನು ನಿನಗೆ ಮೃತಪಡಿಸುವೆನು ಎಂದಾಗಿದೆ. ಇಮಾಮ್ ಬುಖಾರಿ(ರ) ಅವರು ಮತ್ತು ಯಾವ ಸಹಾಬಿಯಿಂದಲೂ ವಿವರಿಸಿಲ್ಲ ತಿಬ್ರಾಣಿ ಮತ್ತು ಮುಸ್ತದರಕ್‌ನಲ್ಲಿ ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ಅರುಹಿದರು. ಓರ್ವ ಪ್ರವಾದಿಯು ತನ್ನ ಹಿಂದಿನ ಪ್ರವಾದಿಯ ಅರ್ಧ ವಯಸ್ಸನ್ನು ಪಡೆಯುತ್ತಾನೆ. ಜಿಬ್ರೀಲ್ ನನಗೆ ತಿಳಿಸಿದರು. ಈಸಾ ಒಂದು ನೂರು ಇಪ್ಪತ್ತು ವರ್ಷಗಳ ವಯಸ್ಸಿನವರೆಗೆ ಜೀವಂತರಾಗಿದ್ದರು. ಆದುದರಿಂದ ನನ್ನ ಭಾವನೆ ಏನೆಂದರೆ ನಾನು 60 ವರ್ಷ ಸಮೀಪದಲ್ಲಿ ಇಹಲೋಕ ತ್ಯಜಿಸುವೆನು. ಮಜ್‌ಮಅಲ್ ಬಹಾರ್‌ನ ಲೇಖಕರು ಹಝ್ರತ್ ಈಸಾ(ಅ) ರವರ ಕುರಿತು ಇಮಾಮ್ ಮಾಲಿಕ್ (ರಹ) ರವರ ಅಭಿಪ್ರಾಯ ಹೀಗೆ ವಿವರಿಸುತ್ತಾರೆ. **"ವ ಖಾಲಾ ಮಾಲಿಕುಮ್ ಮಾತ"** ಅಂದರೆ ಇಮಾಮ್ ಮಾಲೀಕ್ ರವರ ಅಭಿಪ್ರಾಯವು ಹಝ್ರತ್ ಈಸಾ(ಅ) ರವರು ಮೃತಪಟ್ಟರು ಎಂಬುದಾಗಿತ್ತು. ಇಮಾಮ್ ಇಬ್ನುಲ್ ಖಯ್ಯುಮ್ (ರಹ) ತನ್ನ ಗ್ರಂಥ "ಮದಾರಿಜುಸ್ ಸಾಲಿಕೀನ್" ನಲ್ಲಿ ಈ ಹದೀಸು ವಿವರಿಸಿದ್ದಾರೆ. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಒಂದು ವೇಳೆ ಹಝ್ರತ್ ಮೂಸಾ ಮತ್ತು ಈಸಾ ಬದುಕಿರುತ್ತಿದ್ದರೆ ಅವರಿಗೆ ನನ್ನನ್ನು ಅನುಸರಿಸದೇ ಬೇರೆ ದಾರಿಯಿರುತ್ತಿರಲಿಲ್ಲ. ಸಯ್ಯದನಾ ಹಜ್‌ರತ್ ಮುಹಮ್ಮದ್ ಮುಸ್ತಫಾ(ಸ) ರವರು ಮೇಹರಾಜಿನ ರಾತ್ರಿ ಹಝ್ರತ್ ಈಸಾ(ಅ) ರವರನ್ನು ಹಝ್ರತ್ ಯಹ್ಯಾ(ಅ) ರವರೊಂದಿಗೆ ಆಕಾಶದ ಎರಡನೆಯ ಅಂತಸ್ತಿನಲ್ಲಿ ಕಂಡಿದ್ದರು. ಆದುದರಿಂದ ಒಂದು ವೇಳೆ ಹಝ್ರತ್ ಈಸಾ(ಅ) ಜೀವಂತವಾಗಿರುತ್ತಿದ್ದರೆ ಅವರಿಗೆ ಮೃತ ಹೊಂದಿದವರ ಜೊತೆಯಲ್ಲಿ ಕಾಣಲು ಹೇಗೆ ಸಾಧ್ಯವಾಯಿತು? ಇಮಾಮ್ ಇಬ್ನು ಹಝುಮ್ ಅವರ ಬಗ್ಗೆ ತಿಳಿಯದವರು ಯಾರಿದ್ದಾರೆ, ಅವರು ಮಸೀಹರು ಮೃತಪಟ್ಟಿರುವವರು ಎಂದು ನಂಬಿದ್ದರು. ಫಾಝಿಲ್, ಮುಹದ್ದಿಸ್, ಮುಫಸ್ಸಿರೀನ್ ಎಲ್ಲರೂ ಮಸೀಹರು ಮೃತಪಟ್ಟಿರುವವರು ಎಂದೇ ನಂಬಿದವರಾಗಿದ್ದಾರೆ. ಅಂತೆಯೇ ಸೂಫಿಗಳ ಸರದಾರರಾದ ಶೇಖ್ ಮುಹಿಯುದ್ದೀನ್ ಇಬ್ನು ಅರಬಿಯರು ಸಹ ಮಸೀಹರ ಮೃತ್ಯು ಒಪ್ಪಿದವರಾಗಿದ್ದರು.

ಮುಸಲ್ಮಾನರ ಮಸೀಹರ ಜೀವಂತಿಕೆಯ ವಿಶ್ವಾಸವು ಕ್ರೈಸ್ತ ಪಾದರಿಗಳಿಗೆ ಇಸ್ಲಾಮಿನ ಮೇಲೆ ಆಕ್ರಮಣ ಮಾಡಲು ಪ್ರಬಲ ಅಸ್ತ್ರ ಒದಗಿಸಿಕೊಟ್ಟಂತಾಯಿತು. ಕ್ರೈಸ್ತ ಪಾದರಿಗಳು ಮುಸಲ್ಮಾನರಿಗೆ ಮುಕ್ತವಾಗಿ ಪಂಥಹ್ವಾನ ನೀಡುತ್ತಿದ್ದರು. ನೀವೇ ಹೇಳಿ ಶ್ರೇಷ್ಠರು ಯಾರು, ಈಸಾ ಅವರು ಎರಡು ಸಾವಿರ ವರ್ಷಗಳಿಂದ ಆಕಾಶದಲ್ಲಿ ಜೀವಂತರಾಗಿ ಕುಳಿತುಕೊಂಡಿದ್ದಾರೆ ಮತ್ತು ಲೋಕದ ಸುಧಾರಣೆಗೋಸ್ಕರ ಅವರೇ ಬರುವರು ಅಥವಾ ಮುಹಮ್ಮದರು ಮೃತಪಟ್ಟು ನೆಲದಲ್ಲಿ ಸಮಾಧಿಯಾಗಿರುವವರು? ಮುಸ್ಲಿಮ್ ಉಲಮಾಅಗಳ ಬಳಿ ಅದಕ್ಕೆ ಯಾವ ಉತ್ತರವೂ ಇರಲಿಲ್ಲ. ಈ ಅನಿಸ್ಲಾಮಿಕ ವಿಶ್ವಾಸವು ಇಸ್ಲಾಮ್ ಧರ್ಮವನ್ನು ತುಂಬ ಘಾಸಿಗೊಳಿಸಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

**"ಈಸಾರ ಜಿವಂತಿಕೆಯ ತಪ್ಪು ವಿಶ್ವಾಸ ಇಸ್ಲಾಮನ್ನು ನುಂಗಬಯಸುತ್ತದೆ."**

ಹಝ್ರತ್ ಈಸ(ಅ) ರವರ ಜೀವಂತಿಕೆಯ ವಿಶ್ವಾಸವು ಪ್ರಾರಂಭದಲ್ಲಿ ಕೇವಲ ಒಂದು ತಪ್ಪು ಎಂದು ಎಣಿಸುವಂತಿತ್ತು. ಆದರೆ ಇಂದು ಆ ತಪ್ಪು ಹೆಚ್ಚಾಗಿ ಬಿಟ್ಟಿದೆ. ಅದು ಇಸ್ಲಾಮನ್ನು ನುಂಗಬಯಸುತ್ತದೆ. ಪ್ರಾರಂಭಿಕ ಕಾಲದಲ್ಲಿ ಈ ತಪ್ಪಿನಿಂದ ಯಾರಿಗೂ ಅಷ್ಟೇನೂ ಹಾನಿಯ ಭಯವಿರಲಿಲ್ಲ. ಮತ್ತು ಅದೊಂದು ತಪ್ಪು ನಂಬಿಕೆ ಎಂದು ಎನಿಸುತ್ತಿತ್ತು. ಆದರೆ ಯಾವಾಗಿನಿಂದ ಕ್ರೈಸ್ತಮತ ಉದ್ಭವಗೊಂಡು ಮತ್ತು ಅವರು ಮಸೀಹರ ಜೀವಂತಿಕೆಯನ್ನು ಅವರ ದೇವರೂಪಕ್ಕೆ ಒಂದು ಪ್ರಬಲ ಸಾಕ್ಷಿ ಎಂದುಕೊಂಡರೋ ಆಗಿನಿಂದ ಇದು ಅತ್ಯಂತ ಅಪಾಯಕರ ವಿಷಯವಾಗಿ ಪರಿಣಮಿಸಿದೆ

(ಅಹ್ಮದಿ ಔರ್ ಗ್ಯರ್ ಅಹ್ಮದಿ ಮೆ ಫರ್ಕ್, ರೂಹಾನಿ ಖಝಾಈನ್, ಸಂಪುಟ–20, ಪುಟ–465)

ಈ ವಿಶ್ವಾಸ ಇಸ್ಲಾಮಿಗೋಸ್ಕರ ಅಸಂಖ್ಯಾತ ಪಿತೂರಿಗಳಿಗೆ ಕಾರಣವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಎಂತಹ ಅದ್ಭುತಕರ ಮಾತಾಗಿದೆ. ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ಹಝ್ರತ್ ಮಸೀಹರನ್ನು ಮೃತಪಟ್ಟಿರುವರು ಎಂದು ಸಾರಿದನು. ಆದರೆ ಈ ಜನರು ಇಂದಿಗೂ ಅವರನ್ನು ಜೀವಂತರು ಎಂದು ನಂಬಿ ಇಸ್ಲಾಮಿಗೋಸ್ಕರ ಸಾವಿರಾರು ಅಸಂಖ್ಯಾತ ಪಿತೂರಿಗಳಿಗೆ ದ್ವಾರವನ್ನು ತೆರೆದಿಟ್ಟಿದ್ದಾರೆ. ಮಸೀಹರನ್ನು ಆಕಾಶದಲ್ಲಿ **"ಹಯ್ಯು ವ ಖಯ್ಯಾಮ್"** (ಚಿರಂಜೀವಿ ಮತ್ತು ಸದಾ ನೆಲೆ ನಿಲ್ಲುವರು) ಎಂದು ಮತ್ತು ಪ್ರವಾದಿಗಳ ಸರದಾರ(ಸ) ರವರನ್ನು ಈ ಭೂಮಿಯಲ್ಲಿ ಶವವಾಗಿ ಹೂತಲ್ಪಟ್ಟರು ಎಂದು ನಂಬುತ್ತಾರೆ. (ಆಯಿನಾ ಕಮಾಲಾತ್ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ–5, ಪುಟ–42)

ಮಸೀಹ್ ಇಬ್ನು ಮರಿಯಮ್ ಅವರ ಮೃತಪಟ್ಟ ವಿಷಯ ಕುರಿತು ಹೆಚ್ಚು ಒತ್ತನ್ನು ನೀಡಿರಿ. ಮತ್ತು ಪ್ರಬಲ ಸಾಕ್ಷ್ಯಗಳೊಂದಿಗೆ ಕ್ರೈಸ್ತರನ್ನು ನಿರುತ್ತರರನ್ನಾಗಿ ಮಾಡಿರಿ. ಈ ವಾದದ ಮೂಲಕ ಮಾತ್ರ ನೀವು ವಿಜಯಿಯಾಗುವಿರಿ. ಮತ್ತು ನೀವು ಕ್ರೈಸ್ತ ಮತವನ್ನು ನೆಲದಿಂದ ಮಾಯಾವಾಗಿಸುವುದರಲ್ಲಿ ಸಫಲರಾಗುವಿರಿ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಓ ನನ್ನ ಬಂಧುಗಳೇ! ಇದೀಗ ನನ್ನ ಅಂತಿಮ ಉಪದೇಶವನ್ನು ಆಲಿಸಿರಿ ಮತ್ತು ಒಂದು ಮಾರ್ಮಿಕ ಮಾತನ್ನು ನಿಮಗೆ ಹೇಳುತ್ತೇನೆ. ಅದನ್ನು ಸರಿಯಾಗಿ ನೆನಪಿಡಿರಿ. ಕ್ರೈಸ್ತರಿಂದ ಎದುರಾಗುವ ಎಲ್ಲ ಚರ್ಚಾಕೂಟಗಳಲ್ಲಿ ಒಂದು ಗುರಿಯನ್ನು ಗ್ರಹಿಸಿಕೊಳ್ಳಿ ಮತ್ತು ಕ್ರೈಸ್ತರ ಮೇಲೆ ವಿಜಯ ಸಾಧಿಸಲು ಮಸೀಹ್ ಇಬ್ನು ಮರಿಯಮ್ ಮೃತಪಟ್ಟಿರುವನು ಎಂದು ಸಾಬೀತುಪಡಿಸಿರಿ. ಈ ಮಾತಿನಿಂದ ಮಾತ್ರ ನೀವು ವಿಜಯಿಯಾಗಿ ಕ್ರೈಸ್ತ ಮತವನ್ನು ಬುಡಸಹಿತ ಕಿತ್ತೊಗೆಯುವುದರಲ್ಲಿ ಸಫಲರಾಗುವಿರಿ. ಇದನ್ನು ಬಿಟ್ಟು ಬೇರೆ ಹಲವು ಜಗಳಗಳಲ್ಲಿ ಬಿದ್ದು ಸಮಯ ವ್ಯರ್ಥ ಮಾಡುವ ಅಗತ್ಯವಿಲ್ಲ. ಕೇವಲ ನೀವು ಮಸೀಹುಬ್ನು ಮರಿಯಮ್ ಮೃತಪಟ್ಟಿರುವವರು ಎಂಬ ಮಾತಿನ ಮೇಲೆ ಒತ್ತು ಕೊಡಿರಿ ಮತ್ತು

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಈ ವರ್ಷ ಅಹ್ಮದಿಯಾ ಜಮಾಅತಿಗೆ ತಹ್ರೀಕ್ ಜದೀದಿನ ಸಾಂಪತ್ತಿಕ ವ್ಯವಸ್ಥೆಯಲ್ಲಿ, 14.5 ಮಿಲಿಯನ್ ಎಂದರೆ, ಒಂದು ಕೋಟಿ, 45 ಲಕ್ಷ ಪೌಂಡಿನ ಧನತ್ಯಾಗ ಮಾಡಲು ತೌಫೀಕ್ ಲಭಿಸಿತು.ಈ ವಸೂಲಿ ಕಳೆದ ವರ್ಷಕ್ಕಿಂತ ಎಂಟು ಲಕ್ಷ 82 ಸಾವಿರ ಪೌಂಡಷ್ಟು ಅಧಿಕವಿದೆ.**

**ಅಲ್ಲಾಹನು ಹೇಳುತ್ತಾನೆ: ನನ್ನ ಗಮನ ಮತ್ತು ಸಂಪ್ರೀತಿಯನ್ನು ಗಳಿಸಲಿಕ್ಕಾಗಿ, ನಿಷ್ಠೆಯಿಂದ ನನ್ನ ಸಂಪ್ರೀತಿಗಾಗಿ ಖರ್ಚು ಮಾಡುವಾಗ, ನಿಮ್ಮ ಭಯವನ್ನು ಮತ್ತು ನಿಮ್ಮ ದುಃಖವನ್ನು ದೂರಮಾಡುವನು ಹಾಗೂ ನಿಮ್ಮ ಹೃದಯಗಳ ನೆಮ್ಮದಿಯ ಮಾರ್ಗಗಳನ್ನು ಉಂಟುಮಾಡಿ, ನಿಮಗೆ ನೆಮ್ಮದಿಯನ್ನು ನೀಡಿ ನಿಮ್ಮನ್ನು ನನ್ನ ಮಡಿಲಲ್ಲಿ ಇರಿಸುವನು ಎಂಬುದು ನನ್ನ ವಾಗ್ದಾನವಾಗಿದೆ.**

**ನವೆಂಬರ್ 1ಕ್ಕೆ ಶುರುವಾಗಿರುವ ತಹ್ರೀಕ್ ಜದೀದಿನ 87ನೇ ವರ್ಷದ ಘೋಷಣೆ**

**ತಮ್ಮ ಪತ್ನಿ ಮತ್ತು ಮಕ್ಕಳಿಗೆ ಸಿಗಬೇಕಾದ ಹಕ್ಕುಗಳು ನೀಡದಿರುವುದು, ಅವರ ಆವಶ್ಯಕತೆಗಳನ್ನು ಪೂರ್ತಿ ಮಾಡದಿರುವುದು ಸಹ ಪಾಪವಾಗಿದೆ**

**ಈ ವರ್ಷ ಲೋಕದ ಜಮಾಅತುಗಳಲ್ಲಿ ಮೊದಲ ಹತ್ತು ರಾಷ್ಟ್ರಗಳ ಸ್ಥಾನಗಳು ಇಂತಿವೆ ಜರ್ಮನಿ, ಬ್ರಟನ್, ಅಮೇರಿಕ, ಪಾಕಿಸ್ತಾನದ ಹೆಸರು ಸಹ ನಡುವೆ ಬರುತ್ತದೆ. ಅಮೇರಿಕಕ್ಕೆ ಮೂರನೇ ಸ್ಥಾನವಿದೆ. ಅನಂತರ ಕೆನಡ, ಮಿಡಲ್ ಈಸ್ಟಿನ ಒಂದು ದೇಶವಿದೆ, ಅನಂತರ ಭಾರತ, ಆಸ್ಟ್ರೇಲಿಯಾ, ಇಂಡೋನೇಶ್ಯ, ಘಾನ. ಅನಂತರ ಇನ್ನೊಂದು ಮಿಡಲ್ ಈಸ್ಟಿನ ಜಮಾಅತ್.**

**ತ್ಯಾಗದ ದೃಷ್ಟಿಯಲ್ಲಿ ಭಾರತದ ಹತ್ತು ಜಮಾಅತುಗಳ ಹೆಸರುಗಳು ಹೀಗಿವೆ: ಕೋಯಂಬತೂರಿಗೆ ಮೊದಲನೇ ಸ್ಥಾನವಿದೆ. ಅನಂತರ ಕರುಳಾಯಿ, ಖಾದಿಯಾನ್, ಪತ್ತಪಿರಿಯಂ, ಹೈದರಾಬಾದ್, ಕನ್ನೂರ್ ಟೌನ್, ಕೋಲ್ಕತ್ತ, ಕಾಲಿಕಟ್, ಬೆಂಗಳೂರು ಮತ್ತು ಮಾತೋಟಮ್.**

**ಪ್ರಸ್ತುತ ಪರಿಸ್ಥಿತಿಯಲ್ಲಿ ಇಸ್ಲಾಮ್ ಜಗತ್ತಿಗಾಗಿ ಹಾಗೂ ಮುಸ್ಲಿಮರಿಗಾಗಿಯೂ ಪ್ರಾರ್ಥನೆಗಳನ್ನು ಮಾಡುವ ಕೋರಿಕೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–11–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ -

اَلْحَمْدُ لِلّٰهِ رَبِّ الْعٰلَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ - إِيَّاكَ نَعْبُدُ وَإِيَّاكَ نَسْتَعِيْنُ -

اِهْدِنَا الصِّرَاطَ الْمُسْتَقِيْمَ - صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

اَلَّذِيْنَ يُنْفِقُوْنَ أَمْوَالَهُمْ بِاللَّيْلِ وَالنَّهَارِ سِرًّا وَّعَلَانِيَةً فَلَهُمْ أَجْرُهُمْ عِنْدَ رَبِّهِمْ وَلَا خَوْفٌ عَلَيْهِمْ وَلَا هُمْ يَحْزَنُوْنَ (البقرة:275)

**ಅಲ್ಲಧೀನ ಯುನ್‌ಫಿಖೂನ ಅಮ್‌ವಾಲಹುಮ್ ಬಿಲ್ಲೈಲಿ ವನ್ನಹಾರಿ ಸಿರ್‍ರನ್ ವ ಅಲಾನಿಯತನ್ ಫಲಹುಂ ಅಜ್‌ರುಹುಂ ಇಂದ ರಬ್ಬಿಹಿಂ ವಲಾ ಖೌ಼ಫುನ್ ಅಲೈಹಿಂ ವಲಾಹುಂ ಯಹ್‌ಝನೂನ್.**

ಅರ್ಥ: ಅಲ್ಲಾಹನ ಮಾರ್ಗದಲ್ಲಿ ಗೋಪ್ಯವಾಗಿಯೂ ಬಹಿರಂಗವಾಗಿಯೂ ರಾತ್ರಿಯಲ್ಲೂ ಹಗಲಿನಲ್ಲೂ ತಮ್ಮ ಧನವನ್ನು ವ್ಯಯಮಾಡುವವರಿಗೆ ಅವರ ಪ್ರಭುವಿನಿಂದ ಅವರ ಕೃತ್ಯಗಳ ಪ್ರತಿಫಲವಿದೆ. ಅವರಿಗೆ ಭಯವೇನೂ ಉಂಟಾಗದು; ಅವರು ದುಃಖಿತರೂ ಆಗಲಾರರು. (2:275)

ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಧನತ್ಯಾಗಗಳ ಕಡೆಗೆ ಗಮನಹರಿಸಿದ್ದಾನೆ. ಈ ವಚನದಲ್ಲೂ ಸತ್ಯವಿಶ್ವಾಸಿಗಳ ಈ ವಿಶೇಷತೆಯನ್ನು ಪ್ರಸ್ತಾಪಿಸುತ್ತಾ ಹೇಳಿರುವುದೇನೆಂದರೆ, ಅವರು ಅಲ್ಲಾಹನ ಮಾರ್ಗದಲ್ಲಿ ದಿನರಾತ್ರಿ ಖರ್ಚು ಮಾಡುತ್ತಾರೆ ಮಾತ್ರವಲ್ಲ ಅವರು ರಹಸ್ಯವಾಗಿಯೂ ಕೆಲವೊಮ್ಮೆ ತೋರಿಸಿಯೂ ಖರ್ಚು ಮಾಡುತ್ತಾರೆ. ಅಲ್ಲಾಹನ ಬಳಿಯಲ್ಲಿ ಈ ಉಭಯ ಮಾರ್ಗಗಳೂ ಸ್ವೀಕಾರ್ಯದ ಸ್ಥಾನವನ್ನು ಪಡೆದಿವೆ. ಏಕೆಂದರೆ, ಸತ್ಯವಿಶ್ವಾಸಿಗಳು ಅಲ್ಲಾಹನ ಮಾರ್ಗದಲ್ಲಿ, ಅಲ್ಲಾಹನ ಸಂಪ್ರೀತಿಯನ್ನು ಗಳಿಸುವ ಉದ್ದೇಶದಿಂದ ಖರ್ಚು ಮಾಡುತ್ತಾರೆಂದು ಅಲ್ಲಾಹನು ಮತ್ತೊಂದೆಡೆ ಹೇಳಿದ್ದಾನೆ. ಅವನು ಹೀಗೆ ಹೇಳಿದ್ದಾನೆ: **ವಮಾ ತುನ್‌ಫಿಖೂನ ಇಲ್ಲಬ್‌ತಿಘಾ಼ಅ ವಜ್‌ಹಿಲ್ಲಾಹ್.** ಎಂದರೆ, ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಅವರು ಖರ್ಚು ಮಾಡುತ್ತಾರೆ ಮತ್ತು ಅಲ್ಲಾಹನ ಸಂಪ್ರೀತಿಯ ಗಳಿಕೆಯ ಹೊರತು ಬೇರೆ ಯಾವುದಕ್ಕೂ ಎಂದಿಗೂ ಖರ್ಚು ಮಾಡುವುದಿಲ್ಲ, ಎಂದರೆ, ಅವರ ಉದ್ದೇಶವೇ ಅಲ್ಲಾಹನ ಸಂಪ್ರೀತಿಯಾಗಿರುತ್ತದೆ. ಒಟ್ಟಿನಲ್ಲಿ, ಒಳಿತುಗಳನ್ನು ಮಾಡುವುದು, ಅಲ್ಲಾಹನ ಮಾರ್ಗದಲ್ಲಿ ತನ್ನ ಪರಿಶುದ್ಧ ಧನದಿಂದ ಖರ್ಚು ಮಾಡುವುದು, ದಿನರಾತ್ರಿ ಒಳಿತುಗಳನ್ನು ಮಾಡುವುದರ ಬಗ್ಗೆ ಯೋಚಿಸುವುದು, ಕೆಲವೊಮ್ಮೆ ತೋರಿಸಿ ಒಳಿತುಗಳನ್ನು ಮಾಡುವುದು, ಕೆಲವೊಮ್ಮೆ ರಹಸ್ಯವಾಗಿ ಸತ್ಕರ್ಮಗಳನ್ನು ಮಾಡುವುದು, ಕೆಲವು ಸಲ ಪ್ರತ್ಯಕ್ಷವಾಗಿ ಧನತ್ಯಾಗ ಮಾಡುವುದು, ಕೆಲವೊಮ್ಮೆ ರಹಸ್ಯವಾಗಿ ಸಾಂಪತ್ತಿಕ ತ್ಯಾಗವನ್ನು ಮಾಡುವುದು. ಇವುಗಳಾಗಿವೆ ಒಬ್ಬ ನೈಜ ಸತ್ಯವಿಶ್ವಾಸಿಯ ಲಕ್ಷಣಗಳು. ಅಲ್ಲಾಹನ ಸಂಪ್ರೀತಿಯ ಗಳಿಕೆಯೂ ಈ ತ್ಯಾಗಗಳ ಉದ್ದೇಶವಾಗಿರಬೇಕು ಎಂಬ ಶರತ್ತಿನೊಂದಿಗೆ ಈ ತ್ಯಾಗಗಳು ಅಲ್ಲಾಹನ ಸನ್ನಿಧಿಯಲ್ಲಿ ಸ್ವೀಕಾರ್ಯವಾಗುತ್ತವೆ. ಕೇವಲ ತೋರಿಕೆಯ ತ್ಯಾಗಗಳೆಂದಾದರೆ, ಅವುಗಳು ಅಲ್ಲಾಹನ ಬಳಿಯಲ್ಲಿ ಅಂಗೀಕಾರದ ಪದವಿಯನ್ನು ಪಡೆಯುವುದಿಲ್ಲ. ತೋರಿಕೆಯ ತ್ಯಾಗಗಳನ್ನು ಮಾಡುವವರ ಮುಖಕ್ಕೆ ಅವುಗಳು ಎಸೆಯಲ್ಪಡುವುವು. ಇದಾಗಿದೆ ಅದರ ತಿರುಳು. ಅದನ್ನು ಗಮನದಲ್ಲಿಟ್ಟುಕೊಂಡು ಒಬ್ಬ ಸತ್ಯವಿಶ್ವಾಸಿ ತ್ಯಾಗಗಳನ್ನು ಮಾಡಬೇಕಾಗಿದೆ. ಈ ಒಂದು ಸ್ಫೂರ್ತಿಯೊಂದಿಗೆ ಜಮಾಅತಿನ ವ್ಯಕ್ತಿಗಳು ಅಲ್ಲಾಹನ ಕೃಪೆಯಿಂದ ತ್ಯಾಗಗಳನ್ನು ಮಾಡುತ್ತಾರೆ. ಈ ಒಂದು ಉದ್ದೇಶವಿಲ್ಲದಿದ್ದರೆ ನಮ್ಮ ತ್ಯಾಗಗಳು ನಿಷ್ಪ್ರಯೋಜಕ ಮತ್ತು ವ್ಯರ್ಥವಾಗಿವೆ. ಇಂತಿಂತಹ ವ್ಯಕ್ತಿಯು ಇಷ್ಟು ತ್ಯಾಗಗಳನ್ನು ಮಾಡಿದ್ದಾನೆ, ನಾನು ಅದಕ್ಕಿಂತ ಹೆಚ್ಚು ತ್ಯಾಗಗಳನ್ನು ಮಾಡಬೇಕೆಂಬ ಉದ್ದೇಶ ಮಾತ್ರ ಈ ತ್ಯಾಗಗಳಲ್ಲಿ ಇರುವುದಾದರೆ, ಅವು ಪ್ರಯೋಜನಕರವಲ್ಲ. ಇಂತಿಂತಹ ಜಮಾಅತ್ ಅಥವಾ ಹಲ್‌ಕ ನಮಗಿಂತ ಮುಂದೆ ಬರುವರಾದರೆ ಜನರು ಏನು ಹೇಳುವರು ಎಂಬ ಚಿಂತೆ ಇರುವುದಾದರೆ, ಅದು ಸರಿಯಲ್ಲ. ಸ್ಪರ್ಧಾ ಮನೋಭಾವ ನಿಸ್ಸಂಶಯವಾಗಿಯೂ ಒಳ್ಳೆಯ ಸಂಗತಿಯಾಗಿದೆ. ಆದರೆ ಜನರು ಏನು ಹೇಳುವರು ಎಂಬ ಚಿಂತೆ ಇರಬಾರದು. ಅಲ್ಲಾಹನ ದೃಷ್ಟಿಯಲ್ಲಿ ನಾವು ಹೆಚ್ಚು ತ್ಯಾಗಗಳನ್ನು ಮಾಡುವವರಾಗಿ ಗಣಿಸಲ್ಪಡಬೇಕು ಎಂಬ ಭಾವನೆಯಿರಬೇಕು. ಇದಾಗಿದೆ ಸರಿಯಾದ ಸ್ಪರ್ಧಾ ಮನೋಭಾವ. ನಾನು ಇಷ್ಟು ಚಂದಾವನ್ನು ನೀಡಿದ್ದೇನೆ ಎಂದು ಜನರೊಡನೆ ಹೆಮ್ಮೆಯಿಂದ ಹೇಳಲಿಕ್ಕಾಗಿ ಅಥವಾ ನಾನು ಇಷ್ಟು ಧನತ್ಯಾಗ ಮಾಡುವವನಾಗಿದ್ದೇನೆ ಆದ್ದರಿಂದ ನನ್ನ ಇಂತಿಂತಹ ಮಾತುಗಳನ್ನು ಸಮ್ಮತಿಸಬೇಕೆಂದು ಅಥವಾ ನನಗೆ ಇಂತಿಂತಹ ಸೌಕರ್ಯಗಳು

ಒದಗಿಸಿಕೊಡಬೇಕೆಂದು ಯಾವುದಾದರೂ ಭಿನ್ನಾಭಿಪ್ರಾಯದ ಸಂದರ್ಭದಲ್ಲಿ ಜಮಾಅತಿನ ವ್ಯವಸ್ಥೆಯೊಡನೆ ಹೇಳುವುದಾದರೆ ಇದು ಸರಿಯಲ್ಲ. ನಾನು ಇಷ್ಟು ತ್ಯಾಗಗಳನ್ನು ಮಾಡಿ ಖ಼ಲೀಫರ ಅಥವಾ ಹುದ್ದೇದಾರರ ಗಮನವನ್ನು ಸೆಳೆಯುವೆನು ಮತ್ತು ನನ್ನನ್ನು ಪ್ರಶಂಸಿಸಲಾಗುವುದು ಎಂದು ಯೋಚಿಸುವುದಾದರೆ, ಇವೆಲ್ಲವೂ ತಪ್ಪಾದ ಸಂಗತಿಗಳಾಗಿವೆ. ಇವು ನಿಷ್ಪ್ರಯೋಜಕರ, ವ್ಯರ್ಥ ಮತ್ತು ತ್ಯಾಗಗಳ ಮೂಲದ್ದೇಶಕ್ಕೆ ವಿರುದ್ಧವೂ ಆಗಿವೆ. ಮಾತ್ರವಲ್ಲ, ಇವು ನಷ್ಟದ ಮಾರ್ಗಗಳಾಗುವುವು. ಇವೆಲ್ಲವೂ ತಪ್ಪಾಗಿದೆ ಎಂದು ಅಲ್ಲಾಹನು ಹೇಳುತ್ತಾನೆ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕಾದರೆ, ಒಂದೇ ಒಂದು ಉದ್ದೇಶವಿರಬೇಕು. ಅದೇನೆಂದರೆ, ಅಲ್ಲಾಹನ ಸಂಪ್ರೀತಿಯನ್ನು ಪಡೆಯಬೇಕು. ಅಲ್ಲಾಹನ ಸಂಪ್ರೀತಿಯನ್ನು ಗಳಿಸುವವನಿಗೆ ಅಲ್ಲಾಹನು ಗೌರವವನ್ನು ಸಹ ನೀಡುತ್ತಾನೆ. ಆದರೆ ಈ ಗೌರವ, ಅವನ ವಿನಯ ಮತ್ತು ನಮ್ರತೆಯನ್ನು ವರ್ಧಿಸಬೇಕು. ಯಥಾರ್ಥ ಸತ್ಯವಿಶ್ವಾಸಿಯರನ್ನು ಜನರು ಹೊಗಳುವುದರಿಂದ ಅವರು ನಾಚುತ್ತಾರೆ. ಅವರಿಗಾಗಿ ದುಆ ಮಾಡಬೇಕೆಂಬ ಉದ್ದೇಶದಿಂದ ಮಾತ್ರ ಅವರು ಖ಼ಲೀಫರ ದೃಷ್ಟಿಯಲ್ಲಿ ಬರಬೇಕೆಂದು ಇಚ್ಛಿಸುತ್ತಾರೆ. ಖ಼ಲೀಫರೊಂದಿಗೆ ಒಂದು ದೃಢವಾದ ಸಂಬಂಧವನ್ನು ಅವರು ಬಯಸುತ್ತಾರೆ. ಯಾವ ವ್ಯಕ್ತಿಯ ಕೈಯಲ್ಲಿ ಬೈಅತ್ ಮಾಡಿರುತ್ತಾನೋ, ಅವರ ಪ್ರಾರ್ಥನೆಗಳಿಂದಲೂ ಪ್ರಯೋಜನ ಸಿಗಬೇಕೆಂದು ಇಚ್ಛಿಸುತ್ತಾನೆ. ಯಥಾರ್ಥ ಖ಼ಿಲಾಫತಿನ ಮೇಲೆ ದೃಢವಿಶ್ವಾಸವಿರುವುದಾದರೆ, ಇಂತಹ ಅಭಿಲಾಷೆಯನ್ನು ಹೊಂದುವುದು ತಪ್ಪೇನಲ್ಲ. ಆದರೆ ಉದ್ದೇಶ ತೋರಿಕೆಯಾಗಿರಬಾರದಷ್ಟೆ. ಬದಲಿಗೆ, ನಾವು ಅಲ್ಲಾಹನ ಸಂಪ್ರೀತಿಯನ್ನು ಗಳಿಸಬೇಕು ಮತ್ತು ಈ ತ್ಯಾಗದ ಕಾರಣದಿಂದ ನಾವು ಅಲ್ಲಾಹನ ಸಾಮೀಪ್ಯ ಪಡೆಯಲು ಮತ್ತು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಖ಼ಲೀಫರು ನಮಗಾಗಿ ದುಆ ಮಾಡಬೇಕು ಎಂಬ ಉದ್ದೇಶವನ್ನು ಹೊಂದಿರಬೇಕು. ಸತ್ಯವಿಶ್ವಾಸಿಗಳು ಪರಸ್ಪರ ದುಆ ಮಾಡುವುದರಿಂದಲೇ, ಪರಸ್ಪರ ಅಧ್ಯಾತ್ಮಿಕ ಉನ್ನತಿಯ ಮಾರ್ಗಗಳು ಉಂಟಾಗುತ್ತವೆ. ಈ ಯೋಚನೆಯೂ ಅಲ್ಲಾಹನ ಅಧ್ಯಾಪನೆಯ ಪ್ರಕಾರವಾಗಿದೆ.

ಅಲ್ಲಾಹನು ಹೇಳುತ್ತಾನೆ: ನನ್ನ ಗಮನ ಮತ್ತು ಸಂಪ್ರೀತಿಯನ್ನು ಗಳಿಸಲಿಕ್ಕಾಗಿ, ನಿಷ್ಠೆಯಿಂದ ನನ್ನ ಸಂಪ್ರೀತಿಗಾಗಿ ಖರ್ಚು ಮಾಡುವಾಗ, ನಿಮ್ಮ ಭಯವನ್ನು ಮತ್ತು ನಿಮ್ಮ ದುಃಖವನ್ನು ದೂರಮಾಡುವವನು ಹಾಗೂ ನಿಮ್ಮ ಹೃದಯಗಳ ನೆಮ್ಮದಿಯ ಮಾರ್ಗಗಳನ್ನು ಉಂಟುಮಾಡಿ, ನಿಮಗೆ ನೆಮ್ಮದಿಯನ್ನು ನೀಡಿ ನಿಮ್ಮನ್ನು ನನ್ನ ಮಡಿಲಲ್ಲಿ ಇರಿಸುವವನು ಎಂಬುದು ನನ್ನ ವಾಗ್ದಾನವಾಗಿದೆ. ಈ ಕಾಲಘಟ್ಟದ ಇಮಾಮರಾದ ಹಝ್ರ಼ತ್ ವಾಗ್ದತ್ತ ಮಸೀಹ್ ಮತ್ತು ಮಹ್‌ದಿ ಹಾಗೂ ಹಝ್ರ಼ತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಾಸರಾದ ಹಝ್ರ಼ತ್ ಮಿರ್ಝಾ ಗುಲಾಮರನ್ನು ನಂಬಿರುವ ಈ ಜಮಾಅತಿಗೆ ಅಲ್ಲಾಹನ ದೀನಿಗಾಗಿ ಧನತ್ಯಾಗ ಮಾಡಬೇಕೆಂಬ ಯೋಚನೆ ಅಲ್ಲಾಹನ ಕೃಪೆಯಿಂದ ಇದೆ. ಅಲ್ಲಾಹನು ಸಹ ಈ ಧನತ್ಯಾಗಗಳು ಯಾವುದೇ ಫಲವಿಲ್ಲದಂತೆ ಮಾಡುವುದಿಲ್ಲ. ಅಲ್ಲಾಹನ ಸಂಪ್ರೀತಿಯನ್ನು ಪಡೆಯಲು ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡಲಾಗಿದೆ. ಅಲ್ಲಾಹನು ಕೆಲವೊಮ್ಮೆ ಅದಕ್ಕೆ ಬೇಗನೇ ಪ್ರತಿಫಲವನ್ನು ನೀಡುತ್ತಾನೆ. ಕೆಲವು ಸಲ ಹಣದ ರೂಪದಲ್ಲಿ, ಕೆಲವು ಸಲ ಕೊಡುಗೆಯ ರೂಪದಲ್ಲಿ ನೀಡುತ್ತಾನೆ. ಇದರ ಉದಾಹರಣೆಗಳನ್ನು ದಿನಂಪ್ರತಿ ಜಮಾಅತಿನಲ್ಲಿ ನಾವು ನೋಡುತ್ತಿದ್ದೇವೆ. ಹತ್ತಿಪ್ಪತ್ತು ಅಥವಾ ನೂರಾರು ಅಲ್ಲ, ಬದಲಿಗೆ, ಸಾವಿರಾರು ಸಂಖ್ಯೆಯಲ್ಲಿ ಉದಾಹರಣೆಗಳು ಸಿಗುತ್ತವೆ. ಮಾತ್ರವಲ್ಲ, ಲಕ್ಷಗಳಲ್ಲಿ ಇಂತಹ ಉದಾಹರಣೆಗಳು ಇವೆ ಎಂದು ನಾನು ಹೇಳುತ್ತೇನೆ. ಇಂತಹ ಉದಾಹರಣೆಗಳೊಂದಿಗೆ ಅಲ್ಲಾಹನ ಸಂಪ್ರೀತಿ ಗಳಿಸುವವರು ಹಾದುಹೋಗುತ್ತಾರೆ ಮತ್ತು ಅವುಗಳನ್ನು ಸ್ವತಃ ಅನುಭವಿಸುತ್ತಾರೆ. ಹೀಗೆ ಅವರ ವಿಶ್ವಾಸ ಹೆಚ್ಚು ದೃಢವಾಗುತ್ತದೆ. ಅದರೊಂದಿಗೆ ತಮ್ಮ ಪತ್ನಿ ಮತ್ತು ಮಕ್ಕಳಿಗೆ ಸಲ್ಲಬೇಕಾದ ಹಕ್ಕುಗಳು ಸಹ ಇವೆ ಎಂದು ಖಂಡಿತವಾಗಿಯೂ ಹೀಗೆ ಧನತ್ಯಾಗ ಮಾಡುವವರು ಯೋಚಿಸಬೇಕಾಗಿದೆ. ಈ ಹಕ್ಕುಗಳನ್ನು ಈಡೇರಿಸುವುದು ಸಹ ಸತ್ಯವಿಶ್ವಾಸಿಯ ಕರ್ತವ್ಯವಾಗಿದೆ.ತಮ್ಮ ಪತ್ನಿ ಮತ್ತು ಮಕ್ಕಳಿಗೆ ಸಿಗಬೇಕಾದ ಹಕ್ಕುಗಳು ನೀಡದಿರುವುದು, ಅವರ ಆವಶ್ಯಕತೆಗಳನ್ನು ಪೂರ್ತಿ ಮಾಡದಿರುವುದು ಸಹ ಪಾಪವಾಗಿದೆ. ಆದರೆ, ಇದ್ದುದರಲ್ಲಿ ತೃಪ್ತಿ ಹೊಂದುವ ಅಭ್ಯಾಸವನ್ನು ಮಾಡುತ್ತಾ ಮತ್ತು ಇದ್ದುದ್ದರಲ್ಲಿ ತೃಪ್ತಿ ಹೊಂದುವ ಅಭ್ಯಾಸದ ಪ್ರಾಮುಖ್ಯತೆಯನ್ನು ಮನೆಯವರಿಗೆ ಹೇಳುತ್ತಾ, ಅದರ ಗ್ರಹಿಕೆ ನೀಡುತ್ತಾ ಧನತ್ಯಾಗದ ಕಡೆಗೆ ಅವರ ಗಮನವನ್ನು ಸಹ ಸೆಳೆಯಬೇಕು ಮತ್ತು ಅವರಿಂದ ತ್ಯಾಗವನ್ನು ಮಾಡಿಸಬೇಕು. ಹಾಗೆ ಆಗುವಾಗ, ಅಂತಹ ವ್ಯಕ್ತಿಗಳ ಮಕ್ಕಳು ಅಲ್ಲಾಹನ ಅನುಗ್ರಹಗಳೊಂದಿಗೆ ಮನುಷ್ಯನು ಆಶ್ಚರ್ಯ ಪಡುವಂತಹ ಮಾರ್ಗಗಳಿಂದ ಅಲ್ಲಾಹನ ಅನುಗ್ರಹಗಳ ವಾರಸುದಾರರಾಗುತ್ತಾರೆ. ಈಗ ನಾನು ತ್ಯಾಗಗಳನ್ನು ಮಾಡಿದ ಕಾರಣದಿಂದ ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾದವರ ಮತ್ತು ಸಂಪತ್ತನ್ನು ಖರ್ಚು ಮಾಡಲು ಅಲ್ಲಾಹನ ಕಡೆಯಿಂದ ಪ್ರೇರಣೆ ಲಭಿಸಿದ ನಂತರ ಅಲ್ಲಾಹನು ಅವರಿಗೆ ನೀಡಿದ ವರದಾನಗಳ ಕೆಲವು ಘಟನೆಗಳನ್ನು ಮುಂದಿರಿಸುತ್ತೇನೆ. ಈ ಘಟನೆಗಳಿಂದ ಕೆಲವೊಮ್ಮೆ ಇತರರಿಗೂ ಪ್ರೇರಣೆ ಸಿಗುತ್ತದೆ ಎಂಬುವುದಾಗಿದೆ ಇವುಗಳನ್ನು ಮುಂದಿರಿಸುವುದರಿಂದ ಲಭಿಸುವ ಪ್ರಯೋಜನ. ಈ ಘಟನೆಗಳು ನಮ್ಮ ಮೇಲೆ ಪ್ರಭಾವ ಬೀರಿವೆ, ನಮಗೂ ಧನತ್ಯಾಗ ಮಾಡಲು ಪ್ರೇರಣೆ ಲಭಿಸಿದೆ ಮತ್ತು ನಾವು ಸಹ ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ನೋಡಿದ್ದೇವೆ ಎಂದು ಕೆಲವರು ನನಗೆ ಬರೆಯುತ್ತಾರೆ.

ಹಝ್ರ಼ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಮ್ಮ ಎಲ್ಲ ಕೆಲಸಗಳನ್ನು ರಹಸ್ಯವಾಗಿ ಮಾಡಬೇಡಿರಿ. ಬದಲಾಗಿ, ಸಂದರ್ಭೋಚಿತವಾಗಿ ಮಾಡಿರಿ ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಎಂದರೆ, ರಹಸ್ಯವಾಗಿ ಮಾಡುವುದು ನಿಮ್ಮ ಆತ್ಮಕ್ಕೆ ಉತ್ತಮವೆಂದು ಅನಿಸುವ ಕೆಲವು ಸತ್ಕರ್ಮಗಳನ್ನು ರಹಸ್ಯವಾಗಿ ಮಾಡಿರಿ. ಜನರಿಗೆ ಒಳಿತಾಗುವುದು ಎಂದು ತೋರುವ ಕೆಲವು ಸತ್ಕರ್ಮಗಳನ್ನು ತೋರಿಸಿಯೂ ಮಾಡಬೇಕು. ಇದರಿಂದ ನಿಮಗೆ ಇಮ್ಮಡಿ ಪ್ರತಿಫಲ ಸಿಗಬಹುದು ಮತ್ತು ದುರ್ಬಲ ಜನರು ನಿಮ್ಮನ್ನು ಅನುಸರಿಸುತ್ತಾ ಆ ಸತ್ಕರ್ಮವನ್ನು ಮಾಡುವರು. ಕೇವಲ ಮಾತಿನಿಂದ ಮಾತ್ರವಲ್ಲ, ತಮ್ಮ ಕೃತ್ಯದಿಂದ ಸಹ ಜನರಿಗೆ ಪ್ರೇರಣೆ ನೀಡಿರಿ. ಏಕೆಂದರೆ, ಎಲ್ಲ ಕಡೆ ಮಾತು ಪ್ರಭಾವ ಬೀರುವುದಿಲ್ಲ, ಬದಲಿಗೆ ಹೆಚ್ಚಾಗಿ ಮಾದರಿಯ ಪ್ರಭಾವ ಅಧಿಕವಾಗಿರುತ್ತದೆ. (ಕಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ–19, ಪುಟ–31–32)

ಒಟ್ಟಿನಲ್ಲಿ, ನಾನಿಂದು ಹೇಳಲು ಹೋಗಲಿರುವ ಘಟನೆಗಳನ್ನು ಪ್ರಸ್ತಾಪಿಸಲು ಯಾರೂ ಹೇಳಿಲ್ಲ, ಬದಲಿಗೆ ಈ ಉತ್ತಮ ಮಾದರಿಯಿಂದ ಜನರ ಮೇಲೆ ಉತ್ತಮ ಪ್ರಭಾವ ಉಂಟಾಗಲು ನಾನು ಸ್ವತಃ ಇವುಗಳನ್ನು ಪ್ರಸ್ತಾಪಿಸುತ್ತಿದ್ದೇನೆ. ಪ್ರಸ್ತಾಪಿಸಲೇ ಬೇಕಾದರೆ, ನಮ್ಮ ಹೆಸರನ್ನು ಹೇಳದೇ ಪ್ರಸ್ತಾಪಿಸಿರಿ ಎಂದು ಸಹ ಕೆಲವರು ನನಗೆ ಬರೆಯುತ್ತಾರೆ. ಹೇಗಿದ್ದರೂ ನಾನು ಕೆಲವು ಘಟನೆಗಳನ್ನು ಮುಂದಿರಿಸುತ್ತೇನೆ. ಈ ಘಟನೆ ಯಾರ ಪರವಾಗಿ ನಡೆಯುತ್ತೋ ಅವರಿಗೆ ಇಮ್ಮಡಿ ಪ್ರತಿಫಲ ಸಿಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಅಲ್ಲಾಹನ ಮಾರ್ಗದಲ್ಲಿ ತ್ಯಾಗಗಳನ್ನು ಮಾಡಿರುವವರು ಎಂಬುದಾಗಿದೆ ಅವರು ಮಾಡಿದ ಒಂದು ಪುಣ್ಯ. ಇನ್ನೊಂದು ಈ ಮಾದರಿಗಳ ಮತ್ತು ಘಟನೆಗಳ ಕಾರಣದಿಂದ ಇತರರಿಗೂ ಧನತ್ಯಾಗಗಳನ್ನು ಮಾಡಲು ಪ್ರೇರಣೆಯುಂಟಾಗುವುದು ಮತ್ತು ಇದರಿಂದ ಧನತ್ಯಾಗದ ಆವಶ್ಯಕತೆಯ ಅರಿವು ಉಂಟಾಗಿದೆ ಅಥವಾ ಉಂಟಾಗುವುದು. ಇದಾಗಿದೆ ಇವರಿಗೆ ಸಿಗುವ ಎರಡನೇ ಪ್ರತಿಫಲ.

ತ್ಯಾಗಗಳನ್ನು ಮಾಡಿದ ಕಾರಣದಿಂದ ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾದವರ ಮತ್ತು ಸಂಪತ್ತನ್ನು ಖರ್ಚು ಮಾಡಲು ಅಲ್ಲಾಹನ ಕಡೆಯಿಂದ ಪ್ರೇರಣೆ ಲಭಿಸಿದ ನಂತರ ಅಲ್ಲಾಹನು ಅವರಿಗೆ ನೀಡಿದ ವರದಾನಗಳ ಕೆಲವು ಘಟನೆಗಳನ್ನು ಈಗ ನಾನು ಮುಂದಿರಿಸುತ್ತೇನೆ. ಬೈಅತ್ ಮಾಡಿದ ನಂತರ ಅಲ್ಲಾಹನ ಸಂಪ್ರೀತಿ ಪಡೆಯಲಿಕ್ಕಾಗಿ ಯಾವ ರೀತಿಯಲ್ಲಿ ಸಂಪತ್ತನ್ನು ಖರ್ಚು ಮಾಡುವ ಹಂಬಲವಿರುತ್ತದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಅಲ್‌ಬೇನಿಯಾದ ಮುಬಲ್ಲಿಗ್ ಸಮದ್ ಸಾಹಿಬ್ ಬರೆಯುತ್ತಾರೆ: ಜಲ್ಸ ಸಾಲಾನ 2020ರ ನನ್ನ ಸಮಾರೋಪ ಭಾಷಣವು ಅಲ್ಲಾಹನ ವರದಾನಗಳ ಬಗ್ಗೆಯಾಗಿತ್ತು. ಅದನ್ನು ಅಲ್ಬೇನಿಯಾದ ಒಬ್ಬ ನವ ಅಹ್ಮದಿ ಸಹೋದರರಾದ ಜಾಫರ್ ಕೋಚಿ ಸಾಹಿಬರು ಕೇಳುತ್ತಿದ್ದರು. ನಾನು ಅದರಲ್ಲಿ ಅವರ ಅಹ್ಮದಿಯ್ಯತ್ ಸ್ವೀಕಾರದ ಬಗ್ಗೆ ಸಹ ಪ್ರಸ್ತಾಪಿಸಿದ್ದೆ. ಆಗಸ್ಟ್ ತಿಂಗಳ ತನಕ ಅವರಿಗೆ ಯಾವುದೇ ಆದಾಯವಿದ್ದಿರಲಿಲ್ಲ. ಒಂದು ದಿನ ಜುಮಾ ನಮಾಝಿನ ನಂತರ ಅವರು ಹೀಗೆ ಕೇಳಿದರು: ಇತರ ಯುವಕರು ಚಂದಾಗಳನ್ನು ನೀಡುತ್ತಾರೆ. ನನಗೂ ಅದರ ಬಗ್ಗೆ ವಿವರಿಸಿಕೊಡಿರಿ. ಅವರಿಗೆ ಪುನಃ ಚಂದಾಗಳ ಬಗ್ಗೆ ಪರಿಚಯಪಡಿಸಿ ಕೊಡಲಾಯಿತು. ಹಿಂದೆಯೂ ಅವರಿಗೆ ತಿಳಿಸಲಾಗಿತ್ತು. ಅನಂತರ ಅವರು ಹೇಳಿದರು: 'ಇದೇ ತಿಂಗಳು ಅವರ ಫ್ಲೇಟ್ ಬಾಡಿಗೆಗೆ ಕೊಡಲಾಗಿದೆ ಮತ್ತು ಅವರಿಗೆ ಅದರ ಬಾಡಿಗೆ ಸಿಕ್ಕಿದೆ.' ಈ ಮೊದಲ ವರಮಾನದಿಂದ ಅವರು ಪಾವತಿಸಬೇಕಾದ ಚಂದಾದ ದರಕ್ಕಿಂತ ಹೆಚ್ಚಿನ ಚಂದಾವನ್ನು ಕೊಂಡುಬಂದಿದ್ದರು. ಅವರು ಹೇಳಿದರು: ಹಝ್ರ಼ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಶ್ಚಯಿಸಿದ ದರದ ಪ್ರಕಾರ ಚಂದಾ ಪಾವತಿಯಾದ ನಂತರ ಬಾಕಿಯಾಗುವ ಹಣವನ್ನು ತಹ್ರೀಕ್ ಜದೀದ್ ಮತ್ತು ವಖ್‌ಫೆ ಜದೀದಿಗೆ ಹಾಕಿರಿ. ಮುಬಲ್ಲಿಗ್ ಸಾಹಿಬರು ಹೇಳುತ್ತಾರೆ: ಧನತ್ಯಾಗ ಮಾಡುವವರಿಗೆ ವರ್ಧಿಸಿ ಕೊಡುತ್ತಾನೆ ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ವಾಗ್ದಾನ ಮಾಡಿದ್ದಾನೆ ಎಂದು ನಾನು ಅವರೊಡನೆ ಹೇಳಿದೆ. ಆಗ ಅವರು ಹೇಳಿದರು: 'ನಾನು ಈ ಉದ್ದೇಶದಿಂದ ಚಂದಾವನ್ನು ನೀಡಿಲ್ಲ, ಬದಲಾಗಿ, ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಮತ್ತು ದೀನಿಗಾಗಿ ಧನತ್ಯಾಗಗಳನ್ನು ಮಾಡಲು ಹಝ್ರ಼ತ್ ಮಸೀಹ್ ಮೌಊದ್‌ರ(ಅ) ನಿರ್ದೇಶನವಿದೆ ಹಾಗೂ ದೀನಿಗಾಗಿ ಸಾಂಪತ್ತಿಕ ತ್ಯಾಗವನ್ನು ಮಾಡಬೇಕೆಂಬುದು ಇಸ್ಲಾಮಿನ ಸಹ ಆಜ್ಞೆಯಾಗಿದೆ. ಈ ಕಾರಣದಿಂದ ಚಂದಾವನ್ನು ನೀಡಿದ್ದೇನೆ' ಈಗ ನಿಯತವಾಗಿ ಪ್ರತಿ ತಿಂಗಳು ಚಂದಾವನ್ನು ನೀಡುತ್ತಿದ್ದಾರೆ. ಲೌಕಿಕರಾದ ಇಂತಹ ವ್ಯಕ್ತಿಗಳ ಆಲೋಚನೆ ಸಹ ಒಂದೇ ಸವನೇ ಬೈಅತಿನ ನಂತರ ಬದಲಾಗುತ್ತದೆ.

ಅರ್ಜಂಟೈನಿನ ಮುಬಲ್ಲಿಗರಾದ ಸರ್ವರ್ ಸಾಹಿಬರು ಬರೆಯುತ್ತಾರೆ: ಅರ್ಜಂಟೈನಿನಲ್ಲಿ ಕೊರೋನ ವೈರಸ್ ಮತ್ತು ಬೆಲೆಯೇರಿಕೆಯ ಕಾರಣದಿಂದ ಜನಸಾಮಾನ್ಯರಿಗೆ ಕಠಿಣವಾದ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿತ್ತು. ಆದಾಗ್ಯೂ ಇಸ್ಲಾಮಿನ ಒಂದು ಮುಖ್ಯವಾದ ಸ್ತಂಭ ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡುವುದೂ ಆಗಿದೆ ಮತ್ತು ಅಹ್ಮದಿಯಾ ಜಮಾಅತಿನಲ್ಲಿ ಈ ದೈವಿಕ

ಆಜ್ಞೆಯನ್ನು ಅನುಸರಿಸಲಿಕ್ಕಾಗಿ ಒಂದು ಶಾಖೆಯಾದ ತಹ್ರೀಕ್ ಜದೀದಿನ ಯೋಜನೆ ಸಹ ಇದೆ ಎಂದು ಪ್ರಾದೇಶಿಕ ನವ ಅಹ್ಮದಿಯರೊಡನೆ ಹೇಳಲಾದಾಗ, ಅವರು ಉತ್ಸಾಹದಿಂದ ತಮ್ಮ ಶಕ್ತಿಯಾನುಸಾರ ಇದಕ್ಕಾಗಿ ತ್ಯಾಗಗಳನ್ನು ಮಾಡಿದರು. ಇವರಲ್ಲಿ ಫಾತಿಮಾ ವೇರ್‌ನೀಕ ಸಾಹಿಬ ಎಂಬ ಒಬ್ಬಳು ಸ್ತ್ರೀಯೂ ಇದ್ದಳು. ಅವರಿಗೆ ಅಸಾಧಾರಣವಾದ ತ್ಯಾಗಗಳನ್ನು ಮಾಡಲು ಸೌಭಾಗ್ಯ ಲಭಿಸಿತ್ತು. ಅವರು ವಿಧವೆಯಾಗಿದ್ದಳು. ಬಹಳ ಕಡಿಮೆ ಸಂಬಳವಿದ್ದ ಉದ್ಯೋಗವನ್ನು ಮಾಡುತ್ತಿದ್ದರು. ವರ್ಷ ಕೊನೆಗೊಳ್ಳಲು ಸ್ವಲ್ಪ ದಿನಗಳು ಮಾತ್ರ ಬಾಕಿಯಿವೆ ಎಂದು ನವ ಅಹ್ಮದಿಯರಾದ ಎಲ್ಲರೊಡನೆ ಒಟ್ಟಾಗಿ ಹೇಳಲಾದಾಗ, ಅವರು ಮುಬಲ್ಲಿಗ್ ಸಾಹಿಬರೊಡನೆ ಹೇಳಿದರು: ನನಗೆ ಈಗ ಚಂದಾ ನೀಡಲು ಸಾಧ್ಯವಿಲ್ಲ, ಆದರೆ ಮುಂದಿನ ಕೆಲವು ದಿನಗಳಲ್ಲಿ ಹಣವನ್ನು ಒಟ್ಟುಗೂಡಿಸಲು ಪ್ರಯತ್ನಿಸುವೆನು. ಹೀಗೆ ಕೆಲವು ದಿನಗಳಲ್ಲೇ ಅವರು ಐದು ಸಾವಿರ ಅರ್ಜಂಟೈನ್ ಪೀಸೋಝ್ ಒಟ್ಟುಗೂಡಿಸಿಕೊಂಡು ತನ್ನ ಶಕ್ತಿಯಾನುಸಾರ, ಬದಲಿಗೆ ಅರ್ಜಂಟೈನಿನ ಸಾಮಾನ್ಯ ಆರ್ಥಿಕ ಸ್ಥಿತಿಗತಿಗಳನ್ನು ಮುಂದಿರಿಸುವುದಾದರೆ ಇದು ಹಿರಿಯ ಸಂಖ್ಯೆಯ ಮೊಬಲಗಾಗಿತ್ತು ಎಂದು ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ. ನಾನು ನಿಮಗೆ ತುಂಬ ಕೃತಜ್ಞನಾಗಿದ್ದೇನೆ ಎಂದು ಅವರ ಆವೇಶವನ್ನು ನೋಡಿ ಮುಬಲ್ಲಿಗ್ ಸಾಹಿಬರು ಹೇಳಿದರು. ಆಗ ಆ ಸ್ತ್ರೀ ಹೇಳಿದರು: ಇದರಲ್ಲಿ ಕೃತಜ್ಞತೆ ಅರ್ಪಿಸುವ ಅಗತ್ಯವೇನಿದೆ. ನಾನು ಇಸ್ಲಾಂ ಧರ್ಮವನ್ನು ಮನಸ್ಸಾರೆ ಸಂತೋಷದಿಂದ ಸ್ವೀಕರಿಸಿದ್ದೇನೆ. ಅದನ್ನು ಸರಿಯಾಗಿ ಮನವರಿಕೆ ಮಾಡಿ ಸ್ವೀಕರಿಸಿದ್ದೇನೆ. ಅದರ ಅದೇಶಗಳಲ್ಲಿ ಒಂದು ಆದೇಶ ಧರ್ಮದ ಪರವಾಗಿ ತ್ಯಾಗಗಳನ್ನು ಮಾಡಬೇಕೆಂದಾಗಿದೆ. ನಾನು ನನ್ನ ಕೆಲಸದಲ್ಲಿ ನಿರತಳಾಗಿರುವ ಕಾರಣದಿಂದ ಒಬ್ಬ ಅಹ್ಮದಿಯ ಕರ್ತವ್ಯವಾದ ಸಮಯದ ತ್ಯಾಗಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದರಿಂದ ನಾನು ಲಜ್ಜಿತಳಾಗಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ) ಜಮಾಅತಿನಲ್ಲಿ ಪರಿಪೂರ್ಣವಾದ ನಿಷ್ಠೆಯಿಂದ ಸೇರುವವರಲ್ಲಿ ಅಲ್ಲಾಹನು ಇಂತಹ ಪರಿವರ್ತನೆಯನ್ನು ಮಾಡುತ್ತಾನೆ. ಅಲ್ಲಾಹನ ಸಂಪ್ರೀತಿ ಹೇಗೆ ಗಳಿಸಬೇಕು, ಅದಕ್ಕಾಗಿ ಏನು ಪ್ರಯತ್ನವನ್ನು ಮಾಡಬೇಕು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಮಿಶನ್ ಅಥವಾ ದೌತ್ಯವನ್ನು ಹೇಗೆ ಮುಂದಕ್ಕೆ ಕೊಂಡುಹೋಗುವುದು ಎಂಬುದರ ಬಗ್ಗೆ ಅವರು ಯೋಚಿಸುತ್ತಿರುತ್ತಾರೆ.

ಇಂಡೋನೇಶ್ಯ ಲೋಕದ ಮತ್ತೊಂದು ಕಡೆಯಿರುವ ದೇಶವಾಗಿದೆ. ಅಲ್ಲಿಯ ಅಮೀರ್ ಸಾಹಿಬರು ಬರೆಯುತ್ತಾರೆ: ಟಂಗರಿಂಗ್ ಪಟ್ಟಣದ ಒಬ್ಬಳು ಸ್ತ್ರೀಯಾದ ಮರ್ಸಿಲ ಹೇಳುತ್ತಾರೆ: ಕೊರೋನದ ಕಾರಣದಿಂದ ಅವರ ಗಂಡನಿಗೆ ಉದ್ಯೋಗಯಿಲ್ಲವಾಯಿತು. ಅವರು ವ್ಯಾಪಾರವನ್ನು ಶುರುಮಾಡಿದರು. ಆದರೆ ಲಾಭವುಂಟಾಗಲಿಲ್ಲ. ಅನಂತರ ಆನ್‌ಲೈನ್ ಮೋಟಾರ್ ಸೈಕಲ್ ಟ್ಯಾಕ್ಸಿಯಲ್ಲಿ ಕೆಲಸವನ್ನು ಶುರುಮಾಡಿದರು. ಇದರಲ್ಲಿ ಸಹ ತೊಂದರೆಗಳು ಉಂಟಾಗುತ್ತಿತ್ತು. ಸ್ಥಿತಿ ಎಷ್ಟರ ತನಕ ತಲುಪಿತ್ತೆಂದರೆ, ಮರುದಿನದ ಊಟಕ್ಕಾಗಿ ಏನಾದರೂ ಸಿಗುವುದೋ ಇಲ್ಲವೋ ಎಂದು ಚಿಂತಿಸುತ್ತಿದ್ದೆವು. ಅವರು ಹೇಳುತ್ತಾರೆ: ರಮಝಾನಿನಲ್ಲಿ ತಹ್ರೀಕ್ ಜದೀದಿನ ವಾಗ್ದಾನವನ್ನು ಪೂರ್ತಿ ಮಾಡಬೇಕೆಂಬುದಾಗಿತ್ತು ನಮ್ಮ ಬಯಕೆ. ಚಂದಾದ ವಾಗ್ದಾನವನ್ನು ಈಡೇರಿಸಲು ದುಆ ಮಾಡಲು ಮಾತ್ರ ನನ್ನ ಗಂಡ ನನ್ನೊಡನೆ ಹೇಳುತ್ತಿದ್ದರು. ಅವರು ಹೇಳುತ್ತಾರೆ: ರಮಝಾನನಲ್ಲಿ ನಾನು ಕನಸಿನಲ್ಲಿ ಒಬ್ಬ ವ್ಯಕ್ತಿ ಹೀಗೆ ಕೇಳುವುದಾಗಿ ಕಂಡೆನು: ನೀನು ಏನಾದರೂ ವಾಗ್ದಾನವನ್ನು ಮಾಡಿದ್ದೀಯ? ಹೌದೆಂದು ನಾನು ಹೇಳಿದೆ. ಈ ವಾಗ್ದಾನವನ್ನು ಈಡೇರಿಸಲು ಆ ವ್ಯಕ್ತಿ ಹೇಳಿದರು. ಕಣ್ಣು ತೆರೆದಾಗ, ತಹಜ್ಜುದಿನ ಸಮಯವಾಗಿತ್ತು. ತಹಜ್ಜುದ್ ನಮಾಝಿನ ನಂತರ ಸಹರಿಯ ಸಮಯದಲ್ಲಿ ನಾನು ಕಂಡ ಕನಸನ್ನು ನನ್ನ ಗಂಡನೊಡನೆ ಹೇಳಿದೆ. ಕೆಲವು ದಿನಗಳ ನಂತರ ನನ್ನ ಗಂಡ ಮನೆಗೆ ಬಂದು ಬಹಳ ಸಂತೋಷದಿಂದ ಬಹಳ ಹೆಚ್ಚಿನ ಹಣವನ್ನು ನೀಡುತ್ತಾ ಹೇಳಿದರು: ಬೇಗನೇ ತಹ್ರೀಕ್ ಜದೀದಿನ ವಾಗ್ದಾನವನ್ನು ಈಡೇರಿಸು. ನನ್ನ ಗಂಡ ಆನ್‌ಲೈನ್ ಮೋಟಾರ್ ಸೈಕಲ್ ಟಾಕ್ಸಿಯ ಕೆಲಸದ ಲಾಭವಾದ ಐವತ್ತು ಸಾವಿರ ಇಂಡೋನೇಶಿಯನ್ ರೂಪಾಯಿಗಳನ್ನು ಪಡೆಯಲು ಬ್ಯಾಂಕಿಗೆ ಹೋದಾಗ, ಅವರ ಅಕೌಂಟಿನಲ್ಲಿ ಅದಕ್ಕಿಂತ ಇಪ್ಪತ್ತು ಪಟ್ಟು ಹೆಚ್ಚಿನ ಮೊಬಲಗು ಇದ್ದದ್ದಾಗಿ ಕಂಡರು. ಈ ಹಣ ಎಲ್ಲಿಂದ ಬಂತೆಂದು ನಮಗೆ ಗೊತ್ತಿಲ್ಲ. ಆದರೆ ಇದು ಅಲ್ಲಾಹನ ಸಹಾಯ ಮಾತ್ರವಾಗಿದೆ ಎಂದು ನಮಗೆ ದೃಢವಿಶ್ವಾಸವಿದೆ. ಅಲ್ಲಾಹನು ನಮ್ಮ ಉದ್ದೇಶಶುದ್ಧಿಯನ್ನು ಕಂಡುಕೊಂಡು ನಮಗೆ ಕೊಡುಗೆಯಾಗಿ ನೀಡಿದ್ದನು. ಹೀಗೆ ಅಲ್ಲಾಹನು ಚಿಂತೆಯಿಂದ ಮತ್ತು ದುಃಖದಿಂದ ಮುಕ್ತಗೊಳಿಸುತ್ತಾನೆ.

ಇಂಡೋನೇಶ್ಯದ ಅಮೀರ್ ಸಾಹಿಬರು ಹೇಳುತ್ತಾರೆ: ಲಾಂಪೋಂಗಿನ ಒಂದು ಗ್ರಾಮದ ಒಬ್ಬಳು ಅಹ್ಮದಿ ಸ್ತ್ರೀಯಾದ ನೂರ್ ಸಾಹಿಬರು ತಮ್ಮ ಗಂಡನೊಂದಿಗೆ ಯಾವುದೋ ಎಲಿಮೆಂಟರಿ ಸ್ಕೂಲಿನಲ್ಲಿರುವ ಒಂದು ಅಂಗಡಿಯಲ್ಲಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಇದರಲ್ಲಿ ಹೆಚ್ಚಿನ ಲಾಭವಿದ್ದಿರಲಿಲ್ಲ. ಆದರೆ ದಿನನಿತ್ಯದ ಆವಶ್ಯಕತೆ ಮತ್ತು ಚಂದಾವನ್ನು ಸಂದಾಯ ಮಾಡಲು ಸಾಕಾಗಿತ್ತು. ಇವರು ಪ್ರತಿ ತಿಂಗಳು ತುಂಬ ಆಸಕ್ತಿಯಿಂದ ಚಂದಾವನ್ನು ನೀಡುತ್ತಿದ್ದರು. ಕೊರೋನ ವೈರಸಿನ ಕಾರಣದಿಂದ ಎರಡು ತಿಂಗಳು ಸ್ಕೂಲ್ ಮುಚ್ಚಿಡಲಾಗಿತ್ತು. ಆದ್ದರಿಂದ ಆದಾಯವಿಲ್ಲದಾಯಿತು. ಚಂದಾವನ್ನು ಹೇಗೆ ಸಂದಾಯ ಮಾಡುವುದು ಎಂಬುವುದರ ಬಗ್ಗೆ ಚಿಂತಿತರಾದರು. ಅವರ ಮತ್ತು ಅವರ ಮಗನ ಬಳಿಯಲ್ಲಿ ಒಂದು ಮನಿಬಾಕ್ಸ್ ಇತ್ತು. ಅದರಲ್ಲಿ ಅವರು ಹಣವನ್ನು ಕೂಡಿಡಲು ಶುರುಮಾಡಿದರು. ಅದನ್ನು ಹೊಡೆದು ತಹ್ರೀಕ್ ಜದೀದ್ ಮತ್ತು ವಖ್ಫೆ ಜದೀದ್ ಚಂದಾಗಳನ್ನು ಸಂದಾಯ ಮಾಡುತ್ತಿದ್ದರು. ತಮ್ಮ ಮಕ್ಕಳಿಗೆ ಧನತ್ಯಾಗದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಸಿಕೊಂಡು ಮಕ್ಕಳ ಈ ಹಣವನ್ನು ಚಂದಾವಾಗಿ ನೀಡಿದ್ದರು. ರಮಝಾನಿಗೆ ಮುಂಚೆ ಮನೆಯಲ್ಲಿ ಕೇವಲ ಒಂದು ಪಾತ್ರೆ ಅಕ್ಕಿ ಬಾಕಿಯಿತ್ತು. ಅದು ಎರಡು ಮಕ್ಕಳಿಗೆ ಕೂಡ ಸಾಕಾಗಿರಲಿಲ್ಲ. ಅವರು ಹೇಳುತ್ತಾರೆ: ನಾನು ಮಕ್ಕಳಿಗಾಗಿ ಬೆಳಿಗ್ಗಿನ ಉಪಹಾರ ತಯಾರಿಸಿದೆ. ಮಕ್ಕಳು ಅನ್ನ ಮತ್ತು ನೀರಿನಿಂದ ನಾಶ್ತ ಮಾಡಿದರು. ನೀವೇಕೆ ನಮ್ಮೊಂದಿಗೆ ನಾಶ್ತ ಮಾಡುತ್ತಿಲ್ಲವೆಂದು ಮಕ್ಕಳು ಕೇಳುತ್ತಿದ್ದರು. ಅನ್ನ ಬಹಳ ಕಡಿಮೆಯಿತ್ತು. ತಂದೆತಾಯಂದಿರು ತ್ಯಾಗ ಮಾಡಿದ್ದರು. ಮುಗುಳ್ನಗುವುದಲ್ಲದೆ ನಮ್ಮ ಬಳಿ ಬೇರೆ ಉತ್ತರವಿದ್ದಿರಲಿಲ್ಲ. ಮಧ್ಯಾಹ್ನದ ಸಮಯವಾಯಿತು. ಮಕ್ಕಳಿಗೆ ಹಸಿವು ಶುರುವಾಯಿತು. ಸ್ವಲ್ಪ ಅನ್ನ ಬಾಕಿಯಿತ್ತು. ಒಬ್ಬ ಮಗನು ಮಾತ್ರ ತಿನ್ನಬಹುದಾಗಿತ್ತು. ಎರಡನೆಯವನಿಗೆ ಹಸಿವು ಇತ್ತು. ಅವನು ಅಳಲು ಶುರುಮಾಡಿದನು. ನಮಗೆ ಆ ಸಮಯದಲ್ಲಿ ದುಆ ಮಾಡುವುದಲ್ಲದೆ ಬೇರೆ ಏನೂ ಮಾರ್ಗವಿದ್ದಿರಲಿಲ್ಲ. ನಮಾಝನ್ನು ನಿರ್ವಹಿಸಿ ಬಹಳ ದುಆ ಮಾಡಿದೆವು. ಕೆಲವು ಸಮಯದಲ್ಲಿ ಅಲ್ಲಾಹನ ಕಡೆಯಿಂದ ನೆರವು ಬಂತು. ಒಬ್ಬ ವ್ಯಕ್ತಿ ಬಂದನು. ಅವನಿಗೆ ತನ್ನ ಜೋಳದ ಕೃಷಿಭೂಮಿಯಲ್ಲಿ ಕೆಲಸ ಮಾಡಲು ಕೆಲಸಗಾರರ ಆವಶ್ಯಕತೆಯಿತ್ತು. ಹೀಗೆ ನನ್ನ ಗಂಡನಿಗೆ ಕೆಲಸ ಸಿಕ್ಕಿತ್ತು. ನಮ್ಮ ಆವಶ್ಯಕತೆಗಳು ಈಡೇರಿತು.

ಮಾಲಿಯ ಮುಬಲ್ಲಿಗರಾದ ಹಾಫಿಝ್ ಅತಾಉಲ್ ಅಲೀಂ ಸಾಹಿಬರು ಬರೆಯುತ್ತಾರೆ: ಒಬ್ಬ ಎಪ್ಪತ್ತು ವಯಸ್ಸಿನ ವೃದ್ಧ ಅಹ್ಮದಿಯಾದ ಯಾತಾರ ತರ್‌ಗೋರೆ ಸಾಹಿಬರು ಪ್ರತಿ ತಿಂಗಳು ನಿಯತವಾಗಿ ಚಂದಾ ಸಂದಾಯ ಮಾಡುತ್ತಿದ್ದರು. ಅವರು ವಸಿಯ್ಯತ್ ವ್ಯವಸ್ಥೆಯಲ್ಲೂ ಸೇರಿದ್ದರು. ಇವರು ಚಂದಾವನ್ನು ಸಂದಾಯ ಮಾಡಲು ಮಣ್ಣಿನ ರಸ್ತೆಯಲ್ಲಿ ಸೈಕಲಿನಲ್ಲಿ ಏಳು ಕಿಲೋಮೀಟರ್ ದಾಟಿ ಬರುತ್ತಿದ್ದರು. ಕೆಲವು ಕಾಲಗಳ ಹಿಂದೆ ಅವರ ಭೂಮಿಯನ್ನು ಸಮೀಪ ಗ್ರಾಮದ ಚೀಫ್ ವಶಪಡಿಸಿದರು. ಅದರ ಕಾರಣದಿಂದ ಅವರು ಚಿಂತಿತರಾಗಿದ್ದರು. ಅವರು ನನಗೂ ದುಆಗಾಗಿ ಪತ್ರವನ್ನು ಬರೆದಿದ್ದರು. ಹೆಚ್ಚಿನ ಹಣವನ್ನು ಚಂದಾವಾಗಿ ನೀಡಲು ಶುರುಮಾಡಿದರು. ಅಲ್ಲಾಹನು ಅನುಗ್ರಹಿಸಿದನು. ಅವರ ವಿರುದ್ಧ ಮೊದಲು ತೀರ್ಮಾನ ಮಾಡಿದ್ದ ಅದೇ ಜಡ್ಜ್ ಅವರ ಪರವಾಗಿ ತೀರ್ಪನ್ನು ಮಾಡಿದರು. ಅವರ ಭೂಮಿ ಅವರಿಗೆ ವಾಪಾಸ್ಸು ಸಿಕ್ಕಿತು. ಅದು ಮರಳಿ ಸಿಗುವುದೆಂಬ ಪ್ರತೀಕ್ಷೆಯಿದ್ದಿರಲಿಲ್ಲ. ಏಕೆಂದರೆ ಗ್ರಾಮದ ಚೀಫ್ ಹಿರಿಯ ಪದವಿಯನ್ನು ಹೊಂದಿದ್ದ ಮತ್ತು ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ಚೀಫಿನ ವಿರುದ್ಧ ಜಡ್ಜ್ ತೀರ್ಪು ನೀಡಿವರು ಎಂದು ಯಾರೂ ಊಹಿಸಿರಲಿಲ್ಲ. ಈ ದೈವಿಕ ಸಹಾಯದ ಈ ಘಟನೆಯನ್ನು ಆ ವೃದ್ಧ ವ್ಯಕ್ತಿ ಗ್ರಾಮದಲ್ಲೂ ರೀಜನನಲ್ಲಿ ಬಂದು ಮಸೀದಿಯಲ್ಲೂ ಜುಮಾ ನಮಾಝಿನ ನಂತರ ಎಲ್ಲ ಜನರ ಮುಂದೆ ವಿವರಿಸಿದರು. ಇದರಿಂದ ಇತರ ಜನರು ಸಹ ತುಂಬಾ ಪ್ರಭಾವಿತರಾದರು. ಹೀಗೆ ಅಲ್ಲಾಹನು ಭಯದ ಸ್ಥಿತಿಯನ್ನು ಸಮಾಧಾನವನ್ನಾಗಿ ಬದಲಾಯಿಸುತ್ತಾನೆ.

ಫ್ರಾನ್ಸಿನ ಅಮೀರ್ ಸಾಹಿಬರು ಬರೆಯುತ್ತಾರೆ: ಒಬ್ಬ ಸಹೋದರರ ಹೇಳುತ್ತಾರೆ: ನಾನು ಈ ವರ್ಷದ ನನ್ನ ತಹ್ರೀಕ್ ಜದೀದಿನ ವಾಗ್ದಾನವನ್ನು ಕಳೆದ ವರ್ಷದ ಚಂದಾದ ಇಮ್ಮಡಿ ಮಾಡಿ ಒಂದು ಸಾವಿರ ಯೂರೋ ಬರೆದಿದ್ದೆ. ಆದರೆ, ಲಾಕ್‌ಡೌನಿನ ಕಾರಣದಿಂದ ಆದಾಯ ಪೂರ್ಣವಾಗಿ ಕಡಿಮೆಯಾಯಿತು. ಚಂದಾದ ವಾಗ್ದಾನ ಈಡೇರಿಸಲು ಸಾಧ್ಯವೆಂದು ತೋರುತ್ತಿರಲಿಲ್ಲ. ನಾನು ಸ್ವಲ್ಪ ಸಾಲಗಳನ್ನು ಸಹ ಪಡೆದಿದ್ದೆ. ಅದನ್ನು ಸಹ ಸಂದಾಯ ಮಾಡಬೇಕಾಗಿತ್ತು. ಒಂದು ಸಾವಿರ ಯೂರೋದ ವಾಗ್ದಾನ ನೆರವೇರಿಸುವುದು ಕಷ್ಟವೆಂದು ತೋರುತ್ತಿತ್ತು. ದುಆ ಮಾಡುವುದಲ್ಲದೆ ಬೇರೆ ಮಾರ್ಗವಿದ್ದಿರಲಿಲ್ಲ. ಸಂಬಳ ಎಷ್ಟೆ ಸಿಕ್ಕಿದ್ದರೂ, ತಿನ್ನಲು ಏನೇ ಇದ್ದರೂ ಇಲ್ಲದಿದ್ದರೂ ಏನೇ ಆದರೂ ನನ್ನ ವಾಗ್ದಾನವನ್ನು ಖಂಡಿತ ಈಡೇರಿಸಬೇಕೆಂದು ಮನಸ್ಸಲ್ಲಿ ನಿರ್ಧರಿಸಿದ್ದೆ. ಅಲ್ಲಾಹನ ಅನುಗ್ರಹದಿಂದ ಮಾತ್ರ ಅದೇ ವಾರ, ಲಾಕ್‌ಡೌನಿನಲ್ಲಿ ಕೆಲಸ ಮಾಡಿದ ಕಾರಣದಿಂದ ನನ್ನ ಮಾಲಿಕನ ಕಡೆಯಿಂದ ನನ್ನ ವಾಗ್ದಾನದ ಪ್ರಕಾರ ಒಂದು ಸಾವಿರ ಯೂರೋ ಬೋನಸ್ ಆಗಿ ಲಭಿಸಿತು. ಇದು ಕೇವಲ ಅಲ್ಲಾಹನ ಅನುಗ್ರಹದಿಂದ ನಾನು ವಾಗ್ದಾನ ಮಾಡಿದಷ್ಟು ನನಗೆ ಲಭಿಸಿತ್ತು. ನನ್ನ ಮಾಲಿಕನು ನನಗೆ ಈ ಸಂಕಷ್ಟದ ಕಾಲದಲ್ಲಿ ಇಷ್ಟು ಅಧಿಕ ಬೋನಸ್ ನೀಡುವನು ಎಂದು ಊಹಿಸಿಯೂ ಇರಲಿಲ್ಲ.

ಲಾಕ್‌ಡೌನಿನ ಪ್ರಸ್ತಾಪ ಬಂದ ಕಾರಣ ಹೇಳುತ್ತಿದ್ದೇನೆ. ಇಂದಿನಿಂದ ಇಲ್ಲಿ ನಾಲ್ಕು ವಾರಗಳಿಗೆ ಪುನಃ ಲಾಕ್‌ಡೌನ್ ಶುರುವಾಗಿದೆ. ಆದ್ದರಿಂದ ಇಂದು ಮಸೀದಿಯಲ್ಲಿ ಸಹ ನಮಾಝ್ ಮಾಡುವ ಯಾರೂ ನನ್ನ ಮುಂದೆಯಿಲ್ಲ. ಏಕೆಂದರೆ ಖುತ್‌ಬ ಕೊಡಬಹುದು ಆದರೆ, ಮುಅಧ್ದಿನ್ ಹೊರತು ಬೇರೆ ಯಾರೂ ಇರಬಾರದು ಎಂದು ಸರ್ಕಾರ ಹೇಳಿದೆ.

ಕೆನಡದಿಂದ ಒಬ್ಬ ಸಿರಿಯನ್ ಅಹ್ಮದಿ ನನಗೆ ಬರೆದಿರುವರು. ಎಲ್ಲಾದರೂ ಘಟನೆಯನ್ನು ವಿವರಿಸಬೇಕಾಗಿ ಬಂದರೆ, ಅವರ ಹೆಸರು ಹೇಳಬೇಡಿರಿ ಎಂದು ಸಹ ಹೇಳಿದ್ದಾರೆ. ಅವರು ಹೇಳುತ್ತಾರೆ: ಇಸ್ಲಾಮಾಬಾದಿನಲ್ಲಿ ಹೊಸ ಮರ್ಕಝ್

ತಯಾರಾಗುವಾಗ, ಅದರ ಖುಶಿಯ ಕಾರಣದಿಂದ, ಅದಕ್ಕೆ ಶುಭಾಶಯ ಕೋರುವ ರೂಪದಲ್ಲಿ, ತಹ್ರೀಕ್ ಜದೀದಿನಲ್ಲಿ ಐದು ಸಾವಿರ ಕೆನಡಿಯನ್ ಡಾಲರ್ ನೀಡುವೆನು ಎಂದು ನಿರ್ಧರಿಸಿದ್ದೆ. ಕಳೆದ ವರ್ಷ ಅವರು ವಾಗ್ದಾನ ಮಾಡಿದ್ದರು. ಅವರು ಹೇಳುತ್ತಾರೆ: ಆ ದಿನಗಳಲ್ಲಿ ನನ್ನ ಮಾಸಿಕ ವರಮಾನ ನಾಲ್ಕು ಸಾವಿರ ಕೆನಡಿಯನ್ ಡಾಲರ್ ಆಗಿತ್ತು. ಉತ್ತಮ ಸ್ಥಿತಿಯಲ್ಲಿದ್ದೆ. ಕೆಲವೇ ತಿಂಗಳಲ್ಲಿ ನಾನು ಹೊಸ ವಾಹನವನ್ನು ಖರೀದಿ ಮಾಡಿದೆ. ಉದ್ಯೋಗ ಸಹ ಬದಲಿಸಿದೆ. ಆದಾಯ ವರ್ಧಿಸಿತು. ಉತ್ತಮ ಸ್ಥಿತಿಯಲ್ಲಿ ಇದ್ದರೂ, ಐದು ಸಾವಿರ ಚಂದಾದ ವಾಗ್ದಾನವನ್ನು ಈಡೇರಿಸುವಷ್ಟು ಹಣವಿದ್ದಿರಲಿಲ್ಲ. ಏಕೆಂದರೆ ನಾನು ಸೀರಿಯದಲ್ಲಿರುವ ನನ್ನ ಮನೆಯವರಿಗೂ ಹಣವನ್ನು ಕಳಿಸುತ್ತಿದ್ದೆ. ಅಲ್ಲಾಹನು ನನ್ನ ಚಂದಾದ ವಾಗ್ದಾನವನ್ನು ಈಡೇರಿಸಲು ಸಾಧ್ಯವಾಗಲು ದಿನಾಲೂ ದುಆ ಮಾಡುತ್ತಿದ್ದೆ. 2020 ಜನವರಿಯಲ್ಲಿ ಒಂದು ರಸ್ತೆ ಅಪಘಾತವಾಯಿತು. ಇದರಿಂದ ಒಂದು ತಿಂಗಳು ಕೆಲಸಮಾಡಲು ಸಾಧ್ಯವಾಗಲಿಲ್ಲ. ಮನೆಯ ಖರ್ಚಿಗಾಗಿ ಸಾಲ ಪಡೆಯಬೇಕಾಗಿ ಬಂತು. ಕೊರೋನದ ಕಾರಣದಿಂದ ಆರ್ಥಿಕ ಸ್ಥಿತಿ ಇನ್ನೂ ಹೆಚ್ಚಿಗೆ ಹಾಳಾಯಿತು. ಲಾಕ್‌ಡೌನ್ ಸಹ ಆಯಿತು. ಫೆಬ್ರವರಿ ಮಾರ್ಚ್ ತಿಂಗಳಲ್ಲಿ ಪತಿ ಪತ್ನಿ ಅತ್ಯಂತ ಅಗ್ಗದ ಊಟವನ್ನು ಮಾಡುತ್ತಿದ್ದರು. ಕಡಿಮೆ ಪಕ್ಷ ರಮಝ಼ಾನಿನಲ್ಲಿ ವಾಗ್ದಾನವನ್ನು ಈಡೇರಿಸಬೇಕೆಂದು ಪ್ರಯತ್ನಿಸುತ್ತಿದ್ದರು. ದುಆ ಸಹ ಮಾಡುತ್ತಿದ್ದರು. ಆದರೆ ಇದು ಅವರಿಗೆ ನಡೆಯದ ಕನಸೆಂದು ತೋರುತ್ತಿತ್ತು. ಅವರು ಹೇಳುತ್ತಾರೆ: ಅನಂತರ ನಾನು ಟಾಕ್ಸಿಯ ಕೆಲಸವನ್ನು ಬಿಟ್ಟು, ಊಟದ ಡೆಲಿವರಿಯ ಕೆಲಸವನ್ನು ಶುರುಮಾಡಿದೆ. ಅಲ್ಲಾಹನ ಅನುಗ್ರಹದಿಂದ ಸ್ಥಿತಿಗತಿಗಳು ಸುಧಾರಿಸಲು ಶುರುವಾಯಿತು. ಖ಼ಲೀಫ಼ರ ದುಆದ ವಾರಸುದಾರರಾಗಲು ರಮಝ಼ಾನ್ ಮುಗಿಯುದಕ್ಕೆ ಮುಂಚಿತವಾಗಿ ವಾಗ್ದಾನವನ್ನು ಈಡೇರಿಸಲು ಪುನಃ ದೃಢನಿರ್ಧಾರ ಮಾಡಿದೆನು. ಅನಂತರ ನನ್ನ ಕೆಲಸದ ಸಮಯವನ್ನು ವರ್ಧಿಸುತ್ತಾ ದಿನಾಲೂ ಹನ್ನೊಂದು ಹನ್ನೆರಡು ಗಂಟೆಗಳ ಕಾಲ ಕೆಲಸಮಾಡಲು ಶುರುಮಾಡಿದೆನು. ಅನಂತರ ನಮಗೆ ನಾನು ಊಹಿಸಲು ಸಾಧ್ಯವಿಲ್ಲದ ಕಡೆಯಿಂದ ನನಗೆ ಆದಾಯ ಬರಲು ಶುರುವಾಯಿತು. ನನ್ನ ಮಾಸಿಕ ವರಮಾನ ಒಂಬತ್ತು ಸಾವಿರ ಡಾಲರ್‌ರಷ್ಟು ಆಯಿತು. ಹೀಗೆ ಅಲ್ಲಾಹನ ಅನುಗ್ರಹದಿಂದ ರಮಾಝ಼ಾನ್ ಶುರುವಾಗುವುದಕ್ಕೆ ಹತ್ತು ದಿನಗಳಿಗೆ ಮುಂಚಿತವಾಗಿ ವಾಗ್ದಾನವನ್ನು ಪೂರ್ತಿ ಮಾಡಿದೆ. ನನ್ನ ವಾಗ್ದಾನ ಇದಕ್ಕಿಂತ ಮೂರು ಪಟ್ಟು ಅಧಿಕವಾಗಿದ್ದರೂ ಸಹ ವರ್ಷ ಕೊನೆಗೊಳ್ಳುವಷ್ಟರಲ್ಲಿ ನನಗೆ ವಾಗ್ದಾನವನ್ನು ಈಡೇರಿಸಲು ಸಾಧ್ಯವಾಗುತ್ತಿತ್ತು ಎಂದು ನನಗೆ ಈಗ ದೃಢವಿಶ್ವಾಸ ಉಂಟಾಗಿದೆ.ಅವರು ಸಿರಿಯಾದಲ್ಲಿರುವ ಬಡವರಾದ ಸಂಬಂಧಿಕರಿಗೂ ಧನಸಹಾಯ ಮಾಡುತ್ತಿದ್ದರು.

ಸೀರಲ್ಯೋನಿನ ಅಮೀರ್ ಸಾಹಿಬರು ಬರೆಯುತ್ತಾರೆ: ಫ್ರೀ ಟೌನ್ ಜಮಾಅತಿನ ಇಮಾಮ್ ಸಾಹಿಬರಾದ ಉಸ್ಮಾನ್ ಸಾಹಿಬ್ ಹೇಳುತ್ತಾರೆ: ನಾವು ಎಲ್ಲ ವರ್ಷ ತಹ್ರೀಕ್ ಜದೀದ್ ಚಂದಾವನ್ನು ಸಂದಾಯ ಮಾಡುತ್ತಿರುತ್ತೇವೆ. ಆದರೆ ನಾವು ಕೊಡುವ ಚಂದಾ ಬಹಳ ಕಡಿಮೆ ಎಂದು ಚಿಂತಿಸುತ್ತಿದ್ದೆವು. ಅವರು ಹೇಳುತ್ತಾರೆ: ನನಗೆ ಯಾವುದೇ ಉದ್ಯೋಗವಿದ್ದಿರಲಿಲ್ಲ. ಒಂದು ಸಣ್ಣ ಅಂಗಡಿಯಿತ್ತು. ಅದನ್ನು ನಾನು ಮತ್ತು ನನ್ನ ಹೆಂಡತಿ ನಡೆಸುತ್ತಿದ್ದೆವು. ಅದರಿಂದ ಕಷ್ಟದಿಂದ ಮನೆಯ ಖರ್ಚುಗಳು ನಡೆಯುತ್ತಿತ್ತು. ಪದೇ ಪದೇ ತಹ್ರೀಕ್ ಜದೀದಿನ ಚಂದಾದ ಘೋಷಣೆಯನ್ನು ಕೇಳುತ್ತಿದ್ದೆವು. ಹಣವನ್ನು ಕೂಡಿಸಿಡಲು ಒಂದು ಹಣದ ಡಬ್ಬವನ್ನು ಮಾಡಲು ಮತ್ತು ಪ್ರತಿದಿನ ಸ್ವಲ್ಪ ಹಣ ಅದರಲ್ಲಿ ಹಾಕಲು ನನ್ನ ಹೆಂಡತಿ ಹೇಳಿದಳು. ಅಕ್ಟೋಬರಿನ ತಿಂಗಳಲ್ಲಿ ಅದರಲ್ಲಿ ಒಟ್ಟುಗೂಡುವ ಹಣವನ್ನು ತಹ್ರೀಕ್ ಜದೀದಿನ ಚಂದಾದಲ್ಲಿ ನೀಡಲು ತೀರ್ಮಾನಿಸಿದೆವು. ಕಳೆದ ವರ್ಷದ ವರೆಗೆ ನಾವು ಎಂದಿಗೂ ಇಪ್ಪತ್ತು ಸಾವಿರ ಲಿಯೋನ್‌ಗಿಂದ ಹೆಚ್ಚಿನ ಚಂದಾವನ್ನ ನೀಡಿರಲಿಲ್ಲ. ಆದರೆ ಈ ವರ್ಷ ಅಲ್ಲಾಹನ ಅನುಗ್ರಹದಿಂದ ಈ ರೀತಿಯಿಂದ ನಾವು 2 ಲಕ್ಷ ಲಿಯೋನ್‌ಗಿಂತ ಹೆಚ್ಚಿನ ಹಣವನ್ನು ಚಂದಾ ಆಗಿ ಪಾವತಿಸಿದೆವು. ನನ್ನ ಎರಡು ಸಹೋದರರು ಸಹ ಈ ರೀತಿಯನ್ನು ಅವಲಂಬಿಸಿದರು. ಅವರು ಸಹ ಒಂದು ಲಕ್ಷ ಮೂವತ್ತು ಸಾವಿರ ಲಿಯೋನ್‌ನಷ್ಟು ಸಂದಾಯ ಮಾಡಿದರು. ಈ ರೀತಿಯನ್ನು ಅವಲಂಬಿಸಿದ ಕಾರಣದಿಂದ ಈ ವರ್ಷ ಉತ್ತಮ ರೀತಿಯಲ್ಲಿ ಧನತ್ಯಾಗ ಮಾಡಲು ಸೌಭಾಗ್ಯ ಲಭಿಸಿದ ಕಾರಣದಿಂದ ನನ್ನ ಪತ್ನಿ ವಿಶೇಷವಾಗಿ ತುಂಬ ಸಂತೋಷಗೊಂಡಿದ್ದಾಳೆ. ಈ ರೀತಿಯನ್ನು ಅವಲಂಬಿಸಿದ ಕಾರಣದಿಂದ ನಮ್ಮ ಧನತ್ಯಾಗದ ಮಟ್ಟವೂ ವರ್ಧಿಸಿದೆ. ಅಲ್ಲಾಹನ ಅನುಗ್ರಹದಿಂದ ವರವಮಾನದಲ್ಲೂ ವರ್ಧನೆಯುಂಟಾಗಿದೆ.ಅಲ್ಲಾಹನು ನಮಗೆ ಕಲಿಸಿಕೊಟ್ಟ ಈ ರೀತಿಯನ್ನು ನಾವು ಇನ್ನು ಮುಂದೆ ಜಾರಿಯಲ್ಲಿರಿಸುತ್ತೇವೆ.

ಮಾರ್ಶಲ್ ಐಲೇಂಡ್ ಇನ್ನೊಂದು ದೂರದ ಪ್ರದೇಶವಾಗಿದೆ. ಅಮೇರಿಕದಿಂದಲೂ ದೂರವಿದೆ. ಇಲ್ಲಿಯ ಮುಬಲ್ಲಿಗ್ ಸಾಹಿಬರಾದ ಸಾಜಿದ್ ಇಕ್ಬಾಲ್ ಸಾಹಿಬರು ಬರೆಯುತ್ತಾರೆ: ಮಾರ್ಶಲ್ ಐಲೇಂಡಿನಲ್ಲಿ ನಾಸಿರ್ ಕಿಯೋಶಿ ಆಕನ್ ಸಾಹಿಬ್ ಎಂಬ ಒಬ್ಬರು ಇದ್ದಾರೆ. ಈ ವರ್ಷ ಜಮಾಅತಿನ ಸಹೋದರರಿಂದ ತಹ್ರೀಕ್ ಜದೀದಿನ ವಾಗ್ದಾನಗಳನ್ನು ಪಡೆಯುತ್ತಿದ್ದಾಗ, ಕೋಶಿ ಸಾಹಿಬರು ಹೇಳಿದರು: ನನಗೆ ಯಾವುದೇ ಉದ್ಯೋಗವಿಲ್ಲ, ವಾಸಿಸಲು ಸ್ಥಳವಿಲ್ಲ. ಊಟಕ್ಕೆ ಸಹ ಜಮಾಅತಿನ ಲಂಗರ್‌ನನ್ನು ಅವಲಂಬಿಸಿದ್ದೇನೆ. ಆಗ ನಾವು ಅವರಿಗೆ ಮಸೀದಿಯಲ್ಲಿ ಇರಲು ಜಾಗಕೊಟ್ಟೆವು. ಅಲ್ಪವಾದ ಮೊಬಲಗಾದರೂ ಪರವಾಗಿಲ್ಲ ಏನಾದರೂ ಚಂದಾದ ವಾಗ್ದಾನವನ್ನು ಮಾಡಿರಿ ಮತ್ತು ಅಲ್ಲಾಹನ ಸಹಾಯ ಲಭಿಸಲು ದುಆ ಸಹ ಮಾಡಿರಿ ಎಂದು ನಾವು ಹೇಳಿದೆವು. ಆಗ ಅವರು ಎರಡು ಅಮೇರಿಕನ್ ಡಾಲರ್‌ಗಳ ವಾಗ್ದಾನವನ್ನು ಬರೆಸಿದರು.ಕೆಲವು ತಿಂಗಳ ನಂತರ ಅವರು ಮಿಶನ್ ಹೌಸಿಗೆ ಬಂದರು. ಐವತ್ತು ಡಾಲರ್‌ಗಳು ತಹ್ರೀಕ್ ಜದೀದಿಗೆ ನೀಡಿದರು. ಅವರು ಹೇಳಿದರು: ಅಲ್ಲಾಹನು ನನ್ನ ಪ್ರಾರ್ಥನೆಗಳನ್ನು ಅಂಗೀಕರಿಸಿದ್ದಾನೆ. ನನಗೆ ಉದ್ಯೋಗವೂ ಸಿಕ್ಕಿತ್ತು ವಾಸಿಸಲು ಅಪಾರ್ಟ್‌ಮೆಂಟ್ ಸಹ ಲಭಿಸಿದೆ. ಈಗ ಅವರು ಊಟ ಪಾನೀಯದ ವ್ಯವಸ್ಥೆ ಸ್ವತಃ ಮಾಡಲು ಬಲ್ಲವರಾದರು. ವಿಶ್ವಾಸವನ್ನು ವರ್ಧಿಸಲು ಅಲ್ಲಾಹನು ಹೇಗೆಲ್ಲ ಸಹಾಯ ಮಾಡುತ್ತಾನೆ ಎಂದು ನೋಡಿರಿ. ಈ ರೀತಿಯಿಂದ ನಮ್ಮ ಮುಬಲ್ಲಿಗರು ಸಹ ಕೆಲವು ಸಹ ಅಚ್ಚರಿಗೊಳ್ಳುತ್ತಾರೆ.

ಗ್ಯಾಂಬಿಯದ ಅಮೀರ್ ಸಾಹಿಬರು ಬರೆಯುತ್ತಾರೆ: ಬಸೆಯಲ್ಲಿ ತಹ್ರೀಕ್ ಜದೀದಿಗೆ ಸಂಬಂಧಿಸಿ ಪ್ರೋಗ್ರಾಮ್ ಮಾಡಲಾಗಿತ್ತು. ವಾಗ್ದಾನಗಳನ್ನು ಈಡೇರಿಸಲು ಗಮನಹರಿಸಲಾಯಿತು. ಈ ಪ್ರೋಗ್ರಾಮಿನಲ್ಲಿ ಮೂಸಾ ಸಾಹಿಬರು ಸಹ ಭಾಗವಹಿಸಿದ್ದರು. ಅವರ ಬಳಿ ಚಂದಾವಾಗಿ ನೀಡಲು ಏನೂ ಇದ್ದಿರಲಿಲ್ಲ. ಬಹಳ ಅಸಮಾಧಾನಗೊಂಡಿದ್ದರು. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರಲ್ಲಿ ಒಳಪಡಲಿಕ್ಕಾಗಿ ತಹಜ್ಜುದ್ ನಮಾಝಿ಼ನಲ್ಲಿ ಎದ್ದು ಅಲ್ಲಾಹನ ಸನ್ನಿಧಿಯಲ್ಲಿ ಬಾಗುತ್ತಾ ಅವನ ಅನುಗ್ರಹವನ್ನು ಬೇಡುತ್ತಿದ್ದರು. ಹೀಗೆ ಅಲ್ಲಾಹನು ಅವರ ಹೃದಯದ ಅಭಿಲಾಷೆಯನ್ನು ಸ್ವೀಕರಿಸಿದನು. ಕೆಲವೇ ದಿನಗಳು ಕಳೆದಿದ್ದೆವು. ಇವರು ಒಂದು ಕಂಪೆನಿಯೊಂದಿಗೆ ಕಾಂಟ್ರಾಕ್ಟಿನಲ್ಲಿ ಕೆಲಸಮಾಡುತ್ತಿದ್ದರು. ಆ ಕಂಪೆನಿಯವರು ಬಸೆಯಲ್ಲಿ ಎರಡು ದಿನಗಳ ಪ್ರೋಗ್ರಾಮ್ ಮಾಡಲು ಹೋಗುತ್ತಿದ್ದರು. ಅದರಲ್ಲಿ ಹಾಜರಾಗಲು ಇವರನ್ನು ಕರೆದರು. ಅದಕ್ಕೆ ಪ್ರತಿಫಲವಾಗಿ ನಾಲ್ಕು ಸಾವಿರ ಡಿಲಾಸಿ ಕೊಡುವುದಾಗಿ ವಾಗ್ದಾನ ಮಾಡಿದರು. ಇವರು ತುಂಬ ಸಂತೋಷಗೊಂಡರು. ಎರಡು ದಿನಗಳ ಪ್ರೋಗ್ರಾಮಿನಲ್ಲಿ ಭಾಗವಹಿಸಿದ ನಂತರ ತಮ್ಮ ವಾಗ್ದಾನವನ್ನು ವರ್ಧಿಸುತ್ತಾ ಎರಡು ಸಾವಿರ ಡಿಲಾಸಿ ಮಾಡಿದರು. ಅಲ್ಲಾಹನು ಅವರಿಗೆ ಆದಾಯದ ಹೆಚ್ಚಿನ ಮಾರ್ಗಗಳನ್ನು ಉಂಟುಮಾಡಿದನು. ಇತರ ಅಹ್ಮದಿ ಸಹೋದರರಿಗೂ ತಹ್ರೀಕ್ ಜದೀದಿನ ಪ್ರಾಮುಖ್ಯತೆ ಮತ್ತು ಧನತ್ಯಾಗವನ್ನು ಮಾಡಲು ಪ್ರೇರೇಪಿಸುತ್ತಿರುತ್ತಾರೆ.

ಫಿಲಿಪ್ಪೈನಿನ ಜಮಾಅತ್ ಸದರ್ ಮತ್ತು ಮುಬಲ್ಲಿಗ್ ಆಗಿರುವ ತಲ್‌ಹ ಅಲಿ ಸಾಹಿಬರು ಹೇಳುತ್ತಾರೆ: ಫಿಲಿಪ್ಪೈನಿನ ಹಳೆಯ ಜಮಾಅತುಗಳಲ್ಲಿ ಒಂದು ಸೀವಮಾನೋಲ್ ಜಮಾಅತಿದೆ. ಇಲ್ಲಿನ ಹೆಚ್ಚಿನವರು ಸ್ಕೂಲಿನಲ್ಲಿ ಕೆಲಸಮಾಡುವವರಾಗಿದ್ದರು. ಈ ಜಮಾಅತಿನ ಸದರ್ ಜಮಾಅತ್ ತಮ್ಮ ಟಾರ್ಗಟ್‌ಗಿಂತ ಹೆಚ್ಚಿಗೆ ಚಂದಾ ವಸೂಲು ಮಾಡಿದ ನಂತರ ನನಗೆ ಮೆಸೆಜ್ ಮಾಡಿ ಹೀಗೆ ತಿಳಿಸಿದರು: ಮೂರು ಶಿಕ್ಷಕರನ್ನು ವಿಶೇಷವಾಗಿ ದುಆಗಳಲ್ಲಿ ನೆನಪಿನಲ್ಲಿಡಿರಿ. ಏಕೆಂದರೆ, ಅವರಿಗೆ ಮಾರ್ಚಿನಿಂದ ಸಂಬಳ ಸಿಕ್ಕಿಲ್ಲ. ಹೀಗಿದ್ದರೂ ಅವರು ತಹ್ರೀಕ್ ಜದೀದಿನಲ್ಲಿ ಉತ್ಸಾಹದಿಂದ ಭಾಗಿಯಾಗಿದ್ದರು. ಈಗ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ದೂರ ದೂರ ಪ್ರದೇಶದ ಜನರು ಸಹ ಹೇಗೆ ತ್ಯಾಗಗಳನ್ನು ಮಾಡುತ್ತಾರೆ ಎಂದು ನೋಡಿರಿ.

ಕಬಾಬೀರಿನ ಮುಬಲ್ಲಿಗ್ ಸಾಹಿಬರಾದ ಶಂಸುದ್ದೀನ್ ಸಾಹಿಬ್ ಬರೆಯುತ್ತಾರೆ: ಅಲ್‌ಖ಼ಲೀಲ್ ಫೆಲಸ್ತೀನಿನ ಹೊಸ ಜಮಾಅತಾಗಿದೆ. ಇಲ್ಲಿನ ಹೆಚ್ಚಿನ ಸಹೋದರರ ಆರ್ಥಿಕ ಸ್ಥಿತಿ ಬಹಳ ದುರ್ಬಲವಾಗಿದೆ. ಆದರೆ ಅಲ್ಲಾಹನ ಅನುಗ್ರಹದಿಂದ ಎಲ್ಲರೂ ತಹ್ರೀಕ್ ಜದೀದಿನಲ್ಲಿ ಭಾಗವಹಿಸಿದ್ದರು. ಇಬ್ರಾಹೀಂ ಸಾಹಿಬರು ಅಲ್‌ಖ಼ಲೀಲ್ ಜಮಾಅತಿನ ನವ ಅಹ್ಮದಿಯಾಗಿದ್ದರು. ಅವರು ಬೈಅತ್ ಮಾಡಿದ ತಕ್ಷಣವೇ ಧನತ್ಯಾಗದಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಈ ಸಲ ಹೆಚ್ಚಿನ ಮೊಬಲಗನ್ನು ತಹ್ರೀಕ್ ಜದೀದಿಗೆ ನೀಡಿದರು. ಅವರು ಹೇಳುತ್ತಾರೆ: ಒಬ್ಬ ಸಹೋದರನು ನನ್ನಿಂದ ಸಾಲವನ್ನು ಪಡೆದಿದ್ದರು. ಅವರು ಯಾವುದೋ ನಿರ್ಬಂಧಾವಸ್ಥೆಯ ಕಾರಣದಿಂದ ಸಾಲವನ್ನು ವಾಪಾಸ್ಸು ಕೊಟ್ಟಿರಲಿಲ್ಲ. ಬಹಳ ಕಾಲದಿಂದ ಅದಕ್ಕಾಗಿ ಕಾಯುತ್ತಿದ್ದೆ. ತಹ್ರೀಕ್ ಜದೀದಿನ ಚಂದಾ ಸಹ ಕೊಡಲು ಬಾಕಿಯಿತ್ತು. ಸ್ವಲ್ಪ ಆರ್ಥಿಕ ಕಷ್ಟತೆಗಳು ಸಹ ಇತ್ತು. ಸಿಗಬೇಕಾದ ಮೊಬಲಗು ಅದರ ಪ್ರತೀಕ್ಷೆ ಸಹ ಇದ್ದಿರಲಿಲ್ಲ. ಹೇಗಿದ್ದರೂ ಅಮೀರ್ ಸಾಹಿಬರನ್ನು ಭೇಟಿಯಾದಾಗ, ಹಣದ ಏರ್ಪಾಡು ಮಾಡಿ ನಾನು ಚಂದಾವನ್ನು ಸಂದಾಯ ಮಾಡಿದೆ. ನನ್ನ ಸ್ಥಿತಿಯನ್ನು ಅರಿತ ಅಮೀರ್ ಸಾಹಿಬರು ಹೇಳಿದರು: ಈಗ ನೀವು ತಹ್ರೀಕ್ ಜದೀದಿನ ಚಂದಾ ಅಲ್ಲಾಹನ ಮಾರ್ಗದಲ್ಲಿ ಸಂದಾಯ ಮಾಡಿದ್ದೀರಿ. ಆದ್ದರಿಂದ ಖಂಡಿತ ಅಲ್ಲಾಹನು ಅನುಗ್ರಹಿಸುವನು. ಹೀಗೆ ಅಮೀರ್ ಸಾಹಿಬ್ ಹೋಗಿ ಕೆಲವು ತಾಸುಗಳು ಆಗುವಷ್ಟರಲ್ಲಿ ನನ್ನಿಂದ ಸಾಲ ಪಡೆದಿದ್ದ ವ್ಯಕ್ತಿ ನನ್ನ ಹಣವನ್ನು ವಾಪಾಸ್ಸು ಕೊಟ್ಟರು. ಹೀಗೆ ನನ್ನ ಎಲ್ಲ ಚಿಂತೆಗಳು ದೂರವಾಯಿತು.

ವೀಜ಼ಾಬಾದನ್ ಜರ್ಮನಿಯ ಒಬ್ಬ ಸಹೋದರ ಇದ್ದಾರೆ. ಅವರು ತಹ್ರೀಕ್ ಜದೀದಿನ ಆಫಿಸಿಗೆ ಬಂದು ಹೇಳಿದರು: ನನ್ನ ಅಸ್ಯೈಲಂ ಕೇಸ್, ಒಬ್ಬ ಜಡ್ಜಿನ ಬಳಿಯಲ್ಲಿ ಇತ್ತು. ಅವರು ಅದನ್ನು ಮಂಜೂರು ಮಾಡುತ್ತಿರಲಿಲ್ಲ. ತಹ್ರೀಕ್ ಜದೀದಿಗೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ವಿಶ್ವಾಸವರ್ಧಕ ಘಟನೆಗಳನ್ನು ಕೇಳಿದ್ದೆನು. ಒಂದು ಸಾವಿರ ಯೂರೋ ತಹ್ರೀಕ್ ಜದೀದಿಗೆ ಪಾವತಿಸಲು ನಾನು ನಿಶ್ಚಯಿಸಿದೆ. ನನ್ನ ಕೇಸ್ ಆ ಜಡ್ಜಿನ ಬಳಿಯಿಂದ ಬೇರೊಂದು ಜಡ್ಜಿನ ಬಳಿಗೆ ಹೋಗುವಂತೆ

ಅಲ್ಲಾಹನು ಮಾಡಿದ್ದನು. ಅಲ್ಲಾಹನ ಅನುಗ್ರಹದಿಂದ ಕೇಸ್ ಮಂಜೂರಾಯಿತು. ಈಗ ಅಲ್ಲಾಹನೊಡನೆ ಮಾಡಿದ ವಾಗ್ದಾನವನ್ನು ಪೂರ್ತಿ ಮಾಡಲು ಬಂದಿದ್ದೇನೆ. ಹೀಗೆ ಅವರು ವಾಗ್ದಾನ ಮಾಡಿದ್ದನ್ನು ಈಡೇರಿಸಿದರು.

ಯು.ಕೆ.ಯ ಸೆಕ್ರಟರಿ ತಹ್ರೀಕ್ ಜದೀದ್ ಹೇಳುತ್ತಾರೆ: ಬ್ರಿಟನ್ ಜಮಾಅತಿನ ಒಬ್ಬ ಸಹೋದರರನಿಗೆ ಉದ್ಯೋಗವಿದ್ದಿರಲಿಲ್ಲ. ತಹ್ರೀಕ್ ಜದೀದಿನ ಚಂದಾ ಸಂದಾಯ ಮಾಡಿದ ಮರುದಿನವೇ ಅವರಿಗೆ ಸರಿಯಾದ ಕೆಲಸ ಲಭಿಸಿತು. ಬ್ರಿಟನ್ ಜಮಾಅತಿನ ಇನ್ನೊಂದು ಸಹೋದರರನಿಗೆ ಆರ್ಥಿಕ ಸಂಕಷ್ಟವಿತ್ತು. ಆದಾಗ್ಯೂ ತಹ್ರೀಕ್ ಜದೀದ್ ಚಂದಾವನ್ನು ನೀಡಿದರು. ಹೀಗೆ ಕೆಲವು ದಿನಗಳಲ್ಲಿ ಅವರಿಗೆ ಎಚ್, ಎಮವ ಆರ್.ಸಿ. ಟಾಕ್ಸ್ ಡಿಪಾರ್ಟ್‌ಮೆಂಟಿನ ಕಡೆಯಿಂದ ಪತ್ರ ಹೀಗೆ ಲಭಿಸಿತು: ನಿಮ್ಮಿಂದ ಕಳೆದ ವರ್ಷ ಹೆಚ್ಚಿನ ಟಾಕ್ಸ್ ಸಂದಾಯವಾಗಿದೆ. ಹೀಗೆ ವಾಪಾಸ್ಸು ಬಂದ ಹಣ ಅವರು ನೀಡಿದ್ದ ಚಂದಾದ ಹಣಕ್ಕಿಂತ ತುಂಬ ಅಧಿಕವಾಗಿತ್ತು. ಪ್ರೋಫೆಶನಲ್ ಆದ ಒಬ್ಬ ಸಹೋದರನಿಗೆ ಅವರ ಕೆಲಸದಲ್ಲಿ ತೊಂದರೆ ಅನುಭವವಾಗುತ್ತಿತ್ತು. ಅವರ ಬಗ್ಗೆ ಒಬ್ಬರು ತಪ್ಪಾದ ದೂರು ಕೊಟ್ಟಿದ್ದರು. ಅವರು ತಮ್ಮ ತಹ್ರೀಕ್ ಜದೀದಿನ ಚಂದಾವನ್ನು ಸಂದಾಯ ಮಾಡಿದರು. ಇದಾದ ಸ್ವಲ್ಪ ದಿನಗಳಲ್ಲಿ ಅವರ ಬಗ್ಗೆ ದೂರು ಕೊಟ್ಟ ವ್ಯಕ್ತಿಯನ್ನು ಅವರು ಕೆಲಸಮಾಡುತ್ತಿದ್ದ ಜಾಗದಿಂದ ವಜಾ ಮಾಡಲಾಯಿತು. ಒಬ್ಬ ಸಹೋದರನ ಕಾರ್ ಹೊಂಡದಲ್ಲಿ ಬಿದ್ದುಹೋಯಿತು. ಈ ಕಾರನ್ನು ಯಾವುದೇ ಹಾನಿಯಿಲ್ಲದೆ ಹೊರಗೆ ತರಲು ಸಾಧ್ಯವಾದರೆ, ಹೆಚ್ಚಿಗೆ ತಹ್ರೀಕ್ ಜದೀದಿನ ಚಂದಾವನ್ನು ಸಂದಾಯ ಮಾಡಲು ಅವರು ನಿರ್ಧರಿಸಿದರು. ಹೀಗೆ ಅವರ ಕಾರನ್ನು ಯಾವುದೇ ಹಾನಿಯಿಲ್ಲದೆ ಹೊರಗೆ ತೆಗೆಯಲಾಯಿತು. ಅವರು ಒಂದು ವಾರದ ಆದಾಯದ ಪ್ರಕಾರ ತಹ್ರೀಕ್ ಜದೀದಿನ ಚಂದಾವನ್ನು ಹೆಚ್ಚಿಗೆ ನೀಡಿದರು. ಒಬ್ಬ ಬಾಲಕ ತನ್ನ ಆರು ತಿಂಗಳ ಜೇಬು ಖರ್ಚನ್ನು ತಹ್ರೀಕ್ ಜದೀದಿನ ಚಂದಾವಾಗಿ ನೀಡಿದನು. ಮಕ್ಕಳು ಸಹ ಧನತ್ಯಾಗದಲ್ಲಿ ಮುಂದೆಬರಲು ಪ್ರಯತ್ನಿಸುತ್ತಾರೆ. ಒಬ್ಬ ಖ಼ಾದಿಮ್ ರಜೆಯ ಕಾಲದಲ್ಲಿ ಸುತ್ತಾಡಲು ಹಣವನ್ನು ಕೂಡಿಟ್ಟಿದ್ದನು. ಈ ಎಲ್ಲ ಹಣವನ್ನು ತಹ್ರೀಕ್ ಜದೀದಿನಲ್ಲಿ ಸಂದಾಯ ಮಾಡಿದನು.

ಬಾರ್ಕಿಂಗ್ ಮತ್ತು ಡಿಗನ್‌ಹಮ್ ಜಮಾಅತಿನ ಸದರ್ ಸಾಹಿಬರು ಹೇಳುತ್ತಾರೆ: ಈ ವರ್ಷ ತಹ್ರೀಕ್ ಜದೀದಿನ ಟಾರ್ಗಟ್ ಖಂಡಿತ ಈಡೇರಿಸಬೇಕೆಂದು ನಿರ್ಧರಿಸಿದ್ದೆವು. ಅದಕ್ಕಾಗಿ ನಮ್ಮ ಜೇಬಿನಿಂದ ಹೆಚ್ಚಿನ ಹಣವನ್ನು ಕೊಡಬೇಕಾಗಿ ಬಂದರು ಸರಿಯೆಂದು ತೀರ್ಮಾನಿಸಿದೆವು. ಹೀಗೆ ಟಾರ್ಗಟ್ ಪೂರ್ತಿಮಾಡಲು ಬಾಕಿಯಿದ್ದ ಹಣವನ್ನು ಅವರು ತನ್ನ ಕಡೆಯಿಂದ ಪಾವತಿಸಿದರು. ಅದರ ನಂತರ ಅವರಿಗೆ ಅವರ ಉದ್ಯೋಗದ ಕಡೆಯಿಂದ ಹೀಗೆ ತಿಳಿಸಲಾಯಿತು: ಕಳೆದ ವರ್ಷಕ್ಕೆ ಹೋಲಿಸಿ ಈ ವರ್ಷ ಎಪ್ಪತ್ತು ಪರ್ಸಂಟ್ ಬೋನಸ್ ಸಿಗುವುದು. ಅವರು ಹೆಚ್ಚಿಗೆ ನೀಡಿದ್ದ ಚಂದಾಕ್ಕಿಂತ ಈ ಬೋನಸಿನ ಮೊಬಲಗು ತುಂಬ ಹೆಚ್ಚಾಗಿತ್ತು.

ಇವರೆಲ್ಲ ವಿವಿಧ ಸಮುದಾಯಗಳ ವಿವಿಧ ಜನರಾಗಿದ್ದಾರೆ. ಇವುಗಳು ಚಂದಾಗಳ ಅನುಗ್ರಹಗಳಾಗಿವೆ. ಖಾಜ಼ಕಿಸ್ತಾನದಿಂದ ಲೇನಾ ಅಬ್ದುರ್ರಹ್ಮಾನ್ ಹೇಳುತ್ತಾರೆ: ನಾನು ನಿಯತವಾಗಿ ಆಮ್ ಚಂದಾ, ಚಂದಾ ಜಲ್ಸ ಸಾಲಾನ, ತಹ್ರೀಕ್ ಜದೀದ್ ಮತ್ತು ವಖ್ಫೆ ಜದೀದ್ ನೀಡುತ್ತೇನೆ. ನನ್ನ ಪತ್ನಿ ಮೆಡಿಕಲ್ ಕಾಲೇಜ್ ಮುಗಿಸಿ ಸರ್ಕಾರದ ಪ್ರೋಗ್ರಾಮಿನಲ್ಲಿ ಉದ್ಯೋಗ ಪಡೆದಳು. ಸರ್ಕಾರವು ಮಕ್ಕಳಿಗೆ ವಾಸಿಸುವ ಸೌಕರ್ಯ ಮಾಡಿಕೊಡಲಿಕ್ಕಾಗಿ ಸಾಲವನ್ನು ನೀಡಿತು. ಮಕ್ಕಳು ನರ್ಸರಿಯಲ್ಲಿ ಕಲಿಯುತ್ತಿದ್ದಾರೆ. ಈಗ ಆರ್ಥಿಕ ಸ್ಥಿತಿ ಹಿಂದಿಗಿಂತ ತುಂಬ ಉತ್ತಮವಾಗಿದೆ. ನನ್ನ ಬಳಿ ಎರಡು ವಾಹನಗಳಿವೆ. ಈಗ ನಾನು ಸ್ವಂತ ಮನೆಯನ್ನು ಕಟ್ಟಲು ನಿರ್ಧರಿಸಿದ್ದೇನೆ. ಇವೆಲ್ಲವೂ ಅಲ್ಲಾಹನ ಅನುಗ್ರಹ ಮತ್ತು ಚಂದಾ ನೀಡುವುದರ ಪ್ರತಿಫಲವಾಗಿದೆ. ಮೊದಲು ನಾವು ಬಾಡಿಗೆಯ ಫ್ಲಾಟಿನಲ್ಲಿ ಇದ್ದೆವು. ಆರ್ಥಿಕ ಸಮಸ್ಯೆಯಿತ್ತು. ಆದಾಗ್ಯೂ ನಾವು ಚಂದಾ ನೀಡುತ್ತಿದ್ದೆವು. ಅದರ ಕಾರಣದಿಂದ ಅಲ್ಲಾಹನು ನಮ್ಮ ಮೇಲೆ ತುಂಬ ಅನುಗ್ರಹವನ್ನು ಸುರಿಸಿದನು.

ಗಿನಿಬಸಾವಿನ ಮುರಬ್ಬಿಯಾದ ಮುಹಮ್ಮದ್ ಅಹ್ಸನ್ ಸಾಹಿಬ್ ಬರೆಯುತ್ತಾರೆ: ಮುಹಮ್ಮದ್ ಇಬ್ರಾಹೀಂ ಸಾಹಿಬ್ ಎಂಬ ಹೆಸರಿನ ಒಬ್ಬ ಸಹೋದರ ಹೇಳುತ್ತಾರೆ: ಕಳೆದ ವರ್ಷ ನಾನು ತಹ್ರೀಕ್ ಜದೀದಿನ ಘೋಷಣೆ ಮಾಡಿದಾಗ, ಅಂದು ಖುತ್‌ಬ ಮತ್ತು ಘೋಷಣೆಯನ್ನು ಕೇಳಿದ ನಂತರ ನನ್ನ ಚಂದಾದ ವಾಗ್ದಾನವನ್ನು ಬರೆದೆನು. ಎಲ್ಲ ತಿಂಗಳು ಸಂದಾಯ ಮಾಡುತ್ತಿರಲು ನಿರ್ಧಾರ ಮಾಡಿದೆ. ಹೀಗೆಯೇ ಮಾಡುತ್ತಿದ್ದೆನು. ಆದರೆ, ಕೊರೋನ ರೋಗದ ದಿನಗಳಲ್ಲಿ ಆದಾಯ ನಿಂತುಹೋಯಿತು. ಆಗ ಚಿಂತಿತನಾದೆನು. ತಹ್ರೀಕ್ ಜದೀದಿನ ವರ್ಷ ಕೊನೆಗೊಳ್ಳಲು ಸಮಯವಾದಾಗ, ಚಿಂತೆ ಇನ್ನೂ ಹೆಚ್ಚಿತು. ನಾನು ದುಆ ಮಾಡುತ್ತಿದ್ದೆ. ಒಂದು ಬೆಳಿಗ್ಗೆ ಒಬ್ಬ ಸಹೋದರನ ಕಡೆಯಿಂದ ಫೋನ್ ಬಂತು. ನೀವು ಕಟ್ಟಡದ ಬ್ಲಾಕ್ಸ್ ತಯಾರು ಮಾಡುತ್ತೀರ ಎಂದು ಅವರು ಕೇಳಿದರು. ಹೌದೆಂದು ನಾನು ಹೇಳಿದೆ. ಹೀಗೆ ಮನೆಯಲ್ಲಿದ್ದುಕೊಂಡೇ ಕೆಲಸ ಸಿಕ್ಕಿತ್ತು. ಹೀಗೆ ಅಲ್ಲಾಹನು ವಾಗ್ದಾನವನ್ನು ಈಡೇರಿಸಲು ಮಾರ್ಗವನ್ನು ಮಾಡಿಕೊಟ್ಟನು. ಲಾಕ್‌ಡೌನಿನ ಕಾರಣದಿಂದ ಉಂಟಾದ ಆರ್ಥಿಕ ಬಿಕ್ಕಟ್ಟು ಸಹ ದೂರವಾಯಿತು. ಈ ಎಲ್ಲ ಅನುಗ್ರಹಗಳು ಖ಼ಲೀಫರ ಕರೆಗೆ ಉತ್ತರಕೊಟ್ಟ ಕಾರಣದಿಂದ ಉಂಟಾಯಿತು ಎಂದು ಇಬ್ರಾಹಿಂ ಸಾಹಿಬರು ಹೇಳುತ್ತಾರೆ.

ತಂರ್ಝಾ಼ನಿಯಾದ ಅಮೀರ್ ಸಾಹಿಬರು ಹೇಳುತ್ತಾರೆ: ರಂಜ್‌ಬಾರಿನಿಂದ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ವೃದ್ಧೆಯಾದ ಅಹ್ಮದಿ ಸ್ತ್ರೀಯಾದ ಹಮ್‌ನ ಬೀಬಿ ಸಾಹಿಬರಿಗೆ ಪರಿಮಿತವಾದ ಆದಾಯವಿದ್ದೂ ಪ್ರತಿ ವರ್ಷ ಚಂದಾ ನೀಡುವುದರಲ್ಲಿ ಎಲ್ಲರಿಗಿಂತ ಮುಂದಿದ್ದರು. ಈ ವರ್ಷ ಸಹ ರಮಝಾ಼ನಿನಲ್ಲಿ ಧನತ್ಯಾಗವನ್ನು ಮಾಡಲು ಹೇಳಲಾದಾಗ, ಅವರು ಅದೇ ತಿಂಗಳಲ್ಲಿ ತನ್ನ ವಾಗ್ದಾನವನ್ನು ಪೂರ್ತಿಮಾಡಲು ಎಲ್ಲ ರೀತಿಯಲ್ಲೂ ಪ್ರಯತ್ನಿಸಿದರು. ಆದರೆ ಆರ್ಥಿಕ ಸಮಸ್ಯೆಗಳ ಕಾರಣದಿಂದ ಅವರ ಬಳಿ ಹಣವಿದ್ದಿರಲಿಲ್ಲ. ಅವರು ಹೇಳುತ್ತಾರೆ: ಒಂದು ದಿನ ನಾನು ಇದರ ಕಾರಣದಿಂದ ತುಂಬ ಚಿಂತಿತಳಾದೆ. ರಾತ್ರಿ ಎದ್ದು ಅಲ್ಲಾಹನ ಸನ್ನಿಧಿಯಲ್ಲಿ ನಡುಗುತ್ತಾ ಹೀಗೆ ದುಆ ಮಾಡಿದೆ: ಖ಼ಲೀಫರ ಕರೆಗೆ ಲಬ್ಬೈಕ್ ಹೇಳುವ ಸಮಯವಿದು. ನಾನು ಇದರಿಂದ ವಂಚಿತಳಾಗುತ್ತಿದ್ದೇನೆ. ಹೀಗೆ ಮರುದಿನ ಬೆಳಿಗ್ಗೆ ಅವರ ಒಬ್ಬಳು ಗೆಳತಿಯ ಫೋನ್ ಬಂತು. ಅವರೊಡನೆ ಒಂದು ದೀರ್ಘ ಕಾಲದಿಂದ ಸಂಪರ್ಕವಾಗುತ್ತಿರಲಿಲ್ಲ. ಅವರ ಆ ಗೆಳತಿ ಕೊಡುಗೆ ಎಂಬ ರೀತಿಯಲ್ಲಿ ತನ್ನ ಕಡೆಯಿಂದ ಸ್ವಲ್ಪ ಹಣವನ್ನು ಕಳುಹಿಸಿದರು. ಅದರಿಂದ ಅವರು ತನ್ನ ಚಂದಾವನ್ನು ಸಂದಾಯ ಮಾಡಿದರು. ಅವರು ಸ್ವತಃ ಹೇಳುತ್ತಾರೆ: ಚಂದಾ ಕೊಡುವ ಕಾರಣದಿಂದ ಯಾವಾಗಲೂ ನನ್ನ ಅಲ್ಲಾಹನು ನನ್ನೊಡನೆ ಸ್ನೇಹದಿಂದ ವರ್ತಿಸುತ್ತಾನೆ. ಎಂದಿಗೂ ನನ್ನ ಕೈ ಬಿಟ್ಟಿಲ್ಲ.

ಖಾದಿಯಾನಿನಿಂದ ವಕೀಲುಲ್ ಮಾಲ್ ಸಾಹಿಬರು ಬರೆಯುತ್ತಾರೆ: ಕೇರಳದ ಕರುಳಾಯಿಯ ಒಬ್ಬ ಸಹೋದರನ ತಹ್ರೀಕ್ ಜದೀದಿನ ಚಂದಾ 5 ಲಕ್ಷ ರೂಪಾಯಿಯಾಗಿತ್ತು. ಅವರು ತಮ್ಮ ಸ್ವಲ್ಪ ಹಣವನ್ನು ತಮ್ಮ ಫರ್ಮಿನ ಫರ್ನಿಚರ್ ಖರೀದಿ ಮಾಡಲು ಇರಿಸಿದ್ದರು. ಅದನ್ನು ಆಗ ನೀಡದಿದ್ದರೆ ಫರ್ಮಿನ ಕೆಲಸವನ್ನು ನಿಲ್ಲಿಸಬೇಕಾಗಿ ಬರುತ್ತಿತ್ತು. ಅದೇ ವೇಳೆ ತಹ್ರೀಕ್ ಜದೀದ್ ಚಂದಾವನ್ನು ಸಂದಾಯ ಮಾಡಲು ಹೇಳಲಾಯಿತು. ಅವರು ಚಂದಾದ ಪ್ರಾಮುಖ್ಯತೆಯನ್ನು ಮುಂದಿರಿಸಿ ಆ ಹಣವನ್ನು ಚಂದಕ್ಕೆ ಕೊಟ್ಟರು. ಈ ನಿಷ್ಠೆಯ ಕಾರಣದಿಂದ ಅಲ್ಲಾಹನು ಹೇಗೆ ಅನುಗ್ರಹಿಸಿದನೆಂದರೆ, ಸ್ವಲ್ಪ ಸಮಯದಲ್ಲೇ, ಚಂದಾವಾಗಿ ನೀಡಿದ ಹಣಕ್ಕಿಂತ ಹಲವು ಪಟ್ಟು ಹೆಚ್ಚಿನ ಹಣ ಅವರ ಅಕೌಂಟಿನಲ್ಲಿ ಯಾರೋ ಒಬ್ಬರ ಕಡೆಯಿಂದ ಬಂದಿತು. ಫರ್ಮಿಗಾಗಿ ಒದಗಿಸಬೇಕಾಗಿದ್ದ ಫರ್ನಿಚರ್‌ಗಳನ್ನು ಖರೀದಿಮಾಡಿದರು. ಅನಂತರ ಅವರಿಗೆ ಬಹಳ ಹೆಚ್ಚಿನ ಹಣದ, ಹಲವು ಮಿಲಿಯನ್ ರೂಪಾಯಿಯ ಪ್ರೋಜೆಕ್ಟ್ ಲಭಿಸಿತು ಮತ್ತು ತನ್ನ ವಾಗ್ದಾನಕ್ಕಿಂತ ತುಂಬ ಹೆಚ್ಚಿನ ಹಣವನ್ನು, ಸುಮಾರು 12 ಲಕ್ಷದಷ್ಟು ತಹ್ರೀಕ್ ಜದೀದಿಗಾಗಿ ನೀಡಿದರು.

ಭಾರತದಿಂದಲೇ ಚಂದಾದ ಇನ್ಸ್‌ಪೆಕ್ಟರ್ ಆದ ಅಬ್ದುಲ್ ಬಾಸಿತ್ ಸಾಹಿಬರು ಬರೆಯುತ್ತಾರೆ: ಕೇರಳದ ಒಂದು ಜಮಾಅತಾದ ಕೊಚ್ಚಿನ್‌ನಲ್ಲಿ ತಹ್ರೀಕ್ ಜದೀದಿಗೆ ಸಂಬಂಧಿಸಿ ಒಂದು ಜಲ್ಸವನ್ನು ಸಂಘಟಿಸಲಾಯಿತು. ಅದರಲ್ಲಿ ತಹ್ರೀಕ್ ಜದೀದಿನ ಉದ್ದೇಶಗಳನ್ನು ವಿವರಿಸಲಾಗಿತ್ತು. ತಹ್ರೀಕ್ ಜದೀದಿನ ಧನತ್ಯಾಗದಲ್ಲಿ ಉತ್ಸಾಹದಿಂದ ಭಾಗವಹಿಸಲು ಉಪದೇಶಿಸಲಾಯಿತು. ಜಲ್ಸ ಮುಗಿದ ನಂತರ ನಾವು ಸದರ್ ಸಾಹಿಬರ ಮನೆಗೆ ಹೋದೆವು. ಸದರ್ ಸಾಹಿಬ್‌ರ ಎಂಟು ವರ್ಷದ ಮಗಳು ತನ್ನ ಮನಿಬಾಕ್ಸ್ ತೆಗೆದುಕೊಂಡು ಬಂದಳು. ಅದರಲ್ಲಿ ಇರುವಷ್ಟು ಹಣವನ್ನು ತಹ್ರೀಕ್ ಜದೀದಿನ ಚಂದಾವಾಗಿ ಸ್ವೀಕರಿಸಲು ಹೇಳಿದಳು. ಆಗ ಆ ಬಾಕ್ಸಿನಲ್ಲಿ ಸುಮಾರು ಎಂಟುನೂರ ಆರುವತ್ತನಾಲ್ಕು ರೂಪಾಯಿ ಅದರಲ್ಲಿತ್ತು. ಅದನ್ನು ಆ ಮಗಳು ತಹ್ರೀಕ್ ಜದೀದಿನ ಚಂದಾ ಆಗಿ ನೀಡಿದಳು. ಅವರ ತಂದೆ ಹೇಳಿದರು: ನನ್ನ ಮಗಳು ಸ್ವಲ್ಪ ಕಾಲದಿಂದ, ತಹ್ರೀಕ್ ಜದೀದಿಗೆ ನೀಡುವ ಉದ್ದೇಶದಿಂದ ಹಣವನ್ನು ಕೂಡಿಡುತ್ತಿದ್ದಳು. ನಾನು ಅಂಗಡಿಯಿಂದ ವಾಪಾಸ್ಸು ಬರುವಾಗ, ನನ್ನ ಜೇಬಿನಲ್ಲಿರುವ ನಾಣ್ಯಗಳನ್ನು ನನ್ನಿಂದ ಪಡೆದು ಕೂಡಿಡುತ್ತಿದ್ದಳು. ಹೀಗೆ ಆ ಮಗಳು ಹಲವು ತಿಂಗಳುಗಳಿಂದ ಒಟ್ಟುಗೂಡಿಸಿದ ಹಣವನ್ನು ಚಂದಾದಲ್ಲಿ ನೀಡಿದಳು. ಇದು ಅಹ್ಮದಿ ಮಕ್ಕಳಲ್ಲೂ ಅಲ್ಲಾಹನು ಉಂಟುಮಾಡಿದ ಚಂದಾದ ಬಗ್ಗೆಗಿನ ಅರಿವಾಗಿದೆ.

ಬೈಅತ್ ಮಾಡಿದ ನಂತರ ತ್ಯಾಗದ ಚಿಂತೆ ಹೇಗೆ ಇರುತ್ತದೆ ಎಂಬುದರ ಬಗ್ಗೆ ಅಲ್ಬೇನಿಯದಿಂದ ಸಮದ್ ಸಾಹಿಬರು ಬರೆಯುತ್ತಾರೆ: ಅಲ್ಬೇನಿಯಾದ ಒಂದು ಗ್ರಾಮದಲ್ಲಿ ನೆಲೆಸಿದ್ದ, ಅಲ್ಲಿಯ ಪ್ರಾದೇಶಿಕ ನಿವಾಸಿಯಾದ ಅಹ್ಮದಿ ದಾಲೀಬ್ ಜರ್ಜಿ ಸಾಹಿಬರು ಒಂದು ದಿನ ಜುಮಾದ ನಂತರ ಭೇಟಿಯಾದರು. ಇವರು ಪೆಂಶನರ್ ಆಗಿದ್ದರು. ಮೂಮೂಲಿ ಆದಾಯವಿದ್ದೂ ಪ್ರತಿ ತಿಂಗಳು ನಿಯತವಾಗಿ ಚಂದಾ ನೀಡುತ್ತಿದ್ದರು. ಅವರಿಗೆ ಸ್ವಂತ ವಾಹನವಿಲ್ಲದ ಕಾರಣದಿಂದ ಪಬ್ಲಿಕ್ ಟಾನ್ಸ್‌ಪೋರ್ಟಿನಲ್ಲಿ ಜುಮಾಗೆ ಬರುತ್ತಿದ್ದರು. ಈಗಿನ ಮಹಾಮಾರಿಯ ಕಾರಣದಿಂದ ತುಂಬ ಕಾಲದ ನಂತರ ಜುಮಾಗೆ ಬಂದರು. ಜುಮಾದ ನಂತರ ಹೀಗೆ ಹೇಳಿದರು: ಇಷ್ಟು ತಿಂಗಳಿಂದ ಚಂದಾ ಸಂದಾಯ ಮಾಡದ ಕಾರಣದಿಂದ ಹೃದಯದಲ್ಲಿ ಭಾರದ ಅನುಭವವಾಗುತ್ತಿತ್ತು. ಅವರು ಎಂಟು ತಿಂಗಳ ಚಂದಾವನ್ನು ತಂದಿದ್ದರು. ಚಂದಾ ಆಮ್ ಅಲ್ಲದೆ, ತಹ್ರೀಕ್ ಜದೀದ್ ಮತ್ತು ವಖ್‌ಫೆ ಜದೀದಿನ ಚಂದಾ ಸಹ ನೀಡುತ್ತಿದ್ದರು. ಇದೇ ರೀತಿಯಲ್ಲಿ ಹಲವು ಉದಾಹರಣೆಗಳಿವೆ. ತಂಝಾ಼ನಿಯಾದ ಒಬ್ಬ ಮುಅಲ್ಲಿಮ್‌ರಾದ ಹುಸೈನ್ ಸಾಹಿಬರು ಬರೆಯುತ್ತಾರೆ: ಒಬ್ಬ ನಿಷ್ಠಾವಂತ ಅಹ್ಮದಿಯಾಗಿರುವ ಸಾಲಿಹ್ ಮಟೂಂಗ ಸಾಹಿಬರು ಸಂತೋಷದಿಂದ ಧನತ್ಯಾಗವನ್ನು ಮಾಡುತ್ತಾರೆ. ಕೆಲವು ಕಾಲ ಮುಂಚೆ ರೋಗಿಯಾದರು. ಚಿಕಿತ್ಸೆಗಾಗಿ

ಅವರ ಬಳಿಯಲ್ಲಿ ಹಣವಿದ್ದಿರಲಿಲ್ಲ. ತಿಂಗಳ ಕೊನೆಯಲ್ಲಿ ಅವರಿಗೆ ಪೆನ್ಶನಿನ ಹಣ ಸಿಕ್ಕಾಗ, ಅವರು ಮೊಟ್ಟಮೊದಲು ತನ್ನ ತಹ್ರೀಕ್ ಜದೀದಿನ ವಾಗ್ದಾನವನ್ನು ಪೂರ್ತಿಮಾಡಿದರು. ಮುಅಲ್ಲಿಮ್ ಸಾಹಿಬರು ಹೇಳುತ್ತಾರೆ: ಈ ಹಣದಿಂದ ಮೊದಲು ಚಿಕಿತ್ಸೆ ನಡೆಸಿರಿ ಮತ್ತು ಅನಂತರ ವಾಗ್ದಾನವನ್ನು ಪೂರ್ತಿಮಾಡಿರಿ ಎಂದು ಹೇಳಿ ಅವರನ್ನು ಮನವರಿಕೆ ಮಾಡಲು ಪ್ರಯತ್ನಿಸಿದೆ. ಆದರೆ ಅವರು ಹೇಳಿದರು: ಅಲ್ಲಾಹನು ಶಮನ ನೀಡುವವನಾಗಿದ್ದಾನೆ. ಆದ್ದರಿಂದ ನಾನು ಮೊದಲು ಅಲ್ಲಾಹನೊಡನೆ ಮಾಡಲಾದ ವಾಗ್ದಾನವನ್ನು ಈಡೇರಿಸುವೆನು. ಅನಂತರ ಚಿಕಿತ್ಸೆ ನಡೆಸುವೆನು. ಹೊಸದಾಗಿ ಜಮಾಅತಿಗೆ ಬಂದ ಈ ಜನರ ತ್ಯಾಗದ ಮಟ್ಟವೂ ವಿಸ್ಮಯಕರವಾಗಿದೆ. ದೂರ ಪ್ರದೇಶಗಳಲ್ಲಿ ಇರುವ ಅವರಿಗೆ ಅಲ್ಲಾಹನು ಚಂದಾದ ಪ್ರಾಮುಖ್ಯತೆಯನ್ನು ಹೇಗೆ ವ್ಯಕ್ತಪಡಿಸಿಕೊಟ್ಟಿದ್ದಾನೆಂದು ನೋಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೈಅತ್ ಮಾಡಿದ ನಂತರ ಒಂದು ಪರಿವರ್ತನೆಯನ್ನು ಅಲ್ಲಾಹನು ಅವರಲ್ಲಿ ಉಂಟುಮಾಡಿದನು.

ಗೇಂಬಿಯದ ಅಮೀರ್ ಸಾಹಿಬರು ಬರೆಯುತ್ತಾರೆ: ಒಂದು ಪ್ರದೇಶದಲ್ಲಿ ತಹ್ರೀಕ್ ಜದೀದಿನ ಬಗ್ಗೆ ಒಂದು ಪ್ರೋಗ್ರಾಮ್ ನಡೆಸಲಾಯಿತು. ಇಸ್ಲಾಮಿಗಾಗಿ ಜೀವಿತ ಸಮರ್ಪಿಸುವುದು, ಸರಳ ಜೀವಿತ ನಡೆಸಲು ಮತ್ತು ಚಿಕ್ಕ ಚಿಕ್ಕ ಕೆಲಸಗಳನ್ನು ಮಾಡುವುದಕ್ಕೂ ನಾಚಿಕೆಪಡಬಾರದು ಎಂಬಲ್ಲ ವಿಷಯದಲ್ಲಿ ಜನರ ಗಮನಹರಿಸಲಾಯಿತು. ಈ ಪ್ರೋಗ್ರಾಮಿನ ನಂತರ, ಒಂದು ಸಾವಿರ ಡಿಲಾಸಿ ತಹ್ರೀಕ್ ಜದೀದ್ ಚಂದಾ ಆಗಿ ನೀಡುತ್ತೇನೆ ಎಂದು ಇಬ್ರಾಹೀಂ ಸಾಹಿಬ್ ಎಂಬ ಒಬ್ಬ ಸಹೋದರ ಹೇಳಿದರು. ಮಾತ್ರವಲ್ಲ ಅವರ ಏಕ ಮಗನನ್ನು ವಖ್ಫ್ ಮಾಡಿ ಮುರಬ್ಬಿ ಆಗುವಂತೆ ಮಾಡಲು ಜಾಮಿಅಗೆ ಕಳುಹಿಸುತ್ತೇನೆಂದೂ ಹೇಳಿದರು. ಈಗ ಆ ಮಗನು ಸೆಕೆಂಡರಿ ಸ್ಕೂಲಿನಲ್ಲಿ ಇದ್ದಾನೆ. ಅವನನ್ನು ಮುರಬ್ಬಿ ಮಾಡಲು ಅವರು ನಿಯ್ಯತ್ ಮಾಡಿದ್ದಾರೆ. ಇನ್‌ಶಾ ಅಲ್ಲಾಹ್.

ಘಾನದಿಂದ ಆದಮ್ ಸಾಹಿಬ್ ಜನರಲ್ ಸೆಕ್ರಟರಿ ಅಕ್ರಝೋನ್ ಬರೆಯುತ್ತಾರೆ: ನನಗೆ ಝೋನಲ್ ಸದರ್ ಸಾಹಿಬರು ಐವತ್ತು ಗಾನಸಟಿ ಹಣವನ್ನು ಬಾಡಿಗೆಯಾಗಿ ನೀಡಿದರು. ನಾನು ಆ ಹಣವನ್ನು ತಹ್ರೀಕ್ ಜದೀದ್ ಚಂದಾಗೆ ನೀಡಿದೆ. ಮರುದಿನ ಬೆಳಿಗ್ಗೆ ಆಫಿಸರೊಂದಿಗೆ ಯಾವುದೋ ಕೆಲಸಕ್ಕೆ ಹೋದೆ. ವಾಪಾಸ್ಸು ಹೇಗೆ ಹೋಗುವುದೆಂದು ಮರಳಿ ಬರುವಾಗ ಆಫಿಸರ್ ಕೇಳಿದರು. ನಾನು ಹೇಳಿದೆ ಟಾಕ್ಸಿಯಲ್ಲಿ ಹೋಗುತ್ತೇನೆ. ಆಗ ಆಫಿಸರ್ ನನ್ನಿಂದ ಫೋನ್ ಕೇಳಿದರು. ಫೋನ್ ಚೆಕ್ ಮಾಡಲು ಹೇಳಿದರು. ನಾನು ಚೆಕ್ ಮಾಡಿದಾಗ, ಒಂದು ಸಾವಿರ ಸಟಿ ನನಗೆ ಅವರು ಅವರ ಮೊಬೈಲ್ ಮೂಲಕ ಕಳಿಸಿದ್ದರು. ಐವತ್ತು ಸಿಟಿ ನೀಡಿದಾಗ, ಸಾವಿರ ಸಿಟಿ ಲಭಿಸಿತ್ತು. ಇದಾಗಿದೆ ಕೆಲವು ಘಟನೆಗಳು. ಇಂತಹ ಹಲವು ಘಟನೆಗಳು ನನ್ನ ಬಳಿಯಲ್ಲಿದೆ ಇವೆ. ಅಲ್ಲಾಹನು ಈ ತ್ಯಾಗಗಳನ್ನು ಮಾಡುವವರ ಸಂಪತ್ತು ಮತ್ತು ಜೀವನದಲ್ಲಿ ಅಪರಿಮಿತವಾದ ಅನುಗ್ರಹವನ್ನು ಸುರಿಸಲಿ. ತಹ್ರೀಕ್ ಜದೀದಿನ ಘೋಷಣೆಯೊಂದಿಗೆ ಈಗ ನಾನು ಒಟ್ಟು ತಹ್ರೀಕ್ ಜದೀದಿನ ಚಂದಾದ ಸ್ವಲ್ಪ ವಿವರವನ್ನು ವಿವರಿಸುತ್ತೇನೆ. ಅಲ್ಲಾಹನ ಅನುಗ್ರಹದಿಂದ ತಹ್ರೀಕ್ ಜದೀದಿನ 86ನೇ ವರ್ಷ ಅಕ್ಟೋಬರ್ 31ಕ್ಕೆ ಕೊನೆಗೊಂಡಿತು ಮತ್ತು 87ನೇ ವರ್ಷ ಶುರುವಾಯಿತು. ಈ ವರ್ಷ ಅಹ್ಮದಿಯಾ ಜಮಾಅತಿಗೆ ತಹ್ರೀಕ್ ಜದೀದಿನ ಸಾಂಪತ್ತಿಕ ವ್ಯವಸ್ಥೆಯಲ್ಲಿ, 14.5 ಮಿಲಿಯನ್ ಎಂದರೆ, ಒಂದು ಕೋಟಿ, 45 ಲಕ್ಷ ಪೌಂಡಿನ ಧನತ್ಯಾಗ ಮಾಡಲು ತೌಫೀಕ್ ಲಭಿಸಿತು. ಈ ವಸೂಲಿ ಕಳೆದ ವರ್ಷಕ್ಕಿಂತ ಎಂಟು ಲಕ್ಷ 82 ಸಾವಿರ ಪೌಂಡಷ್ಟು ಅಧಿಕವಿದೆ.

ಈ ವರ್ಷ ಲೋಕದ ಜಮಾಅತುಗಳಲ್ಲಿ ಮೊದಲ ಸ್ಥಾನ ಜರ್ಮನಿಯದ್ದಾಗಿದೆ. ಪಾಕಿಸ್ತಾನದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗಳು ಕೆಟ್ಟುಹೋಗುತ್ತಾ ಇದೆ. ಆದರೆ ಪಾಕಿಸ್ತಾನದ ಜಮಾಅತುಗಳು ತಮ್ಮ ದೇಶದ ಸ್ಥಿತಿಯನ್ನು ನೋಡುವುದಾದರೆ, ಪ್ರಾದೇಶಿಕ ಕರೆನ್ಸಿ ಪ್ರಕಾರ ತುಂಬ ಮುಂದಿದ್ದಾರೆ ಮತ್ತು ತುಂಬ ತ್ಯಾಗಗಳನ್ನು ಮಾಡಿದ್ದಾರೆ. ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳು ಕೆಟ್ಟುಹೋಗಿರುವಂತಹ ಎಲ್ಲ ದೇಶಗಳಲ್ಲಿ ಶಾಂತಿ ಮತ್ತು ಸಮಾಧಾನವುಂಟುಮಾಡಲಿ. ಸ್ಥಿತಿಗತಿಗಳು ಸುಧಾರಣೆಗೊಂಡು ಅಲ್ಲಿಯ ಜನರಿಗೂ ಹೆಚ್ಚಿನ ತ್ಯಾಗಗಳನ್ನು ಮಾಡಲು ಸೌಭಾಗ್ಯ ಲಭಿಸಲಿ. ಹೇಗಿದ್ದರೂ ಒಟ್ಟಿನಲ್ಲಿ, ಮೊದಲು ಜರ್ಮನಿ,ಅನಂತರ ಬ್ರಿಟನ್. ಅದರ ನಂತರ ಅಮೇರಿಕದ್ದಾಗಿದೆ. ಪಾಕಿಸ್ತಾನದ ಹೆಸರು ಸಹ ನಡುವೆ ಬರುತ್ತದೆ. ಅಮೇರಿಕಕ್ಕೆ ಮೂರನೇ ಸ್ಥಾನವಿದೆ. ಅನಂತರ ಕೆನಡ, ಅನಂತರ ಮಿಡಲ್ ಈಸ್ಟಿನ ಒಂದು ದೇಶವಿದೆ. ಅನಂತರ ಭಾರತ, ಆಸ್ಟ್ರೇಲಿಯಾ, ಇಂಡೋನೇಶ್ಯ, ಘಾನ. ಅನಂತರ ಇನ್ನೊಂದು ಮಿಡಲ್ ಈಸ್ಟಿನ ಜಮಾಅತ್. ಘಾನ ಸಹ ಈಗ ಆಫ್ರಿಕದ ದೇಶಗಳ ಮಟ್ಟದಿಂದ ಹೊರಬಂದು, ಧನತ್ಯಾಗ ಮಾಡುವುದರಲ್ಲಿ ಲೋಕಕ್ಕೆ ಸರಿಸಾಟಿಯಾಗಿ ನಿಂತಿದೆ. ಈಗ ಅಮೇರಿಕ ಮತ್ತು ಯೂರೋಪಿನ ಇತರ ದೇಶಗಳಿಗೆ ಸರಿಸಾಟಿಯಾಗಿ ನಿಂತಿದೆ.

ಅದೇ ರೀತಿಯಲ್ಲಿ ಪರ್ ಕಾಪಿಟದ ಪ್ರಕಾರ, ಸ್ವಿಟ್ಝರ್‌ಲೇಂಡ್ ಮೊದಲ ಸ್ಥಾನದಲ್ಲಿದೆ. ಅನಂತರ ಅಮೇರಿಕ, ಅನಂತರ ಸಿಂಗಾಪುರ್. ಅನಂತರ ಇತರ ಜಮಾಅತುಗಳು.

ಆಫ್ರಿಕದ ದೇಶಗಳಲ್ಲಿ ಒಟ್ಟು ವಸೂಲಿನ ದೃಷ್ಟಿಯಲ್ಲಿ, ಮೊದಲ ಸ್ಥಾನ ಗಾನಕ್ಕಿದೆ. ಅನಂತರ ನೈಜೀರಿಯಾ, ಬುರ್ಕಿನಾಫಾಸೋ, ತಂಝಾನಿಯಾ, ಗೇಬಿಯ, ಸಿರಲಿಯೋನ್. ಸಿರಲಿಯೋನ್ ಜಮಾಅತ್ ಹಳೆಯ ಮತ್ತು ದೊಡ್ಡ ಜಮಾಅತಾಗಿದೆ. ಇಲ್ಲಿ ಇಲ್ಲಿಯ ಅಮೀರ್ ಸಾಹಿಬರು ಮತ್ತು ಸಂಬಂಧಪಟ್ಟ ಹುದ್ದೇದಾರರು ಪ್ರಯತ್ನಿಸಬೇಕಾಗಿದೆ. ಜಮಾಅತಿನ ವ್ಯಕ್ತಿಗಳಿಗೆ ಧನತ್ಯಾಗದ ಬಗ್ಗೆ ಸರಿಯಾಗಿ ತಿಳಿಸಿಕೊಟ್ಟರೆ, ತ್ಯಾಗಗಳನ್ನು ಮಾಡಲು ಅವರ ತಯಾರಾಗುವರು. ಇದರ ಕಡೆಗೆ ಗಮನಹರಿಸಬೇಕಾಗಿದೆ. ಅನಂತರ ಬೆನಿನ್, ಬೆನಿನಿನಲ್ಲೂ ಅಲ್ಲಾಹನ ಅನುಗ್ರಹದಿಂದ ತುಂಬ ಪ್ರಯತ್ನ ನಡೆಯುತ್ತಿದೆ. ನೈಜೀರಿಯಾ ಮತ್ತು ಬೆನಿನಿನಲ್ಲಿ ಪರ್‌ಕಾಪಿಟ ಪ್ರಕಾರ ಸಂದಾಯದಲ್ಲಿ ತುಂಬ ವರ್ಧನೆಯುಂಟಾಗಿದೆ. ಬೆನಿನಿನಲ್ಲಿ ಪರ್‌ಕಾಪಿಟದ ಪ್ರಕಾರ ಪ್ರಾದೇಶಿಕ ಕರೆನ್ಸಿಯ ದೃಷ್ಟಿಯಲ್ಲಿ ಆರು ಪಟ್ಟು ವರ್ಧನೆಯುಂಟಾಗಿದೆ. ನೈಜೀರಿಯಾದಲ್ಲಿ ಎಂಟು ಪಟ್ಟು ವರ್ಧನೆಯುಂಟಾಗಿದೆ. ಸ್ಥಿತಿಗತಿಗಳ ಕಾರಣದಿಂದ ಭಾಗವಹಿಸಿದವರು ಸಂಖ್ಯೆ ಕಡಿಮೆಯಾಗಿತ್ತು. ಆದರೆ ಒಟ್ಟು ಮೊತ್ತ ಕಳೆದ ವರ್ಷಕ್ಕಿಂತ ಹೆಚ್ಚಿದೆ. ಭಾಗವಹಿಸಿದವರ ಒಟ್ಟು ಸಂಖ್ಯೆ ಹದಿನಾರು ಲಕ್ಷ ಆರುನೂರಾಗಿದೆ. ಕಳೆದ ವರ್ಷಕ್ಕೆ ಹೋಲಿಸಿ ವರ್ಧನೆ ಉಂಟಾದ ಆಫ್ರಿಕಾದ ದೇಶಗಳಲ್ಲಿ ಮೊದಲ ಸ್ಥಾನ, ಘಾನ, ಬುರ್ಕಿನಾಫಾಸೋ, ಮಾಲಿ, ಸೆನಗಲ್, ಗೇಂಬಿಯ, ಕಾಂಗೋಕಿನ್ಸಾಶಾ, ತಂಝಾನಿಯ, ಕೆನ್ಯಾ, ಸೆಂಟ್ರಲ್ ಆಫ್ರಿಕ, ಸೌತೋಮೆ, ಕಾಂಗೋಬರಾಝ್‌ವೆಲ್ ಮತ್ತು ಝಿಂಬಾಬ್ವೆ. ಇತರ ದೊಡ್ಡ ಜಮಾಅತುಗಳಲ್ಲಿ ಬಂಗ್ಲಾದೇಶ, ಜರ್ಮನಿ, ಕೆನಡ, ಭಾರತ, ಆಸ್ಟ್ರೇಲಿಯ, ಬ್ರಿಟನ್. ಭಾಗವಹಿಸುವವರಲ್ಲಿ ಸಾಕಷ್ಟು ವರ್ಧನೆಯುಂಟಾಗಿದೆ.

ದಫ್ತರ್ ಅವ್ವಲಿನ ಖಾತೆಯಲ್ಲಿ ಅಲ್ಲಾಹನ ಅನುಗ್ರಹದಿಂದ ಐದು ಸಾವಿರ ಒಂಬೈನೂರ ಇಪ್ಪತೇಳು ವ್ಯಕ್ತಿಗಳಿದ್ದಾರೆ. ಅವರಲ್ಲಿ 33 ಜೀವಂತವಾಗಿದ್ದಾರೆ. ಅವರು ಸ್ವತಃ ಸಂದಾಯ ಮಾಡುತ್ತಿದ್ದಾರೆ. ಮೂರು ಸಾವಿರ ಹತ್ತೊಂಬತ್ತು ಖಾತೆಗಳು ಅವರ ವಾರಸುದಾರರ ಮೂಲಕ ಜಾರಿಯಲ್ಲಿದೆ. ಬಾಕಿಯಿರುವ ಎರಡು ಸಾವಿರ ಏಳುನೂರ ಎಪ್ಪತ್ತೈದು ಖಾತೆಗಳನ್ನು ಜಮಾಅತಿನ ನಿಷ್ಠಾವಂತರು ಜಾರಿಯಲ್ಲಿರಿಸಿದ್ದಾರೆ.

ಜರ್ಮನಿಯ ಮೊದಲ ಹತ್ತು ಜಮಾಅತುಗಳು ಹೀಗಿವೆ: ಮಹ್‌ದೀ ಆಬಾದ್ ಮೊದಲ ಸ್ಥಾನದಲ್ಲಿದೆ. ಅನಂತರ ರೋಡರ್‌ಮಾರ್ಕ್, ನೋಯಿಸ್, ನೇಡ, ಕೋಲೋನ್, ಪನೆಬರ್ಗ್, ಓಸ್‌ನಬ್ರೋಕ್, ಫ್ಲೋಯಿರ್‌ಝ್ಹಾಇಮ್, ಕೀಲ್, ಫ್ರುಂಚ್‌ಹಾಇಮ್ ಮತ್ತು ಲೋಕಲ್ ಇಮಾರತುಗಳು ಹೀಗಿವೆ: ಹೇಂಬರ್ಗ್, ಡಟ್‌ಸನ್, ಬಾಖ್, ಫ್ರಾಂಕ್‌ಫರ್ಟ್, ಗ್ರೋಸ್‌ಗೇರಾವು, ವೀಝ್ಬಾಬಾದನ್, ಮೋರ್‌ಫಿಲ್‌ಡನ್, ಮನ್‌ಹಾಯಿಮ್, ರೇಡ್‌ಶಟಡ್, ರೂಸಲ್ಸ್, ಹಾಇಮ್, ಡಾಮ್‌ಶಟಂಡ್.

ಅದರ ನಂತರ ಎರಡನೇ ಸ್ಥಾನದಲ್ಲಿ ಬ್ರಿಟನ್ ಇದೆ. ಬ್ರಿಟನಿನ ಜಮಾಅತುಗಳಲ್ಲಿ ಪೋಸಿಶನ್ ಹೀಗಿದೆ: ಬೈತುಲ್ ಫುತೂಹ್ ರೀಜನ್ ಮೊದಲ ಸ್ಥಾನದಲ್ಲಿದೆ. ಮಸ್ಜಿದ್ ಫಝ್ಲ್ ರೀಜನ್, ಇಸ್ಲಾಮಾಬಾದ್ ರೀಜನ್, ಮಿಡ್‌ಲೇಂಡ್ ರೀಜನ್, ಬೈತುಲ್ ಎಹ್‌ಸಾನ್ ರೀಜನ್, ಒಟ್ಟು ಸಂದಾಯದ ಪ್ರಕಾರಕ ಬ್ರಿಟನಿನ ಹತ್ತು ಜಮಾಅತುಗಳು ಹೀಗಿವೆ: ಆಲ್‌ಡ್‌ಶಾಟ್, ಇಸ್ಲಾಮಾಬಾದ್, ಮಸ್ಜಿದ್ ಫಝ್ಲ್, ವೋಸ್ಟರ್ ಪಾರ್ಕ್, ಬರ್ಮಿಂಗ್‌ಹಮ್ ಸೌತ್, ಜಲಂಘಮ್, ಪಟ್‌ನಿ, ಸೌತ್‌ಚೀಮ್, ಬರ್ಮಿಂಗ್‌ಹಮ್ ವೆಸ್ಟ್, ಚೀಮ್, ಒಟ್ಟು ವಸೂಲಿನ ಪ್ರಕಾರ, ಬ್ರಿಟನಿನ ಸಣ್ಣ ಜಮಾಅತುಗಳು ಹೀಗಿವೆ: ಸ್ಪೇನ್‌ವೇಲಿ, ಕೇಥ್‌ಲೇ, ಸವಾನ್‌ಝಿ, ನಾರ್ತ್ ವೇಲ್ಸ್, ನಾರ್ತ್ ಹೇಮ್‌ಟನ್.

ಪಾಕಿಸ್ತಾನದ ಬಗ್ಗೆ ಮೊದಲು ಪ್ರಸ್ತಾಪಿಸುತ್ತೇನೆ. ಅಲ್ಲಿಯ ಜಮಾಅತುಗಳಲ್ಲಿ ಮೊದಲ ಸ್ಥಾನ ಲಾಹೋರಿಗಿದೆ. ಅನಂತರ ರಬ್ವ ಎರಡನೇ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿ ಕರಾಚಿಯಿದೆ. ಜಿಲ್ಲಾ ಮಟ್ಟದಲ್ಲಿ ಹೆಚ್ಚಿನ ತ್ಯಾಗಗಳನ್ನು ಮಾಡಿದ ಜಿಲ್ಲೆಗಳ ಹೆಸರು ಹೀಗಿವೆ: ಇಸ್ಲಾಮಾಬಾದ್, ಸಿಯಾಲ್‌ಕೋಟ್, ಗುಜ್‌ರಾತ್, ಗೋಜ್‌ರನ್‌ವಾಲ, ಹೈದರಾಬಾದ್, ಮೀರ್‌ಪೂರ್‌ಖಾಸ್, ಫೈಸಲಾಬಾದ್, ಟೂಬ ಟೇಕ್‌ಸಿಂಗ್, ಉಮರ್‌ಕೋಟ್, ಚಕ್‌ವಾಲ್, ಕೋಟ್‌ಲಿ.

ವಸೂಲಿ ಪ್ರಕಾರ ಹೆಚ್ಚಿನ ತ್ಯಾಗಗಳನ್ನು ಮಾಡಿರುವ ಪಾಕಿಸ್ತಾನದ ಪಟ್ಟಣದ ಜಮಾಅತುಗಳು ಹೀಗಿವೆ: ಇಮಾರತ್ ಡಿಫೆನ್ಸ್ ಲಾಹೋರ್, ಇಮಾರತ್ ರಾವಲ್ಪಂಡಿ, ಇಮಾರತ್ ಡರ್ಗ್‌ರೋಡ್ ಕರಾಚಿ, ಇಮಾರತ್ ಮುಗಲ್‌ಪೂರ ಲಾಹೋರ್, ಇಮಾರತ್ ಟೌನ್‌ಶಿಪ್ ಲಾಹೋರ್, ಇಮಾರತ್ ಅಝೀಝಾಬಾದ್ ಕರಾಚಿ, ಇಮಾರತ್ ಗುಲ್‌ಶನ್ ಆಬಾದ್ ಕರಾಚಿ, ಪಿಶಾವರ್, ಕೋಯ್ಟ, ಇಮಾರತ್ ದೆಹಲಿ ಗೇಟ್ ಲಾಹೋರ್.

ಅಮೇರಿಕದ ಜಮಾಅತುಗಳಲ್ಲಿ ಮೊದಲ ಸ್ಥಾನ ಮೇರಿಲೇಂಡ್‌ಗಿದೆ. ಅನಂತರ ಲಾಸ್‌ಏಂಜಲೀಸ್, ಸಿಲಿಕೋನ್ ವೇಲಿ, ಸೆಂಟ್ರಲ್ ವರ್ಜೀನಿಯಾ, ಸಿಯಾಟಲ್, ಓಶ್‌ಕೋಶ್, ಡಟ್‌ರಾಯಿಟ್, ಶಿಕಾಗೋ ಸೌತ್ ವರ್ಜೀನಿಯಾ, ಹೋಸ್ಟನ್ ಅಟ್ಲಾಂಟಿಕ ಮತ್ತು ಬೋಸ್ಟನ್.

ಒಟ್ಟು ವಸೂಲಿನ ದೃಷ್ಟಿಯಲ್ಲಿ ಕೆನಡದ ಪ್ರಾದೇಶಿಕ ಜಮಾಅತುಗಳಲ್ಲಿ, ಮೊದಲು ವಾನ್, ಅನಂತರ ವೇಲೀಜ್, ಕೇಲ್‌ಗರಿ, ವೇಂಕೋವರ್, ಟೋರಂಟೋ ವೇಸ್ಟ್, ಮಿಸಿಸಾಗ, ಬ್ರಹ್ಮ್‌ಟನ್ ಈಸ್ಟ್, ಸಸ್ಕಾಟೋನ್, ಟೋರಂಟೋ. ಕೆನಡದ ಸಣ್ಣ ಜಮಾಅತುಗಳಲ್ಲಿ ಬ್ರೆಡ್‌ಫೋರ್ಡ್, ಹೆಮಿಲ್ಟನ್, ಮೌನ್ಟೇನ್ ಎಡ್‌ಮಿಂಟನ್ ವೇಸ್ಟ್, ರಜಾಇನಾ, ಹೆಮಿಲ್ಟನ್ ಈಸ್ಟ್.

ತ್ಯಾಗದ ದೃಷ್ಟಿಯಲ್ಲಿ ಭಾರತದ ಹತ್ತು ಜಮಾಅತುಗಳ ಹೆಸರುಗಳು ಹೀಗಿವೆ: ಕೋಯಂಬತೂರಿಗೆ ಮೊದಲನೇ ಸ್ಥಾನವಿದೆ. ಅನಂತರ ಕರುಳಾಯಿ, ಖಾದಿಯಾನ್, ಪತ್ತಪಿರಿಯಂ, ಹೈದರಾಬಾದ್, ಕನ್ನೂರ್ ಟೌನ್, ಕೋಲ್ಕತ್ತ, ಕಾಲಿಕಟ್, ಬೆಂಗಳೂರು ಮತ್ತು ಮಾತೋಟಮ್.

ಮೊದಲ ಹತ್ತು ಸ್ಥಾನದಲ್ಲಿರುವ ರಾಜ್ಯಗಳು ಹೀಗಿವೆ: ಕೇರಳ ಮೊದಲ ಸ್ಥಾನದಲ್ಲಿದೆ, ಅನಂತರ ತಮಿಳುನಾಡು, ಕರ್ನಾಟಕ, ಜಮ್ಮು ಕಾಶ್ಮೀರ, ತೆಲಂಗಾಣ, ಪಂಜಾಬ್, ಒಡಿಶಾ, ಬಂಗಾಳ, ದೆಹಲಿ ಮತ್ತು ಮಹಾರಾಷ್ಟ್ರ.

ಆಸ್ಟ್ರೇಲಿಯಾದ ಮೊದಲ ಹತ್ತು ಜಮಾಅತುಗಳು ಹೀಗಿವೆ: ಮೆಲ್ಬರ್ನ್, ಲಾಂಗ್‌ವಾರೆನ್, ಕಾಸಲ್‌ಹಿಲ್, ಮೆಲ್ಬರ್ನ್ ಬೇರೂಕ್, ಮಾರ್ಸ್ಡನ್ ಪಾರ್ಕ್, ಏಡಿಲಾಯ್ಡ್ ಸೌತ್, ಪೀನ್‌ರಥ್, ಎಸಿಟಿ ಕೇಂಬ್ರ, ಏಡಿಲಾಯ್ಡ್ ವೆಸ್ಟ್, ಮೌಂಟ್ ಡ್ರೋಯ್ಟ್, ಪೀರಾಮಾಟ.

ಅಲ್ಲಾಹನು ಇವೆಲ್ಲರ ಸಂಪತ್ತು ಮತ್ತು ಜೀವನದಲ್ಲಿ ಅಪರಿಮಿತವಾದ ಅನುಗ್ರಹವನ್ನು ಸುರಿಸಲಿ ಮತ್ತು ಅವರ ತ್ಯಾಗಗಳನ್ನು ಸ್ವೀಕರಿಸಲಿ. ಅದರೊಂದಿಗೆ ನಾನು ನವೆಂಬರ್ 1ಕ್ಕೆ ಶುರುವಾಗಿರುವ ತಹ್ರೀಕ್ ಜದೀದಿನ ಘೋಷಣೆಯನ್ನು ಮಾಡುತ್ತೇನೆ.

ಈಗ ನಾನು ಒಂದು ವಿಷಯದ ಕಡೆಗೆ ನಮ್ಮ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ. ಇಂದು ಬಹಳ ದುಆಗಳ ಆವಶ್ಯಕತೆಯಿದೆ. ನಾವು ನಮಗಾಗಿ ಮತ್ತು ನಮ್ಮ ಜಮಾಅತಿಗಾಗಿ ಪ್ರಾರ್ಥನೆಗಳನ್ನು ಮಾಡುತ್ತಿರುತ್ತೇವೆ. ಸಾಮಾನ್ಯ ಮುಸ್ಲಿಮರಿಗಾಗಿಯೂ ಪ್ರಾರ್ಥನೆಗಳನ್ನು ಮಾಡುವ ಆವಶ್ಯಕತೆಯಿದೆ. ಇಂದು ಮುಸ್ಲಿಮರ ವಿರುದ್ಧ ಮುಸ್ಲಿಮೇತರ ಲೋಕದ ಕೆಲವು ರಾಷ್ಟ್ರಗಳ ನೇತಾರರು ಬಹಳ ದ್ವೇಷ ಮತ್ತು ಹಗೆಯ ಭಾವನೆಗಳನ್ನು ಹೊಂದಿರುವರು. ಅವರು ಪ್ರಜಾಪ್ರಭುತ್ವದ ಈ ಕಾಲಘಟ್ಟದಲ್ಲಿ ಸಾಮಾನ್ಯ ಜನರನ್ನು ದೇವರೆಂದು ಭಾವಿಸಿಕೊಂಡು ಅವರ ಇಚ್ಛೆ ಪ್ರಕಾರ, ತಮ್ಮ ಹೇಳಿಕೆ ಮತ್ತು ನೀತಿಗಳನ್ನು ಮಾಡಲು ಪ್ರಯತ್ನಿಸುತ್ತಾರೆ. ಕೆಲವೊಮ್ಮೆ ಜನರನ್ನು ತಪ್ಪಾದ ಕಡೆಗೆ ಕೊಂಡುಹೋಗಲು ಪ್ರಯತ್ನಿಸುತ್ತಾರೆ. ದೇವನಿಲ್ಲ, ನೀವೇ ಎಲ್ಲವೂ ಎಂದು ಜನರೊಡನೆ ಹೇಳುತ್ತಾರೆ. ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲದ ಸ್ಥಳಗಳಲ್ಲಿ ಕೂಡ ಇಸ್ಲಾಮಿನ ವಿರುದ್ಧ ದ್ವೇಷಭಾವನೆಯನ್ನು ಹೊಂದಿದ್ದಾರೆ. ಜನಸಾಮಾನ್ಯರಲ್ಲಿ ಬಹುಭಾಗಕ್ಕೆ ಇಸ್ಲಾಮಿನ ಬಗ್ಗೆ ಸರಿಯಾದ ಪರಿಚಯವಿಲ್ಲದ ಕಾರಣದಿಂದ, ಅವರು ಕೂಡ ಮುಸ್ಲಿಮರ ವಿರೋಧಿಗಳಾಗಿರುವರು. ಹೇಗಿದ್ದರೂ ನಾವು ದುಆ ಮಾಡುತ್ತಾ, ಇಸ್ಲಾಮಿನ ನೈಜತೆಯೇನೆಂದು ಲೋಕಕ್ಕೆ ತಿಳಿಸಿಕೊಡಬೇಕಾಗಿದೆ. ಕಳೆದ ದಿನಗಳಲ್ಲಿ ಸ್ಪಷ್ಟವಾಗಿ ಪಾಶ್ಚಾತ್ಯ ದೇಶದ ಲೀಡರ್ ಹೇಳಿಕೆಯನ್ನು ನೀಡಿದ್ದಾರೆ. ಏನಾದರೂ ಹೇಳಿಕೆಗಳು ಸಾಮಾನ್ಯವಾಗಿ ಬರುತ್ತಾ ಇರುತ್ತವೆ. ರಾಜಕೀಯ ಹೇಳಿಕೆಗಳಲ್ಲಿ ಅಸ್ಪಷ್ಟವಾದ ರೀತಿಯಲ್ಲಿ ಹೇಳುತ್ತಿರುತ್ತಾರೆ. ಆದರೆ ಸ್ಪಷ್ಟವಾಗಿ ಹೀಗೆ ಹೇಳಿಕೆ ನೀಡಿದ ಲೀಡರ್ ಫ್ರಾನ್ಸಿನ ಪ್ರಧಾನಿಯಾಗಿದ್ದಾರೆ. ಇಸ್ಲಾಮ್ ಬಿಕ್ಕಟ್ಟಿಗೆ ಗುರಿಯಾದ ಧರ್ಮವಾಗಿದೆ ಎಂದು ಫ್ರಾನ್ಸಿನ ಪ್ರಧಾನಿ ಕಳೆದ ದಿನಗಳಲ್ಲಿ ಹೇಳಿಕೆಯನ್ನು ನೀಡಿದ್ದಾರೆ. ಯಥಾರ್ಥದಲ್ಲಿ ಅವರ ಧರ್ಮವೇ ಸಂಕಷ್ಟಕ್ಕೆ ಸಿಲುಕಿರುವ ಧರ್ಮವಾಗಿದೆ. ಮೊದಲ ಸಂಗತಿಯೇನೆಂದರೆ, ಇವರು ಯಾವುದೇ ಧರ್ಮವನ್ನು ನಂಬುವುದೇ ಇಲ್ಲ. ಕ್ರೈಸ್ತ ಧರ್ಮವನ್ನು ಸಹ ಮರೆತುಬಿಟ್ಟಿದ್ದಾರೆ. ಯಥಾರ್ಥದಲ್ಲಿ ಅವರ ಈ ಧರ್ಮವೇ ಕ್ರೈಸಿಸಿಗೆ ತುತ್ತಾಗಿದೆ. ಅಲ್ಲಾಹನ ಅನುಗ್ರಹದಿಂದ ಇಸ್ಲಾಂ ಅಂತು ಜೀವಂತ ಧರ್ಮವಾಗಿದೆ ಹಾಗೂ ಅಭಿವೃದ್ಧಿಗೊಳ್ಳುತ್ತಿರುವ ಧರ್ಮವಾಗಿದೆ. ಅದು ಫಲಿಸುತ್ತಾ ಪುಷ್ಪಿಸುತ್ತಾ ಇದೆ. ಅಲ್ಲಾಹನು ಎಲ್ಲ ಕಾಲದಲ್ಲೂ ಅದರ ಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿದ್ದಾನೆ. ಈ ಕಾಲಘಟ್ಟದಲ್ಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಅದರ ಸಂದೇಶ ಲೋಕದ ನಾಲ್ಕೂ ಕಡೆಗಳಲ್ಲಿ ಹರಡುತ್ತಿದೆ. ಸತ್ಯವೇನೆಂದರೆ, ಮುಸ್ಲಿಮರ ಎಡೆಯಲ್ಲಿ ಪರಸ್ಪರ ಐಕ್ಯವಿಲ್ಲವೆಂದು ಇಸ್ಲಾಮಿನ ವಿರೋಧಿಗಳಿಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಅವರು ಹೀಗೆ ವರ್ತಿಸುತ್ತಾರೆ ಮತ್ತು ಹೇಳಿಕೆಗಳನ್ನು ನೀಡುತ್ತಾರೆ. ಈ ಸಂದರ್ಭದಲ್ಲಿ ನಾನು ಕೆನಡಾದ ಪ್ರಧಾನಮಂತ್ರಿಯನ್ನು ಪ್ರಶಂಸಿಸುತ್ತೇನೆ. ಅವರು ಫ್ರಾನ್ಸಿನ ಪ್ರಧಾನಿನ ಹೇಳಿಕೆಗೆ ಉತ್ತರವಾಗಿ ಬಹಳ ಉತ್ತಮವಾದ ಹೇಳಿಕೆಯನ್ನು ನೀಡಿರುವರು. ಇವೆಲ್ಲವೂ ತಪ್ಪಾಗಿದೆ, ಹೀಗೆಲ್ಲ ಆಗಬಾರದು, ಪರಸ್ಪರರ ಭಾವನೆಗಳನ್ನು, ಧಾರ್ಮಿಕ ಭಾವನೆಗಳನ್ನು ಮತ್ತು ಧಾರ್ಮಿಕ ಗುರುಗಳನ್ನು ಗೌರವಿಸಬೇಕೆಂದು ಅವರು ಹೇಳಿದರು. ಲೋಕದ ಇತರ ದೇಶಗಳ ಲೀಡರ್‌ಗಳು ಸಹ ಕೆನಡಾದ ಪ್ರಧಾನಮಂತ್ರಿಯ ಯೋಚನೆ ಮತ್ತು ಹೇಳಿಕೆಯನ್ನು ಗಮನದಿಂದ ನೋಡಿದ್ದರೆ ಮತ್ತು ಶಾಂತಿ ಮತ್ತು ಸಮಾಧಾನ ಸ್ಥಾಪಿಸಲು ಕೆಲಸಮಾಡಿದರೆ ಎಷ್ಟು ಚೆನ್ನ. ಹೇಗಿದ್ದರೂ ಈ ದೃಷ್ಟಿಯಲ್ಲಿ ಕೆನಡದ ಪ್ರಧಾನಿಯರ ಹೇಳಿಕೆ ಪ್ರಶಂಸನೀಯವಾದುದಾಗಿದೆ. ಅಲ್ಲಾಹನ ಅವರ ಮನಸ್ಸನ್ನು ಇನ್ನೂ ವಿಶಾಲಗೊಳಿಸಲು ನಾವು ಪ್ರಾರ್ಥಿಸಬೇಕು.

ಹೇಗಿದ್ದರೂ ಮುಸ್ಲಿಮರಲ್ಲಿ ಐಕ್ಯವಿಲ್ಲ. ಇದೇ ಕಾರಣದಿಂದ ಇವೆಲ್ಲವೂ ಆಗುತ್ತಿವೆ. ಮುಸ್ಲಿಮರ ಪ್ರತಿಯೊಂದು ದೇಶ ಮತ್ತೊಂದು ದೇಶದ ವಿರುದ್ಧವಿದೆ. ಮುಸ್ಲಿಮರಲ್ಲಿ ಒಡಕಿದೆ ಎಂದು ಹೊರಗಿನ ಲೋಕಕ್ಕೆ ಮುಸ್ಲಿಮರ ಪಕ್ಷಗಾರಿಕೆಯಿಂದ ಗೊತ್ತಾಗಿದೆ. ಮುಸ್ಲಿಮರು ಐಕ್ಯದಿಂದಿದ್ದಾರೆ ಮತ್ತು ಅವರು ಒಂದೇ ಅಲ್ಲಾಹ್ ಹಾಗೂ ಒಂದೇ ರಸೂಲನ್ನು ನಂಬುವವರಾಗಿದ್ದಾರೆ ಮತ್ತು ಅದಕ್ಕಾಗಿ ತ್ಯಾಗಗಳನ್ನು ಮಾಡಲು ಅವರಿಗೆ ಗೊತ್ತಿದೆ ಎಂದು ಲೋಕಕ್ಕೆ ಮನವರಿಕೆಯಾದರೆ, ಎಂದಿಗೂ ಮುಸ್ಲಿಮೇತರ ಲೋಕದಿಂದ ಇಂತಹ ವರ್ತನೆಗಳು ನಡೆಯದು. ಎಂದಿಗೂ ಯಾವುದೇ ಪತ್ರಿಕೆಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವ್ಯಂಗ್ಯಚಿತ್ರಗಳನ್ನು ಪ್ರಕಟಿಸುವ ಧೈರ್ಯ ಬರುತ್ತಿರಲಿಲ್ಲ. ಡೆನ್ಮಾರ್ಕ್ ಮತ್ತು ಫ್ರಾನ್ಸಿನಲ್ಲಿ ಕೆಲವು ವರ್ಷಗಳ ಹಿಂದೆ ವ್ಯಂಗ್ಯಚಿತ್ರಗಳನ್ನು ಮುದ್ರಿಸಲಾದಾಗ, ತಾತ್ಕಾಲಿಕವಾಗಿ ಬೊಬ್ಬೆಮಾಡಲಾಗಿತ್ತು. ಅವರ ವಸ್ತುಗಳನ್ನು ಬಾಯ್ಕೋಟ್ ಮಾಡಲಾಗಿತ್ತು. ಖರೀದಿ ಮಾಡುವುದಿಲ್ಲ ಎಂದು ಘೋಷಿಸಲಾಗಿತ್ತು. ಅನಂತರ ಸುಮ್ಮನಾದರು. ಏನೂ ಆಗಲಿಲ್ಲ. ಕೆಲವು ತಿಂಗಳ ನಂತರ ಸುಮ್ಮನೆ ಕುಳಿತರು. ಆಗಲೂ ಅಹ್ಮದಿಯಾ ಜಮಾಅತೇ ಸರಿಯಾದ ರೀತಿಯಲ್ಲಿ ಪ್ರತಿಕ್ರಯಿಸಿತ್ತು. ಅವರ ಮುಂದೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುಂದರವಾದ ಜೀವಿತಮಾದರಿಯನ್ನು ಮುಂದಿರಿಸಿತ್ತು. ಅವುಗಳನ್ನು ಹಲವಾರು ಮುಸ್ಲಿಮೇತರರು ಓದಿದರು. ವಿದ್ಯಾವಂತರೂ ಲೀಡರ್‌ಗಳೂ ಮತ್ತು ಸಾಮಾನ್ಯ ಜನರು ಹೊಗಳಿದ್ದರು ಮತ್ತು ಇಷ್ಟಪಟ್ಟಿದ್ದರು. ಇಂದು ಸಹ ನಾವು ಇದೇ ಕೆಲಸವನ್ನು ಮಾಡುತ್ತಿದ್ದೇವೆ. ಕೆಲವು ತಲೆಕೆಟ್ಟವರು ಇಸ್ಲಾಮಿನ ಹೆಸರಲ್ಲಿ ಮಾಡಿದ ತಪ್ಪಾದ ಕೃತ್ಯಗಳಿಗೆ ಇಸ್ಲಾಂ ಎಂದು ಹೆಸರಿಸಬೇಡಿರಿ ಎಂದು ನಾವು ಹೇಳುತ್ತೇವೆ. ಯಾವುದಾದರೂ ವ್ಯಕ್ತಿಯ ತಪ್ಪಾದ ಕೃತ್ಯಗಳ ಕಾರಣದಿಂದ ಇಸ್ಲಾಮಿನ ಅಧ್ಯಾಪನೆ ಮತ್ತು ಮುಸ್ಲಿಮರಿಗೆ ಕ್ರೈಸಿಸ್ ಅಥವಾ ಬಿಕ್ಕಟ್ಟಿನ ಹೆಸರನ್ನು ನೀಡಿದ ನಂತರ ಇದು ಮುಸ್ಲಿಮರ ವಿರುದ್ಧ ನಮ್ಮ ಹೋರಾಟವಾಗಿದೆ ಮತ್ತು ಈ ಹೋರಾಟವನ್ನು ನಾವು ಜಾರಿಯಲ್ಲಿರುಸುತ್ತೇವೆ ಎಂದೆಲ್ಲ ಹೇಳಿಕೆಯನ್ನು ನೀಡಿ ತಮ್ಮ ಜನರನ್ನು ಇನ್ನು ಹೆಚ್ಚಿನ ರೊಚ್ಚಿಗೆಬ್ಬಿಸುವುದು ಯಾವುದಾದರೂ ರಾಷ್ಟ್ರದ ಪ್ರಧಾನಿಯ ಕೆಲಸವಲ್ಲ. ತಪ್ಪಾದ ಕೃತ್ಯಗಳನ್ನು ಮಾಡಲು ಆ ವ್ಯಕ್ತಿಯನ್ನು ರೊಚ್ಚಿಗೆಬ್ಬಿಸಿದ್ದೂ ಇವರು ಸ್ವತಃ ಆಗಿದ್ದಾರೆ.

ಈ ರೀತಿಯ ವ್ಯಂಗ್ಯಚಿತ್ರಗಳನ್ನೆಲ್ಲ ಮಾಡುವುದನ್ನು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಂದನೆ ಮಾಡುವುದನ್ನು ಒಬ್ಬ ಸ್ವಾಭಿಮಾನಿಯಾದ ಮುಸ್ಲಿಮನು ಸಹಿಸಲಾರನು. ಕೆಲವು ಮುಸ್ಲಿಮರ ಭಾವನೆಗಳನ್ನು ಇಂತಹ ಕೃತ್ಯಗಳು ರೊಚ್ಚಿಗೆಬ್ಬಿಸಬಹುದು ಮತ್ತು ರೊಚ್ಚಿಗೆಬ್ಬಿಸುವುದು. ಅಂತಹ ಮುಸ್ಲಿಮರಿಂದ ಕಾನುನುವಿರುದ್ಧವಾದ ಯಾವುದಾದರೂ ಕೃತ್ಯಗಳು ನಡೆದರೆ, ಅದಕ್ಕೆ ಈ ಮುಸ್ಲಿಮೇತರ ಜನರೇ, ಆಡಳಿತವೇ ಮತ್ತು ತಥಾಕಥಿತ ಸ್ವಾತಂತ್ರ್ಯವೇ ಜವಾಬ್ದಾರರಾಗಿರುತ್ತಾರೆ. ಇದನ್ನು ಫ್ರೀಡಮ್ ಎಕ್ಸ್‌ಪ್ರೆಶನಿನ, ಮನಸಾಕ್ಷಿ ಸ್ವಾತಂತ್ರ್ಯದ ಹೆಸರನ್ನು ನೀಡುತ್ತಾರೆ. ಹೇಗಿದ್ದರೂ ಈ ಮುಸ್ಲಿಮೇತರ ದೇಶದವರು ಇವರ ಭಾವನೆಗಳನ್ನು ರೊಚ್ಚಿಗೆಬ್ಬಿಸುತ್ತಾರೆ. ನಾನು ಆಗಲೂ, ಎಂದರೆ ಮೊದಲ ಬಾರಿ ಈ ವಿಷಯ ಎದ್ದಾಗ, ಖುತ್‌ಬಗಳ ಒಂದು ಪರಂಪರೆಯಲ್ಲಿ ಸರಿಯಾದ ಪ್ರತಿಕ್ರಿಯೆಯ ಬಗ್ಗೆ ವಿವರಿಸಿದ್ದೆ. ನಾವು ಹೇಗೆ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸಬೇಕು ಎಂದು ಹೇಳಿದ್ದೆ. ಇದರ ಉತ್ತಮ ಪ್ರಭಾವವೂ ಜನರಲ್ಲಿ ಉಂಟಾಗಿತ್ತು. ಈಗಲೂ ನಾವು ನಿರಂತರವಾಗಿ ಮಾಡುತ್ತಿದ್ದೇವೆ ಮತ್ತು ಈ ರೀತಿಯನ್ನು ಜಾರಿಯಲ್ಲಿರಿಸಿದ್ದೇವೆ.

ಹಾಲೆಂಡಿನ ವಿಜ್ಞಾನಿಯೊಬ್ಬರು ಹಿಂದೆ ಒಂದು ಹೇಳಿಕೆಯನ್ನು ನೀಡಿದಾಗಲೂ ನಾನೊಂದು ಖುತ್‌ಬ ನೀಡಿದ್ದೆ. ಅಲ್ಲಾಹನ ಶಿಕ್ಷೆಯ ಕುರಿತು ಅವರಿಗೆ ಎಚ್ಚರಿಕೆ ನೀಡಿದ್ದೆ. ಆಗ ನನಗೆ ಮರಣದ ಬೆದರಿಕೆಯನ್ನು ನೀಡುತ್ತಿದ್ದಾರೆ ಎಂದು ಹೇಳಿ ಅವರು ಹಾಲೆಂಡ್ ಸರ್ಕಾರಕ್ಕೆ ದೂರುನೀಡಿದ್ದರು. ಅಲ್ಲಿಗೆ ಬರುವುದನ್ನು ಬೇನ್ ಮಾಡಬೇಕೆಂದು ಹಾಲಂಡ್ ಸರ್ಕಾರದೊಡನೆ ವಿನಂತಿಸಿದರು. ನನ್ನ ವಿರುದ್ಧ ಮೊಕದ್ದಮೆ ಹೂಡಿದ್ದರು.

ನಾವಂತು ನಮಗೆ ಸಾಧ್ಯವಾದಷ್ಟು, ಕಾನೂನಿನ ಪರಿಮಿತಿಯಲ್ಲಿ ಇದ್ದುಕೊಂಡು ಇಸ್ಲಾಂ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನದ ವಿರುದ್ಧ ನಡೆಯುವಂತಹ ಕೃತ್ಯಗಳಿಗೆ ಜವಾಬು ಕೊಡುತ್ತೇವೆ ಮತ್ತು ಕೊಡುತ್ತಿರುತ್ತೇವೆ. ಇದರ ಪ್ರಭಾವ ಸಹ ಆಗುತ್ತದೆ. ಕಾನೂನಿನ ಪರಿಮಿತಿಯಲ್ಲಿದ್ದುಕೊಂಡು ಪ್ರತಿಯೊಂದು ಹೆಜ್ಜೆಯನ್ನು ಹಾಕಬೇಕೆಂಬ ಪರಿಹಾರ ಮಾರ್ಗವನ್ನು ನಾವು ಮುಂದಿರುಸುತ್ತೇವೆ. ಎಲ್ಲಕ್ಕಿಂತ ಮಿಗಿಲಾಗಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದುರೂದ್ ಮತ್ತು ಪ್ರಾರ್ಥನೆಗಳನ್ನು ಮಾಡಬೇಕಾಗಿದೆ. ಕಳೆದ ಹಲವು ಖುತ್‌ಬಗಳಲ್ಲಿ ಇದರ ಬಗ್ಗೆ ಹೇಳಿದ್ದೆ. ನಮ್ಮ ವಿರುದ್ಧ ಅಹ್ಮದಿಯೇತರ ಉಲೇಮಾಗಳು ಕಠಿಣವಾದ ಹೇಳಿಕೆಗಳನ್ನು ನೀಡುತ್ತಾರೆ. ಆದರೆ ನಾವು ಇಸ್ಲಾಮಿನ ಯಥಾರ್ಥ ಅಧ್ಯಾಪನೆಗಳ ಬೆಳಕಿನಲ್ಲಿ ನಮ್ಮ ಕೆಲಸಗಳನ್ನು ಮಾಡುತ್ತಾ ಹೋಗುವೆವು ಮತ್ತು ಹೋಗುತ್ತಿದ್ದೇವೆ. **ಇನ್‌ಶಾ ಅಲ್ಲಾಹ್**.

ಒಂದು ಅಥವಾ ನಾಲ್ಕು ಜನರನ್ನು ಕೊಲ್ಲುವುದರಿಂದ ತಾತ್ಕಾಲಿಕವಾದ ಆವೇಶ ಹೊರಟುಹೋಗುವುದು. ಆದರೆ ಇದು ಸ್ಥಿರವಾದ ಪರಿಹಾರವಲ್ಲ. ಮುಸ್ಲಿಮ್ ಜನತೆ ಸ್ಥಿರವಾದ ಪರಿಹಾರವನ್ನು ಬಯಸುವುದಾದರೆ, ಎಲ್ಲ ಮುಸ್ಲಿಮ್ ಲೋಕವು ಒಗ್ಗಟ್ಟಿನಿಂದ ಇರಬೇಕಾಗಿದೆ. ಈಗಲೂ ಫ್ರಾನ್ಸಿನ ಸದರಿಗೆ ಜವಾಬು ನೀಡುತ್ತಾ ತುರ್ಕಿಯ ಸದರ್ ಸಹ ಹೇಳಿಕೆ ನೀಡಿದ್ದಾರೆ. ಒಂದೆರಡು ದೇಶಗಳು ಪ್ರತಿಕ್ರಯಿಸಿವೆ. ಆದರೆ ಎಲ್ಲ ಮುಸ್ಲಿಮ್ ದೇಶಗಳು ಒಟ್ಟುಸೇರಿ ಪ್ರತಿಕ್ರಯಿಸುವಾಗ ಉಂಟಾಗುವ ಪ್ರಭಾವ ಇದರಿಂದ ಉಂಟಾಗುವುದಿಲ್ಲ. ತುರ್ಕಿ ಮುಂತಾದವರ ಪ್ರತಿಕ್ರಿಯೆಯಿಂದ ಫ್ರಾನ್ಸಿನ ಸದರ್ ತನ್ನ ಹೇಳಿಕೆಯನ್ನು ಬದಲಾಯಿದ್ದಾರೆ ಎಂದೆಲ್ಲ ಹೇಳಲಾಗುತ್ತದೆ.

ನನ್ನ ಉದ್ದೇಶ ಇದಾಗಿರಲಿಲ್ಲ ಎಂದೆಲ್ಲ ಹೇಳುತ್ತಿದ್ದಾರೆ. ಆದರೆ ತನ್ನ ಮಾತಿನಲ್ಲಿ ದೃಢವಾಗಿ ನಿಂತಿದ್ದಾರೆ. ನಾವು ಮಾಡಿದ್ದು ಸರಿಯೇ ಆಗಿದೆ ಎಂದು ಭಾವಿಸುತ್ತಿದ್ದಾರೆ. ಆದರೆ 54, 55 ಮುಸ್ಲಿಮ್ ರಾಷ್ಟ್ರಗಳು ಒಂದೇ ಸ್ವರದಲ್ಲಿ ಧ್ವನಿ ಎತ್ತುತ್ತಿದ್ದರೆ, ಫ್ರಾನ್ಸಿನ ಪ್ರಧಾನಿ ಅಂತಿಂಥ ಮಾತುಗಳನ್ನು ಹೇಳುತ್ತಿರಲಿಲ್ಲ. ಹೇಗಿದ್ದರೂ ಅವರಿಗೆ ಕ್ಷಮೆಯಾಚಿಸಬೇಕಾಗಿ ಬರುತ್ತಿತ್ತು ಮತ್ತು ಮಂಡಿಯೂರಬೇಕಾಗಿ ಬರುತ್ತಿತ್ತು. ಹೇಗಿದ್ದರೂ ದುಆ ಮಾಡಿರಿ ಎಂದು ಮಾತ್ರ ಇಲ್ಲಿ ಹೇಳುತ್ತೇನೆ. ಮುಸ್ಲಿಮರು ಕನಿಷ್ಟ ಪಕ್ಷ ಅನ್ಯರ ವಿರುದ್ಧ ಒಂದೇ ಸ್ವರದಲ್ಲಿ ಧ್ವನಿಯೆತ್ತುವವರಾಗಲಿ. ಅನಂತರ ಇದರ ಪ್ರಭಾವ ಎಷ್ಟಿರುತ್ತದೆ ಎಂದು ನೋಡಿರಿ. ನಾವಂತು ನಮ್ಮ ಕೆಲಸವನ್ನು ಮಾಡುತ್ತಾ ಇದ್ದೇವೆ ಮತ್ತು ಮಾಡುತ್ತಿರುತ್ತೇವೆ. ಇನ್‌ಶಾ ಅಲ್ಲಾಹ್. ಇಸ್ಲಾಮಿನ ಸುಂದರವಾದ ಪಾಠಗಳನ್ನು ಲೋಕದ ಮುಂದೆ ಇರಿಸುವುದು ಅಹ್ಮದಿಯರ ಕೆಲಸವಾಗಿದೆ ಮತ್ತು ಕರ್ತವ್ಯವಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುಂದರವಾದ ಮುಖವನ್ನು ಲೋಕಕ್ಕೆ ತೋರಿಸಿರಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಧ್ವಜದ ಕೆಳಗೆ ಸಂಪೂರ್ಣ ಲೋಕವನ್ನು ತರುವ ತನಕ ಸಮಾಧಾನದಿಂದ ಕುಳಿತುಕೊಳ್ಳಬೇಡಿರಿ. ಏಕನಾದ ಅಲ್ಲಾಹನನ್ನು ಅರಿಯುವುದರಲ್ಲೇ ನಮ್ಮ ಉಳಿಯುವಿಕೆ ಇರುವುದು ಮತ್ತು ದೌರ್ಜನ್ಯಗಳನ್ನು ಕೊನೆಗೊಳಿಸಿರಿ ಎಂದು ಲೋಕದ ಜನರೊಡನೆ ಹೇಳಿರಿ.

ಕೆಲವು ತಿಂಗಳ ಮುಂಚೆ ಇದೇ ಕೋವಿಡ್‌ನ ದಿನಗಳಲ್ಲಿ, ನಾನು ಕೆಲವು ದೇಶದ ಪ್ರಧಾನಿಗಳಿಗೆ ಮತ್ತೊಮ್ಮೆ ಪತ್ರಗಳನ್ನು ಬರೆದಿದ್ದೆ. ಫ್ರಾನ್ಸಿನ ಪ್ರಧಾನಿಗೂ ಬರೆದಿದ್ದೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖದೊಂದಿಗೆ ಮುನ್ನೆಚ್ಚರಿಕೆಯನ್ನೂ ನೀಡಿದ್ದೆ. ಈ ಶಿಕ್ಷೆ ಮತ್ತು ಆಪತ್ತುಗಳು ದೌರ್ಜನ್ಯಗಳ ಕಾರಣದಿಂದ ಬರುತ್ತದೆ, ಆದ್ದರಿಂದ ನೀವು ಇದರ ಕಡೆಗೆ ಗಮನವಹಿಸಬೇಕು, ದೌರ್ಜನ್ಯಗಳನ್ನು ಕೊನೆಗೊಳಿಸು, ನ್ಯಾಯ – ನೀತಿಯನ್ನು ನೆಲೆಗೊಳ್ಳಿಸು ಮತ್ತು ಸತ್ಯದ ಆಧಾರದಲ್ಲಿ ಹೇಳಿಕೆಯನ್ನು ನೀಡಲು ಅವರೊಡನೆ ಹೇಳಿದ್ದೆ. ನಾವು ನಮ್ಮ ಕರ್ತವ್ಯವನ್ನು ಈಡೇರಿಸಿದ್ದೇವೆ ಮತ್ತು ಈಡೇರಿಸುತ್ತಿರುತ್ತೇವೆ. ಇವುಗಳನ್ನು ಮನವರಿಕೆ ಮಾಡುವುದು ಅಥವಾ ಮಾಡದಿರುವುದು ಅವರ ಇಷ್ಟಕ್ಕೆ ಬಿಟ್ಟದ್ದು. ಹೇಗಿದ್ದರೂ ನಾವು ಮುಸ್ಲಿಂ ಸಮುದಾಯವನ್ನು ಪ್ರಾರ್ಥನೆಗಳಲ್ಲಿ ಮರೆಯಬಾರದು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ದಾಸರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಗುರುತಿಸಲು ಅವರಿಗೆ ಸೌಭಾಗ್ಯ ನೀಡಲಿ. ದೇವನಿಂದ ದೂರಸರಿಯುತ್ತಾ ಹೋಗುವುದರಿಂದ ನಾಶವಲ್ಲದೆ ಬೇರೇನೂ ಆಗದು ಎಂದು ಲೋಕವು ಯೋಚಿಸಬೇಕಾಗಿದೆ. ಲೋಕವನ್ನು ಅಲ್ಲಾಹನ ಏಕದೇವ ವಿಶ್ವಾಸದ ಅಡಿಯಲ್ಲಿ ತರಲು ನಾವು ಸಾಮಾನ್ಯವಾಗಿ ಪ್ರಯತ್ನಿಸಬೇಕಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಾವುಟದ ಕೆಳಗೆ ತರುವುದೇ ತಹ್ರೀಕ್ ಜದೀದಿನ ಸಹ ಉದ್ದೇಶವಾಗಿದೆ. ಅಲ್ಲಾಹನು ನಮಗೆ ಅದರ ತೌಫೀಕ್ ನೀಡಲಿ. ಅದಲ್ಲದೆ ಲೋಕದ ಸಾಧಾರಣ ಸ್ಥಿತಿಗತಿಗಳ ಬಗ್ಗೆಯೂ ದುಆ ಮಾಡಿರಿ. ಬಹಳ ವೇಗದಿಂದ ವಿಪತ್ತಿನ ಕಡೆಗೆ ಸಾಗುತ್ತಿದೆ. ಈ ರೋಗದಿಂದ ಮುಕ್ತಿ ಪಡೆಯುವಷ್ಟರಲ್ಲಿ ಇನ್ನೊಂದು ವಿಪತ್ತು ಮಹಾಯುದ್ಧದ ರೂಪದಲ್ಲಿ ಬರದಿರಲಿ. ಅಲ್ಲಾಹನು ಲೋಕಕ್ಕೆ ಬುದ್ಧಿ ಮತ್ತು ವಿವೇಕವನ್ನು ನೀಡಲಿ. ಏಕದೇವನನ್ನು ಗುರುತಿಸಿ ಅವನಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸುವವರಾಗಲಿ.

*****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಬಾಹ್ಯ ಹಾಗೂ ಆಂತರಿಕ ರೂಪದಲ್ಲಿ ಶಾಂತಿ ಮತ್ತು ಸಹಕಾರ ದೊರೆಯುವುದು.

ಒಂದು ವೇಳೆ ಅರ್ಥ ಪತಿ ಅಥವಾ ಪತ್ನಿ ಎಂದು ತೆಗೆದುಕೊಂಡರೂ "ಅಜ್‌ವಾಜ್' ಪುರುಷ ಮತ್ತು ಸ್ತ್ರೀ ಇಬ್ಬರಿಗೂ ಅನ್ವಯವಾಗುತ್ತದೆ. ಸ್ತ್ರೀಯ ಝಕಿತ್ ಅವಳ ಪತ್ನಿ ಪುರುಷನ ಝೌಜ್ ಅವನ ಪತ್ನಿ, ಈ ನೆಲೆಯಲ್ಲಿ ಅದರ ಅರ್ಥ ಹೀಗೂ ಆಗಬಹುದು, ಪತಿ ಸ್ವರ್ಗವಾಸಿಯ ಬಳಿ ಅವರಿಗೆ ಒಂದು ಪರಿಶುದ್ಧ ಜೋಡಿ ನೀಡಲಾಗುವುದು, ಈ ಅರ್ಥ ಮೇಲೆ ಆಕ್ಷೇಪ ಎತ್ತಲು ಸಾಧ್ಯವಿಲ್ಲ, ಬದಲು ಇದು ಉತ್ತೇಜನ ನೀಡುವಂತಹದ್ದಾಗಿದೆ. ಪುರುಷನಿಗೆ ತಮ್ಮ ಸತ್ಕರ್ಮಗಳ ಜೊತೆಯಲ್ಲಿ ತನ್ನ ಪತ್ನಿಯ ಸತ್ಕರ್ಮಗಳ ಬಗ್ಗೆಯೂ ಗಮನ ಒಡಬೇಕಾಗಿದೆ ಹಾಗೆಯೇ ಮಹಿಳೆಗೂ ಸಹ ತನ್ನ ಸತ್ಕರ್ಮಗಳ ಜೊತೆಯಲ್ಲಿ ತನ್ನ ಪತಿಯ ಸತ್ಕರ್ಮಗಳ ಬಗ್ಗೆಯೂ ಗಮನ ಹರಿಸಬೇಕಾಗುತ್ತದೆ. ಏಕೆಂದರೆ ಅವರು ಇಹಲೋಕದ ಹಾಗೆ ಪರಲೋಕದಲ್ಲೂ ಒಟ್ಟುಗೂಡಿ ಇರುವ ಬಯಸುವವನಾದರೆ ಅವರಿಬ್ಬರಿಗೂ ಸಜ್ಜನನಾಗಿರಲು ಪ್ರಯತ್ನಿಸಬೇಕಾಗುತ್ತದೆ. ಇಲ್ಲವಾಗಿದ್ದಲ್ಲಿ ಪತಿ ಸ್ವರ್ಗ ಸೇರುವವನಾದರೆ ಪತ್ನಿ ನರಕವಾಸಿಯಾಗಿರಬಹುದು. ಈ ಅರ್ಥದನ್ವಯ ಈ ಆಧ್ಯಾತ್ಮಿಕ ಪರಿಶುದ್ಧತೆ ಪಡೆಯುವ ಶಿಕ್ಷಣವು ಅತ್ಯುತ್ತಮವಾಗಿದೆ. ಆದರೆ ಮೇಲೆ ಆಕ್ಷೇಪ ಎತ್ತುವ ಬದಲು ಅದರ ಪ್ರಶಂಸೆ ಮಾಡಬೇಕಾಗುತ್ತದೆ.

ಇನ್ನು ಉಳಿದ ವಿಷಯವೇನೆಂದರೆ ಅದರ ಒಂದು ಅರ್ಥ ಹೀಗೂ ಆಗಬಹುದು. ಪ್ರತಿಯೊಬ್ಬನಿಗೂ ಒಂದು ಪರಿಶುದ್ಧ ಜೋಡಿ ನೀಡಲಾಗುವುದು. ಈ ಅರ್ಥದಲ್ಲೂ ಯಾರಿಗೆ ಆಕ್ಷೇಪ ಎತ್ತಲು ಸಾಧ್ಯವಾಗಲಿಕ್ಕಿಲ್ಲ. ಏಕೆಂದರೆ ಪ್ರತಿ ಪುರುಷನಿಗೆ ಒಂದು ಪರಿಶುದ್ಧ ಪತ್ನಿ ಕೊಡಲಾಗುವುದು ಮತ್ತು ಪ್ರತಿ ಮಹಿಳೆಗೆ ಒಂದು ಪರಿಶುದ್ಧ ಪುರುಷ ನೀಡಲಾಗುವುದು. ಎಂದಾದರೂ ಆಕ್ಷೇಪ ಮಾಡಲು ಸಾಧ್ಯವಿಲ್ಲ. ಏನಾಧರೂ ಅಪವಿತ್ರ ಕರ್ಮದೆಡೆ ಗಮನ ಸೆಳೆದರೆ ಮಾತ್ರ ಆಕ್ಷೇಪ ಎತ್ತಬಹುದು. ಪವಿತ್ರ ಖುರ್‌ಆನ್ ಪರಿಶುದ್ಧ ಪದ ಬಳಕೆ ಮಾಡಿರುವಾಗ ಸ್ಪಷ್ಟವಿದೆ. ಸ್ವರ್ಗದಲ್ಲಿ ಲಭಿಸುವುದೆಲ್ಲ ಪರಿಶುದ್ಧವೇ ಆಗಿರಲು ಸಾಧ್ಯ ಎಂದಾಗ ಹೇಗೆ ತಾನೇ ಆಕ್ಷೇಪ ಎತ್ತಲು ಸಾಧ್ಯ.

ಸರ್ ವಿಲಿಯಮ್ ಮ್ಯಾಕ್ಸ್ ಈ ವಚನದ ವಿಷಯದಲ್ಲಿ ಒಂದು ಗಂಭೀರವಾದ ಅಪವಾದವನ್ನು ಮಾಡಿದ್ದಾರೆ. ಮತ್ತು ರೇವರಂಡ್ ವ್ಹೋರಿ ತನ್ನ ಅಭ್ಯಾಸಬಲದಂತೆ ಅದನ್ನು ದೃಢೀಕರಿಸಿದ್ದಾನೆ. ಆ ಆಕ್ಷೇಪವು ಹೀಗಿದೆ. ಪವಿತ್ರ ಖುರ್‌ಆನ್‌ನ ಮಕ್ಕ ಅಧ್ಯಾಯಗಳಲ್ಲಿ ಸ್ತ್ರೀಯರ ಕುರಿತು ಹೆಚ್ಚಾಗಿ ಮತ್ತು ಉತ್ಸಾಹ ತೋರಲಾಗಿದೆ. ಆದರೆ ಮದೀನ ಅಧ್ಯಾಯಗಳಲ್ಲಿ ಕೇವಲ ಎರಡು ಕಡೆ ಅದು ಸಹ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅದು ಹೀಗಿದೆ. ಸತ್ಯವಿಶ್ವಾಸಿಗರಿಗೆ ಪರಿಶುದ್ಧ ಸಂಗಾತಿಗಳು ದೊರೆಯುವುವು ಎಂಬ ವಿವರಣೆ ಇದೆ. ಅದರಿಂದ ನಮಾಝ್ ಬಿಲ್ಲಾ ಅಲ್ಲಾಹನ ಅಭಯವಿರಲಿ. ಫಲಿತಾಂಶ ದೊರೆಯುವುದೇನೆಂದರೆ ಅವರಿಗೆ ಮಕ್ಕದಲ್ಲಿ ಕೇವಲ ಒಂದೇ ಪತ್ನಿ ಇದ್ದು. ಅದು ಸಹ ವೃದ್ಧೆ. ಆದುದರಿಂದ ಮುಹಮ್ಮದ್ ಸಾಹಿಬ್ (ರಸೂಲುಲ್ಲಾಹ್ (ಸ)ರಿಗೆ ಸ್ತ್ರೀಯರ ಬಗ್ಗೆ ಹೆಚ್ಚು ಗಮನವಿರುತಿತ್ತು. ಆದರೆ ಮದೀನದಲ್ಲಿ ಅವರ ಈ ಅಭಿಲಾಷೆ ಪೂರ್ಣಗೊಂಡಿತ್ತು. ಮತ್ತು ಹಲವು ಯುವ ಪತ್ನಿಗಳು ದೊರೆತ ಕಾರಣ ಲಕ್ಷ್ಯ ಕಡಿಮೆಯಾಯಿತು.

ಸರ್ ವಿಲಿಯಂ ಈ ಅಪವಾದ ಮಾಡಿದವನಿಗೆ ನನ್ನ ಅನಿಸಿಕೆಯಲ್ಲಿ ಎಂದಾದರೂ ಅವನು ಖುರ್‌ಆನ್ ಎಂಬ ಕನ್ನಡಿಯಲ್ಲಿ ಮುಖವಾದರೂ ನೋಡಿದ್ದಾನೆಯೇ, ರೆವರೆಂಡ್ ವ್ಹೋರಿ ಅಂತೂ ಪಾದರಿಗಳ ವಂಶೀಯ ದ್ವೇಷವನ್ನು ಸ್ಥಿರಗೊಳಿಸಿದ್ದಾರೆ. ನನಗೆ ತುಂಬ ಅಚ್ಚರಿಯಾಗುತ್ತದೆ, ವಿದ್ಯಾವಂತರೆನಿಸಿಕೊಂಡ ಇವರು ಸಭ್ಯತೆಯ ದಾವೆ ಮಾಡುವವರು. ಕೋಟ್ಯಾಂತರ ಜನರ ಪ್ರಿಯನಾಯಕನ ಕುರಿತು ಕೇವಲ ತಮ್ಮ ಕಾಲ್ಪನಿಕ ವಿಚಾರ ಹೊಂದಿ ಆಕ್ರಮಣಗೈಯುತ್ತಾರೆ. ಸ್ವಯಂ ಅವರ ನೀತಿ, ಆಚಾರ ಎಷ್ಟು ಕೀಳುಮಟ್ಟದ್ದಾಗಿತ್ತೆಂದರೆ ಅವರಿಂದ ಮಾನವೀಯತೆ ನಾಚುವಂತಾಗುತ್ತದೆ. ಅವರಿಗೆ ಈ ಧೈರ್ಯ ಬರಲು ಕಾರಣವೇನೆಂದರೆ, ಅವರಿಗೆ ಆ ಸಮಯ ಆಡಳಿತ ಚುಕ್ಕಾಣಿ ಸಿಕ್ಕಿತ್ತು. ಮುಸ್ಲಿಮರು ಆಡಳೀತದಲ್ಲಿದ್ದಾಗ ಅವರ ಸ್ಥಿತಿ ಈ ಕಾಲದಲ್ಲಿನ ಮುಸ್ಲಿಮರ ಸ್ಥಿತಿಗಿಂತ ದುಸ್ತರವಾಗಿತ್ತು. ಅಂದ ಹಾಗೆ ಆಗಲೂ ಸಹ ಮುಸ್ಲಿಮರು ಮಸೀಹರ ಬಗ್ಗೆ ಕಠಿಣ ಶತ್ರುತ್ವದ ಪ್ರಯೋಗ ಮಾಡಲಿಲ್ಲ. ಮುಸಲ್ಮಾನರು ಸಾವಿರ ವರ್ಷಗಳವರೆಗೆ ಮಸೀಹ ದೇಶಗಳ ಮೇಲೆ ಆಡಳಿತ ನಡೆಸಿದರು. ಅವರು ತೋರಿದ ಗೌರವ ಈ ಮಸೀಹರು ತನ್ನ ಇನ್ನೂರು ಮುನ್ನೂರು ವರ್ಷಗಳ ಆಡಳಿತದಲ್ಲಿ ತೋರುವವರಾಗಿದ್ದರೆ ಎಷ್ಟು ಒಳ್ಳೆಯದಿತ್ತು. ಆದರೆ ಅವರು ಗರ್ವ ಸಾಧಿಸಿದರು. ಪ್ರವಾದಿಗಳ ನೇತಾರರಾದ ನಮ್ಮ ನಬಿ(ಸ) ರವರ ಮೇಲೆ ಕ್ರೂರ ಪ್ರಾಣಿಗಳ ಹಾಗೆ ಆಕ್ರಮಣಗೈದರು. ಕನಿಷ್ಠ ಪಕ್ಷ ಮುಸಲ್ಮಾನರ ಉಪಕಾರವನ್ನಾದರೂ ನೆನಪಿಸಿಕೊಳ್ಳಬಹುದಿತ್ತು. ಮುಸಲ್ಮಾನರು ಮಸೀಹರ ಮೇಲೆ ಎಂದೂ ಕಠಿಣವಾಗಿ ವರ್ತಿಸಲಿಲ್ಲ.

ಅವರು ಬಯಸಿದ್ದರೆ ಕ್ರೈಸ್ತರು ನಮ್ಮ ನಬಿ(ಸ) ರವರ ಮೇಲೆ ಅನಗತ್ಯವಾಗಿ ತೋರಿದ ಅಗೌರವಕ್ಕಿಂತ ಹೆಚ್ಚು ಅಗೌರವ ತೋರಬಹುದಾಗಿತ್ತು. **(ತಫ್ಸೀರ್ ಕಬೀರ್, ಸಂಪುಟ–1, ಪುಟ–252,253, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಪ್ರಬಲ ಸಾಕ್ಷ್ಯಗಳೊಂದಿಗೆ ಸಾಬೀತುಗೊಳಿಸಿ ಕ್ರೈಸ್ತರಿಗೆ ನಿರುತ್ತರನ್ನಾಗಿ ಮಾಡಿ. ಮತ್ತು ಅವರನ್ನು ಮೌನವಹಿಸುವಂತೆ ಮಾಡಿರಿ. ನೀವು ಮಸೀಹರನ್ನು ಮೃತರಲ್ಲಿ ಸೇರಿಸಿದ್ದು ಸಾಬೀತುಗೊಳಿಸಿದರೆ ಮತ್ತು ಅದನ್ನು ಅವರಿಗೆ ಮನದಟ್ಟು ಮಾಡಿಕೊಟ್ಟರೆ ಆ ಮೇಲೆ ನೋಡಿರಿ ಮತ್ತು ತಿಳಿದುಕೊಳ್ಳಿರಿ. ಇಂದು ಕ್ರೈಸ್ತ ಮತ ಇಹಲೋಕದಿಂದ ನಿರ್ಗಮಿಸಿದೆ ಎಂದು. ನಿಶ್ಚಯವಾಗಿಯೂ ತಿಳಿದುಕೊಳ್ಳಿರಿ. ಎಲ್ಲಿಯವರೆಗೆ ಅವರ ದೇವನ ಮೇಲೆ ಮರಣ ಬರುವುದಿಲ್ಲವೋ ಅವರ ಧರ್ಮದ ಮೇಲೆ ಮರಣ ಬರಲು ಸಾಧ್ಯವಿಲ್ಲ. ಬೇರೆ ಎಲ್ಲ ತರ್ಕಗಳು ವ್ಯರ್ಥವಾಗಿವೆ. ಅವರ ಧರ್ಮದ ಒಂದೇ ಸ್ತಂಬವಿದೆ. ಅದೇನೆಂದರೆ ಮಸೀಹ್ ಇಬ್ನು ಮರಿಯಮ್ ಇಂದಿಗೂ ಜೀವಂತವಾಗಿದ್ದಾರೆ ಎಂಬುದು. ಈ ಸ್ತಂಬವನ್ನು ನುಜ್ಜು ಗುಜ್ಜನ್ನಾಗಿ ಮಾಡಿರಿ. ಮತ್ತೆ ದೃಷ್ಟಿ ಹಾಯಿಸಿ ನೋಡಿರಿ. ಈ ಕ್ರೈಸ್ತ ಮತ ಎಲ್ಲಿದೆ ಎಂದು." (ಇಝೂಲ ಅವ್‌ಹಾಮ್, ರೂಹಾನಿ ಖಝಾಈನ್, ಸಂಪುಟ–3, ಪುಟ–402).

ಇಸ್ಲಾಮ್‌ನ ಜೀವನವೂ ಈಸ(ಅ)ರವರ ಮೃತ್ಯುವಿನಲ್ಲಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ವಿಷಯವೂ ನಿಜವಾಗಿದೆ ಅಂದರೆ ಹಝ್ರತ್ ಈಸ ಅಲೈಹಿಸ್ಸಲಾಮ್‌ರವರು ನಿಧನವಾಗಿದ್ದಾರೆ ಮತ್ತು ನಾನು ಅಲ್ಲಾಹನ ಆಣೆ ಹಾಕಿ ಹೇಳುವುದೇನಂದರೆ ಯಾವ ವಾಗ್ದಾತ್ತನು ಆಗಮಿಸಬೇಕಾಗಿತ್ತೋ ಅತನು ನಾನಾಗಿದ್ದೇನೆ. ಅದೇ ರೀತಿ ಇಸ್ಲಾಮ್ ಧರ್ಮದ ಜೀವನವೂ ಈಸ ನಬಿಯ ಮರಣದಲ್ಲಿದೆ ಎಂಬ ವಿಷಯವೂ ನಿಜವಾಗಿದೆ. (ಲೆಕ್ಚರ್ ಲಾಹೋರ್, ರೂಹಾನಿ ಖಝಾಈನ್ ಸಂಪುಟ–20, ಪುಟ–290)

ಈಗ ನಾವು **'ತವಫ್ಫಿ'**ಯ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅರಬಿ ಭಾಷೆಯ ವ್ಯಾಕರಣದಲ್ಲಿ ಈ ಖಾಈದೆ ಇದೆ ಅಂದರೆ ತವಫ್ಫಿ ಪದದಲ್ಲಿ ಅಲ್ಲಾಹನು ಕರ್ತೃ ಮತ್ತು ಮನುಷ್ಯನು ದ್ವಿತೀಯ ವಿಭಕ್ತಿ ಆಗಿದ್ದರೆ ಅಲ್ಲಿ ಯಾವಾಗಲೂ ತವಫ್ಫಿ ಎಂದರೆ ಮರಣ ಹಾಗೂ ಆತ್ಮಹರಣ ಎಂದಾಗಿರುತ್ತದೆ. (ತೊಹ್‌ಫ ಗೊಲಡ್ವಿಯು, ರೂಹಾನಿ ಖಝಾಈನ್, ಸಂಪುಟ–17, ಪುಟ–162)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ಕೇವಲ ಒಂದು ಸಲ ಅಲ್ಲ ಎರಡು ಸಲ ಅಲ್ಲ ಬದಲಿಗೆ ಇಪ್ಪತ್ತೈದು

ಸಲ ಹೇಳಿದೆ ತವಫ್ಫಿ ಎಂಬ ಪದದಿಂದ ಕೇವಲ ಆತ್ಮಹರಣವೇ ಆಗಿದೆ ದೇಹದಿಂದ ಯಾವ ಸಂಬಂಧವೂ ಇಲ್ಲ ಎಂದು.(ಇಝಾಲ ಅವ್‌ಹಾವ್, ರೂಹಾನಿ ಖಝಾಈನ್, ಸಂಪುಟ–3, ಪುಟ–392)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಲ್ಲಿ ಈ ಮಾತಿನ ಮೇಳೆ ಹಟ ಹಿಡಿದು ಕುಳಿತುಕೊಳ್ಳುವುದು ಉಪಯೋಗವಿಲ್ಲ ಅಂದರೆ ತವಫ್ಫಿ ಎಂದರೆ ಮರಣ ಎಂಬುದಲ್ಲ ಎಂದು ಏಕೆಂದರೆ ಈ ವಿಷಯ ಕುರಿತಿ ಎಲ್ಲಾ ಅರಬ್ ನಿಘಂಟ ವಿದ್ವಾಂಸರ ಒಮ್ಮತವು ಹೀಗಿದೆ ಅಂದರೆ ಯಾವಾಗ ಅಲಮ್ ಮೇಲೆ ಅಂದರೆ ಯಾವೋಬ್ಬನ ವ್ಯಕ್ತಿಯ ಹೆಸರು ಪಡೆದು **ತವಫ್ಫಿ** ಎಂಬ ಪದವು ಉಪಯೋಗಿಸಿದರೆ ಉದಾಹರಣೆಗೆ **ತವಫ್ಫಲ್ಲಾಹು ಝೈದನ್** ಎಂದರೆ ಅದರ ಅರ್ಥ ಅಲ್ಲಾಹನು ಝೈದನ್ನು ಮರಣ ನೀಡಿದನು. ಆದ ಕಾರಣ ನಿಘಂಟಿನ ವಿದ್ವಾಂಸರು ಈ ಸಂದರ್ಭದಲ್ಲಿ ಬೇರೆಯ ಅನುವಾದವು ಬರಿಯುವುದೇ ಇಲ್ಲ ಕೇವಲ ಮೃತ್ಯು ನೀಡುವುದು ಎಂದು ಮಾಡುತ್ತಾರೆ. ಲಿಸಾನುಲ್ ಅರಬ್‌ನಲ್ಲಿ ನಮ್ಮ ವ್ಯಾಖ್ಯನದ ಪ್ರಕಾರ ಹೀಗೆ ಬರೆಯಲಾಗಿದೆ **ತುವುಫ್ಫಿ ಫಲಾನುನ್ ವತವಫ್ಫಾಹುಲ್ಲಾಹು ಇಝಾ ಖಬಝು ನಫ್‌ಸಹೂ ವ ಫಿಸ್ಸಿಹಾಹಿ ಇಝಾ ಖಬಝು ರೂಹಹೂ** ಅಂದರೆ **ತವಫ್ಫಿ ಫುಲಾನುನ್** ಅಥವಾ ಹೀಗೆ ಹೇಳಲಾದರೆ, ತವಫ್ಫಿಕರುಲ್ಲಾಹು ಅದರ ಅರ್ಥ ಕೇವಲ ಇಂತಹ ವ್ಯಕ್ತಿಯೂ ಮೃತಪಟ್ಟಿರುವನು ಎಂದೇ ಆಗುತ್ತದೆ. ಮತ್ತು ಅಲ್ಲಾಹನು ಅವನಿಗೆ ಮೃತಪಡಿಸಿದನು ಎಂದೇ ಆಗುತ್ತದೆ. ನಾನು ಸಾಧ್ಯವಾದಷ್ಟು ಮಟ್ಟಿಗೆ ಸಿಹಾಹ ಮತ್ತು ಇತರ ನಬಿ(ಸ) ರವರ ಹದೀಸುಗಳ ಮೇಲೆ ದೃಷ್ಟಿ ಹಾಯಿಸಿದ್ದೇನೆ. ಅದರಿಂದ ತಿಳಿದು ಬಂದಿದೆ ಹಝ್ರತ್ ರಸೂಲುಲ್ಲಾಹ್(ಸ) ರವರ ಮಾತುಗಳಲ್ಲಿ ಮತ್ತು ಸಹಾಬರ ಮಾತುಗಳಲ್ಲಿ ಮತ್ತು ಅವರ ಅನುಯಾಯಿಗಳ ಮಾತುಗಳಲ್ಲಿ ಮತ್ತು ಅವರ ಅನುಯಾಯಿಗಳ ಅನುಯಾಯಿಗಳ ಮಾತುಗಳಲ್ಲಿ ಯಾವುದೋ ಒಂದೇ ಒಂದು ಉದಾಹರಣೆ ದೊರಕುವುದಿಲ್ಲ ಅದರಿಂದ ಸಾಬೀತಾಗಬೇಕು. **'ತವಫ್ಫಿ'** ಪದ ಬಂದಲ್ಲಿ ಅಂದರೆ ಯಾವನೇ ವ್ಯಕ್ತಿಯನ್ನು ಹೆಸರಿಸಿ **"ತವಫ್ಫಿ"** ಪದ ಬಳಕೆ ಆಗಿದ್ದಲ್ಲಿ ಮತ್ತು ಅಲ್ಲಾಹನು ಕರ್ತೃ ಹಾಗೂ ವ್ಯಕ್ತಿಯೂ ಕರ್ಮಪದದಲ್ಲಿದ್ದರೆ ಇಂತಹ ಅವಸ್ಥೆಯಲ್ಲಿ ಆ ನುಡಿಯ ಅರ್ಥ 'ಮೃತಪಟ್ಟ ಹೊರತು ಇನ್ನೊಂದು ಆಗಿದ್ದು ಇಲ್ಲ. ಬದಲು ಪ್ರತಿಯೊಂದು ಸಂದರ್ಭದಲ್ಲೂ ಒಬ್ಬನ ಹೆಸರು ಹೇಳಿ ಅವನ ಕುರಿತು **"ತವಫ್ಫಿ"** ಪದ ಬಳಕೆಯಾದರೆ, ಮತ್ತು ಆ ಸ್ಥಳದಲ್ಲಿ ಕರ್ತೃ ಅಲ್ಲಾಹನು, ಕರ್ಮಪದ ಆ ವ್ಯಕ್ತಿ ಆಗಿದ್ದಲ್ಲಿ ಅದರ ಅರ್ಥ ಮೃತಪಟ್ಟಿರುವವನು ಎಂದೇ ಆಗುತ್ತದೆ. ಹಾಗಾಗಿ ನನಗೆ ಅಂತಹ ಉದಾಹರಣೆಗಳು 300 ಕ್ಕಿಂತ ಹೆಚ್ಚು ಹದೀಸುಗಳು ದೊರೆತಿವೆ. ಅದರಿಂದ ಸಾಬೀತಾಗುತ್ತದೆ. ಎಲ್ಲೆಲ್ಲಿ **'ತಫಫ್ಫಿ'** ಪದ ಅಲ್ಲಾಹನು ಕರ್ತೃ ಮತ್ತು ವ್ಯಕ್ತಿಯೂ ಕರ್ಮಪದಲ್ಲಿದ್ದರೆ ಅಲ್ಲಿ "ಮೃತಪಟ್ಟಿರುವನು" ಎಂಬ ಅರ್ಥವೇ ಬರುತ್ತದಲ್ಲದೆ ಬೇರೇನೂ ಇಲ್ಲ. ಇಷ್ಟೆಲ್ಲ ಶೋಧನೆಯ ನಂತರವೂ ಒಂದೇ ಒಂದು ಹದೀಸು ನನಗೆ ದೊರೆತಿಲ್ಲ. ಅದರಲ್ಲಿ **'ತವಫ್ಫಿ"** ಪದದಲ್ಲಿ ಅಲ್ಲಾಹನು ಕರ್ತೃ ಮತ್ತು ಕರ್ಮ ಪದ ವ್ಯಕ್ತಿ ಅಗಿದ್ದಲ್ಲಿ ಆ ಸ್ಥಳದಲ್ಲಿ "ಮೃತಪಟ್ಟಿರುವನು" ಎಂಬ ಅರ್ಥವಲ್ಲದೆ ಬೇರೇನೂ ಇಲ್ಲ.

ಅದೇ ರೀತಿ ಪವಿತ್ರ ಖುರ್‌ಆನ್‌ನಲ್ಲಿ ಪ್ರಾರಂಭದಿಂದ ಕೊನೆಯವರೆಗೆ ದೃಷ್ಟಿ ಹಾಯಿಸಿ ನೋಡಿದರೂ ಅದೇ ಸಾಬೀತಾಗುತ್ತದೆ. ಅಂದ ಹಾಗೆ ವಚನ **"ತವಫ್ಫಿ ಮುಸ್ಲಿಮ ವ ಅಲ್‌ಹಿಖ್‌ನೀ ಬಿಸ್ಸಾಲಿಹೀನ್"** ಮತ್ತು ವಚನ **"ವಇಮ್ಮಾ ನುರಿಯನ್ನಕ ಬಅಝುಲ್ಲಝಿ ನಯಿದುಹುಮ್ ಅವ್ ನತವಫ್ಫಯನ್ನಕ"** ಮುಂತಾದ ವಚನಗಳಿಂದ ಸಾಬೀತಾಗಿದೆ. (ಬರಾಹೀನ್ ಅಹ್ಮದಿಯಾ, ಭಾಗ–5, ರೂಹಾನಿ ಖಝಾಈನ್ ಸಂಪುಟ–21, ಪುಟ–378)

ಇದೀಗ ಕೆಳಗೆ ನಾವು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಪಂಥಹ್ವಾನ ಪ್ರಸ್ತುತಪಡಿಸುತ್ತೇವೆ.

1) ಯಾವನೇ ಒಬ್ಬ ವ್ಯಕ್ತಿ ಪವಿತ್ರ ಖುರ್‌ಆನ್‌ನಿಂದ ಅಥವಾ ಯಾವುದೇ ಹದೀಸಿನಿಂದ ರಸೂಲುಲ್ಲಾಹ್(ಸ) ಅವರಿಂದ ವರಧಿಯಾಗಿದ್ದ ಅಥವಾ ಕವನ ಪಂಕ್ತಿಗಳಿಂದ ಅಥವಾ ಖಸೀದ, ಪದ್ಯ, ಗದ್ಯ ಹಳೆಯ ಆಧುನಿಕ ಅರಬರಿಂದ ಈ ಪೈಕಿ ಪುರಾವೆ ಒದಗಿಸಿಕೊಟ್ಟರೆ "ತವಫ್ಫಿ ಪದ ಅದರ ಕರ್ತೃ ಅಲ್ಲಾಹನಾಗಿದ್ದ ಸ್ಥಿತಿಯಲ್ಲಿ ಅವನು ಯಾವುದೇ ಜೀವಿಯ ಬಳಕೆ ಮಾಡಿದ್ದಲ್ಲಿ ಅದರ ಅರ್ಥ ಆತ್ಮಹರಣ ಮತ್ತು ಮೃತಪಡಿಸಿದನ್ನು ಬಿಟ್ಟು ಇನ್ನೊಂದಾಗಿದ್ದರೆ ತೋರಿಸಬೇಕು. ನಾನು ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುತ್ತೇನೆ. ಧರ್ಮಸಂಹಿತೆ (ಶರೀಅತ್) ಪ್ರಕಾರ ವಚನಬದ್ಧನಾಗಿ ಹೇಳುತ್ತೇನೆ. ಇಂತಹ ವ್ಯಕ್ತಿಗೆ ನನ್ನ ಆಸ್ತಿಯ ಭಾಗವೊಂದು ಮಾರಾಟ ಮಾಡಿ ಸುಮಾರು ಒಂದು ಸಾವಿರ ರೂಪಾಯಿ ನಗದು ಕೊಡುವೆನು. ಮತ್ತು ಆಮೇಲೆ ಅವನಲ್ಲಿರುವ ಹದೀಸು ಖುರ್‌ಆನ್‌ನ ಪಾಂಡಿತ್ಯ ಸಮರ್ಥಿಸಿಕೊಳ್ಳುವೆನು. (ಇಝಾಲಾ ಅವ್‌ಹಾಮ್, ರೂಹಾನಿ ಖಝಾಯಿನ್ ಸಂಪುಟ 3 ಪುಟ 603)

2) ತನ್ನ ಗ್ರಂಥ ಹಮಾಮುತುಲ್ ಬುಶ್ರಾದಲ್ಲಿ ಇದೇ ಪಂಥಹ್ವಾನ ಪುನರುಚ್ಚರಿಸುತ್ತ ಹೇಳುತ್ತಾರೆ: ಅಲ್ಲಾಹನ ಮತ್ತು ಅವನ ಗೌರವದ ಮೇಲೆ ಹಾಗೆ ಹೇಳುತ್ತೇನೆ. ನಾನು ಅಲ್ಲಾಹನ ಗ್ರಂಥದ ಪ್ರತಿಯೊಂದು ವಚನದ ಅಧ್ಯಯನ ಮಾಡಿರುವೆನು ಮತ್ತು ಅದರ ಮೇಲೆ ಚಿಂತನೆ ಮಾಡಿರುವೆನು. ಮತ್ತು ಹದೀಸುಗಳ ಮೇಲು ಗಾಢವಾದ ದೃಷ್ಟಿ ಹಾಯಿಸಿರುವೆನು. ಅದರ ಮೇಲೆಯೂ ಚಿಂತನೆ ಮಾಡಿರುವೆನು. ಆದರೆ ನಾನು ಖುರ್‌ಆನ್‌ನಲ್ಲಾಗಲೀ ಮತ್ತು ಹದೀಸುಗಳಲ್ಲಾಗಲೀ" "ತವಫ್ಫಿ" ಪದ ಈ ನೆಲೆಯಲ್ಲಿ (ಅದರ ಕರ್ತೃ ಅಲ್ಲಾಹನಾಗಿರಬೇಕು. ಮತ್ತು ಅದರ ಕರ್ಮಪದ ಯಾವನೇ ಮನುಷ್ಯನಾಗಿರಬೇಕು. ಆಗ ಅದರ ಅರ್ಥ "ಮೃತಪಡಿಸಿದೆನು. ಮತ್ತು 'ಆತ್ಮಹರಣ ಮಾಡಿದೆನು.' ಬಿಟ್ಟು ಬೇರೆನಾಗಿರುವುದು ಇಲ್ಲ. ಯಾವ ವ್ಯಕ್ತಿಯಾದರೂ ನನ್ನ ಈ ಶೋಧನೆಯ ವಿರುದ್ಧ ಸಾಬೀತು ಮಾಡಿ ತೋರಿಸಿದರೆ ಅವನಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ನನ್ನ ವತಿಯಿಂದ ನೀಡುವೆನು. (ಹಮಾಮುತುಲ್ ಬುಶ್ರಾ, ಉರ್ದು ಅನುವಾದ, ಪುಟ 231)

3) ತಿರ್‌ಯಾಖುಲ್ ಖುಲೂಬ್ ಗ್ರಂಥದರೊಂದಿಗೆ 5 ನೂರು ರೂಪಾಯಿಗಳ ಬಹುಮಾನದ ಪಂಥ್ವಾನನೊಂದಿಗೆ ಅವರು ಹೇಳುತ್ತಾರೆ:

ಯಾವ ವ್ಯಕ್ತಿ ಎಲ್ಲ ಹದೀಸುಗಳನ್ನು ಮತ್ತು ಪವಿತ್ರ ಖುರ್‌ಆನ್‌ನ್ನು ಮತ್ತು ಎಲ್ಲ ನಿಘಂಟುಗಳ ಹಾಗೂ ಸಾಹಿತ್ಯದ ಗ್ರಂಥಗಳ ಅಧ್ಯಯನ ಮಾಡಿರುವನೋ ಅವನ ಮೇಲೆ ಈ ವಿಷಯ ರಹಸ್ಯವಾಗಿರಲಾರದು. ಇದು ಅರಬರ ಪುರಾತನ ನುಡಿಗಟ್ಟಾಗಿದೆ. ಯಾವಾಗ ಅಲ್ಲಾಹನು ಕರ್ತೃ ಆಗಿರುವನು ಮತ್ತು ಮನುಷ್ಯನು ಕರ್ಮ ಪದಲ್ಲಿರುವನೋ ಅಂತಹ ಸಂದರ್ಭಗಳಲ್ಲಿ "ತವಫ್ಫಿ" ಅರ್ಥ ಮೃತ ಪಡಿಸುವುದನ್ನು ಬಿಟ್ಟು ಇನ್ನೊಂದಾಗಲು ಸಾಧ್ಯವೇ ಇಲ್ಲ. ಯಾವ ವ್ಯಕ್ತಿಯಾದರೂ ಅದನ್ನು ನಿರಾಕರಿಸುವವನಾದರೆ ಅವನ ಕರ್ತವ್ಯವಾಗಿದೆ. ನಮಗೆ ಹದೀಸ್ ಅಥವಾ ಖುರ್‌ಆನ್ ಅಥವಾ ಕಲಾ ಸಾಹಿತ್ಯದ ಯಾವುದೇ ಗ್ರಂಥದಿಂದ ತೋರಿಸಬೇಕು. ಇಂತಹ ಸಂದರ್ಭಗಳಲ್ಲಿ "ತವಫ್ಫಿ" ಬೇರೆ ಅರ್ಥಗಳ ಸಾಧ್ಯತೆಯೂ ಇದೆ ಎಂದು ಇಂತಹದೊಂದು ಯಾವುದೇ ಪುರಾವೆ ಹಝ್ರತ್ ರಸೂಲುಲ್ಲಾಹ್(ಸ) ರವರ ಪವಿತ್ರ ನುಡಿಗಳಿಂದ ಪ್ರಸ್ತುತಪಡಿಸಿದರೆ ನಾವು ಅವರಿಗೆ ತಡಮಾಡದೆ 500 (ಐದು ನೂರು) ರೂಪಾಯಿಗಳ ಬಹುಮಾನ ನೀಡಲು ಸಿದ್ದರಿದ್ದೇವೆ. ನೋಡಿರಿ ಸತ್ಯ ಜಾಹೀರಾತುಪಡಿಸಲು ನಾವು ಎಷ್ಟೊಂದು ಸಂಪತ್ತು ಖರ್ಚು ಮಾಡಬಯಸುತ್ತೇವೆ, ಮತ್ತೆ ಯಾವ ಕಾರಣದಿಂದ ನಮ್ಮ ಪ್ರಶ್ನೆಗಳಿಗೆ ಯಾವುದೇ ಉತ್ತರ ನೀಡುತ್ತಿಲ್ಲ? (ತಿರ್‌ಯಾಖುಲ್ ಖುಲೂಬ್, ಸಂಪುಟ–15, ಪುಟ–458, ಟಿಪ್ಪಣಿ)

4) ಗ್ರಂಥ ಬರಾಹೀನ್ ಅಹ್ಮದಿಯಾ ಭಾಗ–5 ರಲ್ಲಿ ಎಡು ನೂರು ರೂಪಾಯಿಗಳ ಬಹುಮಾನದ ಪಂಥಹ್ವಾನದ ಜೊತೆ ನುಡಿದರು:

ನಾನು ಈ ಸತ್ಯಶೋಧಿತ ವಿಷಯ ಕುರಿತು ಜಾಹೀರಾತು ನೀಡಿ ಒಂದು ಕಾಲವೇ ಕಳೆದಿದೆ. ಈ ಜಾಹೀರಾತಿಗೆ ಇಂದಿನವರೆಗೆ ಯಾರು ಸಹ ಉತ್ತರ ನಿಡಲಿಲ್ಲ. ಇದೀಗ ಮತ್ತೊಮ್ಮೆ ನ್ಯಾಯಪೂರ್ತಿಕರಣಕ್ಕಾಗಿ ಎರಡು ನೂರು ರೂಪಾಯಿಗಳ ನಗದು ಬಹುಮಾನಗಳ ಜಾಹೀರಾತು ನೀಡುತ್ತಿದ್ದೇನೆ. ಯಾರಾದರೂ ನಮ್ಮ ವಿರೋಧಿಗಳಲ್ಲಿ ನಮ್ಮ ಈ ವಿವರವನ್ನು ನಿಶ್ಚಿತರೂಪದಲ್ಲಿ ದೃಢ ರೀತಿಯಲ್ಲಿ ಗಣಿಸಿದವರಾಗಲ್ಲ ಎಂದಾದರೆ ಅವನು ನಬಿ(ಸ) ರವರ ಹದೀಸುಗಳಿಂದ ಅಥವಾ ಪುರಾತನ ಕವಿಗಳ ಕಥನದಿಂದ ಅದು ಅಧಿಕೃತವಾಗಿದ್ದರೆ ಮತ್ತು ಅರಬ್ ಮಾತೃಭಾಷಿಕರಾದರೆ ಮತ್ತು ತಮ್ಮ ಕಲಾಕ್ಷೇತ್ರದಲ್ಲಿ ಪರಿಣತರಾದರೆ ಯಾವುದೇ ಒಂದು ವಾಕ್ಯ ಪ್ರಸ್ತುತಪಡಿಸಬೇಕು. ಅದರಲ್ಲಿ "ತವಫ್ಫಿ" ಪದವಿದ್ದು ಅಲ್ಲಾಹನು ಕರ್ತೃ ಆಗಿರಬೇಕು ಮತ್ತು ಕರ್ಮಪದ ಯಾವುದೇ ಸಜೀವಿ ಉದಾಹರಣೆಗೆ ಝೈದ್, ಬಕರ್, ಖಾಲಿದ್ ಇತ್ಯಾದಿ ಮತ್ತು ಆ ವಾಕ್ಯದಿಂದ ಅದರ ಅರ್ಥ ಬೇರೆಯೊಂದಾಗಿರಬೇಕು ಮೃತಪಡಿಸುವೆನು ಎಂದಾಗಿರಬಾರದು. ಇಂತಹ ಸ್ಥಿತಿಯಲ್ಲಿ ನಾನು ಆ ವ್ಯಕ್ತಿಗೆ ಎರಡು ನೂರು ರೂಪಾಯಿಗಳ ನಗದು ಬಹುಮಾನ ಕೊಡುವೆನು. (ಬರಾಹೀನ್ ಅಹ್ಮದಿಯಾ ಭಾಗ–5, ಸಂಪುಟ 21, ಪುಟ 383)

ಹಿಂದೂ ಆಗಬೇಡಿ! ಸಾಕ್ಷ್ಯಗಳು ಮಸೀಹ್ ಮೌಊದ್‌ರದ್ದಲ್ಲ ಅಲ್ಲಾಹನದ್ದಾಗಿದೆ !! ಒಂದು ರೋಚಕ ಘಟನೆ.

ಕೊನೆಯಲ್ಲಿ ಮುಸ್ಲಿಮರ ದಾರುಣ್ಯಕರ ಸ್ಥಿತಿ ಕುರಿತು ಒಂದು ರೋಚಕ ಘಟನೆ ವ್ಯಕ್ತಪಡಿಸಿ ನಾವು ತಮ್ಮ ಈ ಪ್ರಬಂಧವನ್ನು ಮುಕ್ತಾಯಗೊಳಿಸುತ್ತೇವೆ. ಹಜ್‌ರತ್ ಮಸೀಹ್ ಮೌಊದ್(ಅ) ಅರುಹಿದರು.

ಅದರ ಉದಾಹರಣೆ ಆ ಹಿಂದೂವಿಗೆ ಹೋಲುತ್ತದೆ. ಒಂದು ಸಂದರ್ಭ ಕೇವಲ ಮುಸ್ಲಿಮರು ವಾಸಿಸುತ್ತಿದ್ದ ಜಾಗದಲ್ಲಿ ಒಬ್ಬ ಹಿಂದು ತುಂಬ ಹಸಿದಿದ್ದ. ಎಷ್ಟರಮಟ್ಟಿಗೆ ಅಂದರೆ ಮರಣಕ್ಕೆ ಸಮೀಪನಾಗಿದ್ದ, ಅಲ್ಲಿಯ ಮುಸ್ಲಿಮರು ಬಹಳ ರುಚಿಕರ ಊಟವನ್ನು ಹೊಂದಿದ್ದರು. ಅಂತಹ ಊಟ ಅವರ ಅಪ್ಪ ತಾತಂದಿರು ಸಹ ಎಂದೂ ನೋಡಿರಲಿಕ್ಕಿಲ್ಲ. ಆದರೆ ಅವರಿಂದ ಅವನು ಏನೂ ತಿನ್ನಲಿಲ್ಲ. ಹೀಗೆ ಏನೂ ತಿನ್ನದೇ ಅವನು ಹಸಿವಿನಿಂದ ತೀರಿ ಹೋದ. ಅವನು ಊಟ ಮಾಡದಿರಲು ಕಾರಣವೇನೆಂದರೆ ಅದು ಮುಸ್ಲಿಮರ ಕೈಸೇರಿದ್ದಾಗಿತ್ತು. ಈ ಜನರ ಗತಿಯೂ ಹಾಗೆಯೇ ಇದೆ. ಈ ಸತ್ಯಸಾಕ್ಷ್ಯಗಳು ಅವರ ಭಾವನೆಯಲ್ಲಿ ನನ್ನ ಕೈಸೇರಿದ್ದಾಗಿವೆ ಅದಕ್ಕೆ ಅದರಿಂದ ಪ್ರಯೋಜನ ಪಡಬಯಸುವುದಿಲ್ಲ. ಆದರೆ ನಾನು ಮತ್ತೊಮ್ಮೆ ಮಗದೊಮ್ಮೆ ಹೇಳುವೆನು. ಹಿಂದೂ ಆಗಬೇಡಿರಿ. ಈ ಸಾಕ್ಷ್ಯಗಳು ನನ್ನದಲ್ಲ. ನನ್ನ ಕೈಗಳಿಗೆ ಸೇರಿದ್ದೂ ಅಲ್ಲ. ಬದಲು ಇವೆಲ್ಲ ಅಲ್ಲಾಹನ ಕಡೆಯಿಂದಾಗಿವೆ. ಅದನ್ನು ಇಷ್ಟಪೂರ್ವಕವಾಗಿ ಬಳಸಿ ಕೊಂಡು ನೋಡಿರಿ ಎಷ್ಟೊಂದು ಮುಖ್ಯ ಸಾಕ್ಷ್ಯಗಳು ಖುರ್‌ಆನ್‌ನಲ್ಲಿ ಹಝ್ರತ್ ಮಸೀಹರ ಮೃತ್ಯುವಿನ ಕುರಿತು ಇವೆ. ಹದೀಸಿನ ಪುರಾವೆಗಳು ಸಾಕ್ಷಿ ನೀಡುತ್ತಿವೆ. ಸಹಾಬರ ಸಾಮೂಹಿಕ ನಿರ್ಣಯ ಸಾಕ್ಷಿಯಿದೆ. ನಾಲ್ಕು ಮುಖ್ಯ ಇಮಾಮರ ಸಾಕ್ಷ್ಯ ಅದಕ್ಕಿದೆ. ಅಲ್ಲಾಹನ ಪುರಾತನ ಸಂಹಿತೆ "ಲನ್ ತಜಿದ ಲಿಸುನ್ನತಿಲ್ಲಾಹಿ ತಬ್‌ದೀಲ," ಸಾಕ್ಷ್ಯವಹಿಸಿದೆ. ಆದರೂ ಸಹ ಮನ್ನಿಸಲಿಲ್ಲವಾದರೆ ಎಷ್ಟೊಂದು ದುರದೃಷ್ಟಕರ ಸಂಗತಿಯಾಗಿದೆ. (ತೊಹ್‌ಫ ಗೋಲಡ್‌ವಿಯ, ಪುಟ–94)

ಮುಂದೆ ಇನ್‌ಶಾ ಅಲ್ಲಾಹ್ ನಾವು ಹಜ್‌ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 10 December 2020, Issue No. 48

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 47ರ ವರದಿಯ ಉಳಿದ ಭಾಗ)**

### ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿನಿಯರ ಹುಝೂರರೊಡನೆ ಭೇಟಿ

ಕಾರ್ಯಕ್ರಮದನ್ವಯ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿನಿಯರೊಡನೆ ಹುಝೂರ್ ಕ್ಲಾಸ್ ಪ್ರಾರಂಭಿಸಿದರು.

ಕಾರ್ಯಕ್ರಮದ ಆರಂಭ ಪವಿತ್ರ ಖುರ್‌ಆನ್‌ನ ಪಠಣದೊಂದಿಗಾಯಿತು. ಅದನ್ನು ಅಝೀಝುಂ ಅಮತುಲ್ ಮುಸವ್ವಿರ್ ಸಾಹಿಬಾ ನೆರವೇರಿಸಿದರು. ಅದರ ಉರ್ದು ಅನುವಾದ ಬಾಸಿಮ ಅಹ್ಮದ್ ಸಾಹಿಬ ಪ್ರಸ್ತುತಪಡಿಸಿದರು. ಜರ್ಮನ್ ಅನುವಾದ ಸೋಬಿಯ ನಾಸರಾ ಖಾನ್ ಸಾಹಿಬಾ ಪ್ರಸ್ತುತಪಡಿಸಿದರು.

ಅನಂತರ ಅಹ್ಮದಿ ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷೆ ತಸ್ನೀಮ್ ಅನ್‌ಗರ್ ಸಾಹಿಬಾ ತನ್ನ ಕಾರ್ಯ ಯೋಜನೆಯ ವರದಿ ಪ್ರಸ್ತುತಪಡಿಸುತ್ತ ಹೇಳಿದರು.

ಈ ವರ್ಷ ದೇಶದಾದ್ಯಂತದಿಂದ ಅಹ್ಮದಿ ವಿದ್ಯಾರ್ಥಿನಿಯರ ಸಮಾವೇಶ ನಡೆಸಲಾಗಿದೆ. ಜರ್ಮನಿಯಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ 681 ಆಗಿದೆ. ಅವರಲ್ಲಿ 809 ವಿಧ್ಯಾರ್ಥಿನಿಯರು ಇಂದು ಹುಝೂರ್ ಅನ್ವರ್ (ಅಬಿಅ) ಅವರ ಜೊತೆ ಕ್ಲಾಸ್‌ನಲ್ಲಿ ಶಾಮೀಲಾಗಿದ್ದಾರೆ. ಎಲ್ಲ ವಿದ್ಯಾರ್ಥಿಯರ ಪೈಕಿ 66 ಪ್ರತಿಶತ bachelor ಮಾಡುತ್ತಿದ್ದಾರೆ, 22%, ಸರಕಾರಿ ಶಿಕ್ಷಣ ವಿಭಾಗದ ಮೇರೆಗೆ ಪರೀಕ್ಷೆಗಳನ್ನು ಕೊಡುತ್ತಿದ್ದಾರೆ. 11% Master Degree ಮತ್ತು ಒಂದು ಪ್ರತಿಶತ (1%) P.hd ಗೋಸ್ಕರ ಪ್ರಯತ್ನಮಾಡುತ್ತಿದ್ದಾರೆ. ಹಾಗೂ ವಿದ್ಯಾರ್ಥಿನಿಯರು, Archetect, Medical science, Law ಮತ್ತು ಶಿಕ್ಷಕರ ತರಬೇತಿ ಹಾಗೂ ಇತರ ವಿಭಾಗಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಪ್ರಸಕ್ತ ವರ್ಷ ಅಹ್ಮದಿ ವಿದ್ಯಾರ್ಥಿನಿಯರ ಸಂಘದ ಅಡಿಯಲ್ಲಿ ನಡೆದ ಕಾರ್ಯಕ್ರಮಗಳನ್ನು ವಿವರಿಸುತ್ತಾ ಅವರು ಹೇಳಿದರು. ಅಲ್ಲಾಹನ ಅನುಗ್ರಹದಿಂದ 18 ಏಪ್ರಿಲ್ 2015 ರಂದು ಲಜ್ನ ಇಮಾಅಲ್ಲಾಹ್ ಅವರ ದ್ವಿತೀಯ ಶೈಕ್ಷಣಿಕ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಯಿತು. ಸದರ್ ಸಾಹಿಬ ಲಜ್ನ ಇಮಾಇಲ್ಲಾಹ್ ಜರ್ಮನಿಯವರಿಂದ ಅದರ ಉದ್ಘಾಟನೆಯಾಯಿತು. ಅದರಲ್ಲಿ ವಿಭಿನ್ನ ವೃತ್ತಿಗೆ ಸಂಬಂಧಿಸಿದ ಮಾಹಿತಿ ನೀಡಬಲ್ಲ 16 stall ಗಳನ್ನು ವಿದ್ಯಾರ್ಥಿನಿಯರು ಸ್ಥಾಪಿಸಿದರು. ಅದರ ಮುಕ್ತಾಯ ಹಂತದಲ್ಲಿ ಒಂದು ಸಮಾರಂಭ ಇಸ್ಲಾಮಿನಲ್ಲಿ ಶಿಕ್ಷಣ ಪ್ರಾಮುಖ್ಯತೆ ಶೀರ್ಷಿಕೆಯಿಂದ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸದಸ್ಯೆಯರ ಸಂಖ್ಯೆ 520 ಆಗಿತ್ತು. ಈ ವರ್ಷ ದ್ವಿತೀಯ ಶೈಕ್ಷಣಿಕ ವಸ್ತುಪ್ರದರ್ಶನ ಉತ್ತರ ಜರ್ಮನಿಯಲ್ಲಿ ಏರ್ಪಡಿಸಲಾಗುವುದು.

ಮತ್ತೊಂದು ಸಮಾರಂಭ ಹೆಂಬರ್ಗ್ ವಿಶ್ವವಿದ್ಯಾನಿಲಯದಲ್ಲಿ 8 ಮೇ 2015 ರಂದು ಏರ್ಪಡಿಸಲಾಯಿತು. ಅದರ ಶೀರ್ಷಿಕೆ "ಇಸ್ಲಾಂ ಧರ್ಮಕ್ಕೆ ಸುಧಾರಣೆಯ ಅಗತ್ಯವಿದೆಯೆ" ಆಗಿತ್ತು. ಅದರಲ್ಲಿ ಇಸ್ಲಾಂ ಧರ್ಮವನ್ನು ಧರ್ಮದ ನೆಲೆಯಲ್ಲಿ ಸುಧಾರಣೆಯ ಅಗತ್ಯವಿಲ್ಲ. ಆದರೆ ನಿಜವಾದ ಇಸ್ಲಾಂ ಧರ್ಮದ ಮಾರ್ಗವನ್ನು ತೋರಿಸಬಲ್ಲ ಒಬ್ಬ ಸುಧಾರಕನ ಅಗತ್ಯವಿದೆ. ಅದು ಹಝ್ರತ್ ಮಸೀಹ್ ಮೌಊದ್(ಅ) ರವರ ಆಗಮನದಿಂದ ಪೂರ್ಣಗೊಂಡಿದೆ. ಈ ಸಮಾರಂಭದಲ್ಲಿ 84 ಶ್ರೋತೃಗಳು ಹಾಜರಿದ್ದರು. ಯುವಕರು ಮತ್ತು ಮಕ್ಕಳಿಗಾಗಿ ಜಮಾಅತಿನ ಶೈಕ್ಷಣಿಕ ವಿಭಾಗದಡಿಯಲ್ಲಿ ಒಂದು Application ತಯಾರಿಸಲಾಗಿದೆ. ಅದು ಪವಿತ್ರ ಖುರ್‌ಆನಿನ ಜರ್ಮನ್ ಅನುವಾದ ಕುರಿತಾಗಿದೆ. ಇನ್ನು ನಾಲ್ಕು Applications ಮೇಲೆ ಕೆಲಸ ನಡೆಯುತ್ತಿದೆ. ಅದರಲ್ಲಿ ಪವಿತ್ರ ಖುರ್‌ಆನ್‌ನ ವಚನಗಳು, ಹದೀಸುಗಳು, ಹಝ್ರತ್ ಮಸೀಹ್ ಮೌಊದ್(ಅ) ರವರ ಗ್ರಂಥಗಳಲ್ಲದೆ ಶೈಕ್ಷಣಿಕ ಪಠ್ಯ ಶಾಮೀಲುಗೊಳಿಸುವ ಯೋಜನೆಯಿದೆ. ಅದಲ್ಲದೆ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ತಯಾರಿಸುವ ಯೋಜನೆಯೂ ಇದೆ. ಕೆಲವು ಪುಸ್ತಕಗಳು ಸಿದ್ಧಗೊಂಡಿವೆ.

ಅದಾದ ನಂತರ ಪಾರಾ ಸುಲ್ತಾನಾ ಸಾಹಿಬಾ (Brain tumor) Glioblastoma Multiforma ಕುರಿತು Research ಪ್ರಸ್ತುತಪಡಿಸಿದರು. ಅದರಲ್ಲಿ Hyperthermia ದಿಂದ cancer cell ನ ಚಿಕಿತ್ಸೆವಾ ಹೇಗೆ ಮಾಡಬಹುದಾಗಿದೆ. ಏಕೆಂದರೆ ಹೆಚ್ಚು ಉಷ್ಣಾಂಶದಿಂದ Tumor cells ನಿಧಾನವಾಗಿ ಬೆಳವಣಿಗೆ ಹೊಂದುತ್ತವೆ.

ಹುಝೂರ್ ಪ್ರಶ್ನಿಸಿದರು. ಈ ಕಾಯಿಲೆಯಲ್ಲಿ ರೋಗಿಗಳ ಶೇಕಡವಾರು ಪ್ರಾಮಾಣವೆಷ್ಟು? ಪುರುಷರಲ್ಲಿ ಅಥವಾ ಸ್ತ್ರೀಯರಲ್ಲಿ ವ್ಯತ್ಯಾಸವಿದೆಯೇ?

ಮಹಪಾರಾ ಸಾಹಿಬಾ ಹೇಳಿದರು. ಒಂದು ಲಕ್ಷ ಜನರಲ್ಲಿ, ಇಬ್ಬರು, ಮೂವರಿಗೆ ಇರುತ್ತದೆ. ಮತ್ತು ಪುರುಷರಲ್ಲಿ ಅಧಿಕವಾಗಿದೆ. ಆದರೆ ವಿಶೇಷವಾದ ವ್ಯತ್ಯಾಸವೇನಿಲ್ಲ. ಎರಡನೆಯದಾಗಿ ಅದರ ಕಾರಣಗಳು ಸಹ ತಿಳಿದಿಲ್ಲ. Research ಆಗಿತ್ತು. ಆದರೆ ಯಶಸ್ಸೇನೂ ದೊರೆಯಲಿಲ್ಲ.

ಹುಝೂರ್ ಹೇಳಿದರು. ಕಾರಣಗಳಿದ್ದರೆ ಚಿಕಿತ್ಸೆ ಸುಲಭವಾಗುತ್ತದೆ. ಈ Conventional treatment ಎಂದರೇನು? ಹೋಮಿಯೋಪೆಥಿಕ್, ಎಲೋಪೆಥಿಕ್, ಅಥವಾ ಆಯುರ್ವೇಧಿಕ್ ಆಗಿದೆ.

ಮಹಪಾರಾ ಸಾಹಿಬ್ ಹೇಳಿದರು. ರೋಗ ಕಂಡು ಹಿಡಿದ ನಂತರ Survival ಕೆಲ ತಿಂಗಳದ್ದಾಗಿರುತ್ತದೆ. ಆಗ ಹುಝೂರ್ ಹೇಳಿದರು. Conventional ಎಂದರೆ ಎಲೋಪೆಥಿಕ್ ಕನ್‌ವೆನ್‌ಷನ್ ಆಗಿದೆಯೇ, ಹೋಮಿಯೊಪೆಥಿಕ್ Tumor ನ್ನು Dissolve ಮಾಡುತ್ತದೆ.

ಮಹಪಾರಾ ಸಾಹಿಬ್ ಹೇಳಿದರು. ಒಂದು ವಿಶೇಷವಾದ Needle (ಸೂಜಿ) ಇದೆ. ಅದನ್ನು ಹೊರಗಿನಿಂದ ಒಳಗೆ ಹಾಕುತ್ತಾರೆ ಮತ್ತು ಅದರ ಉಷ್ಣಾಂಶ 50 ಡಿಗ್ರಿಯವರೆಗೆ ಮಾಡಲಾಗುತ್ತದೆ. ಅದರಿಂದ ಟ್ಯೂಮರಿನ ಸೆಲ್ಸ್ ಸಂಪೂರ್ಣವಾಗಿ ಅಂತ್ಯಗೊಳ್ಳುತ್ತವೆ. ಆಗ ಹುಝೂರ್ ಕೇಳಿದರು. Tumor ಒಳಗಡೆಯಿದ್ದರೆ? ಆಗ ಮಹಪಾರಾ ಸಾಹಿಬಾ ಹೇಳಿದರು. ಆಗ ಒಂದು ವಿಶೇಷವಾದ Needle ಅನ್ನು ಒಳಗೆ ಸೇರಿಸುತ್ತಾರೆ.

ಹುಝೂರ್ ಹೇಳಿದರು. ಅದು Malignant ಆದರೆ ಇತರ ಕಡೆ ಹರಡುವುದಿಲ್ಲವೆ. ಮಹಪಾರಾ ಹೇಳಿದರು. ಟ್ಯೂಮರ್ ಸೆಲ್ಸ್ ಮೊದಲೇ Penetrate ಆಗಿರುತ್ತದೆ.

ಹುಝೂರ್ ಕೇಳಿದರು. ಅದರ Result ಏನು ಬಂದಿದೆ?

ಮಹಪಾರಾ ಸಾಹಿಬಾ ಹೇಳಿದರು. ಅದರ ಫಲಿತಾಂಶ ಸಕಾರಾತ್ಮಕವಾಗಿವೆ, ಗೀಝುನ್ ಅಲಿ ನಾನು ಓದುತ್ತಿದ್ದೇನೆ. ಅಲ್ಲಿ ಮೂರು ರೋಗಿಗಳ ಮೇಲೆ ಅದನ್ನು ಪರೀಕ್ಷಿಸಲಾಗಿದೆ. ಅದರಿಂದ ಅವರ ಜೀವನ ಅವಧಿ ಹೆಚ್ಚಾಗಿತ್ತು. ಅವರ ಟ್ಯೂಮರ್ ಕುಗ್ಗಿದ್ದವು. ಆದರೆ ಆ ಮೂವರು ನಿಧನಗೊಂಡಿದ್ದರು.

ಹುಝೂರ್ ಮುಗುಳ್ನಗುತ್ತಾ ಒಬ್ಬ ಅರಸನ ಕುದುರೆಯ ಉದಾಹರಣೆ ಹೇಳಿದರು. ಒಬ್ಬ ಅರಸನ ಕುದುರೆಯಿತ್ತು. ಅದು ಅವನಿಗೆ ಬಹು ಪ್ರಿಯವಾಗಿತ್ತು. ಅದು ಅಸ್ವಸ್ಥವಾಯಿತು. ದೀರ್ಘ ಅತಿ ದೀರ್ಘ ಶ್ವಾಸ ಎಳೆಯತೊಡಗಿದ, ಸಾಯಲು ತೊಡಗಿದಾಗ ಅವನು ವೈದ್ಯರನ್ನು ಕರೆಸಿದ. ಎಲ್ಲರೂ ಹೇಳಿದರು ಇದು ಸಾಯುತ್ತದೆ. ಅರಸನು ಅವರೆಲ್ಲರನ್ನು ಚಪ್ಪಲಿ ಏಟು ಹಾಕಿದನು. ಆಗ ಮತ್ತೊಬ್ಬ ವೈದ್ಯನನ್ನು ಕರೆಸಿದರು. ಅವನು ಅವರಿಗೆ ಆದ ಗತಿಯನ್ನು ತಿಳಿದಿದ್ದರಿಂದ ಹೇಳಿದನು. ಮಹಾರಾಜರೇ ನಿಮ್ಮ ಕುದುರೆ ಗಾಢ ಮೌನವಹಿಸಿದೆ. ಅದಕ್ಕೆ ಯಾವ ಬೇನೆಯೂ ಇಲ್ಲ. ಈಗ ಅದು ಆರಾಮದಿಂದ ಮಲಗಿಕೊಂಡೇ ಇರುವುದು. ಅರಸನು ಹೇಳಿದನು. ಸತ್ತು ಹೋಗಿದೆ ಎಂದು ಏಕೆ ಹೇಳುವುದಿಲ್ಲ. ಆಗ ಅವನು ಹೇಳಿದನು. ಇದನ್ನು ನೀವು ಹೇಳತ್ತಿದ್ದೀರಿ ಹೊರತು ನಾನು ಹೇಳಲಿಲ್ಲ. ಇದು ನಿಮ್ಮ Research ನ ಫಲಿತಾಂಶಗಳಾಗಿವೆ. ತುಂಬ ಒಳ್ಳೆಯದಾಗಿ ಬಂದರು ಮತ್ತು ಮೂವರೂ ರೋಗಿಗಳು ಆರಾಮವಾಗಿದ್ದು ನಿಧನ ಹೊಂದಿದರು.

**(ಮುಂದುವರಿಯುವುದು)**

### ಜಲ್ಸ ಸಾಲಾನ ಖಾದಿಯಾನ್ 2020 ರದ್ದುಗೊಳಿಸಲಾಗಿದೆ

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಎಲ್ಲಾ ಸದಸ್ಯರು ಹಾಗೂ ಹುದ್ದೆದಾರರಿಗೆ ತಿಳಿಸುವುದೇನೆಂದರೆ ಈ ವರ್ಷ ಡಿಸೆಂಬರ್ 25 ರಿಂದ 27ರವರೆಗೆ ನಡೆಯ ಬೇಕಾದ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಖಾದಿಯಾನ್ ದೇಶದಾದ್ಯಂತ ಹರಡಿರುವ ಸಾಂಕ್ರಾಮಿಕ ರೋಗ ಕೊರೋನದಿಂದ ಹಾಗೂ ಪ್ರವಾಸಿಗಳಿಗೆ ಆಗುವ ಅಸೌಕರ್ಯದ ಕಾರಣದಿಂದ ಹುಝೂರ್(ಅಬಿಅ)ರವರ ನಿರ್ದೇಶನದ ಪ್ರಕಾರ ರದ್ದುಗೊಳಿಸಲಾಗಿದೆ.

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಮರ್‌ಕಝಿಯಾ, ಖಾದಿಯಾನ್)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.